ಜೀವನ

ಸಂಪಾದಕ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ವಿ ಷ ಯ ಸೂ ಚಿ ಕೆ

ಜೀ ವ ನ

ಉತ್ತಮ ರೀತಿಯ ಸಾಹಿತ್ಯ ದೃಷ್ಟಿಯ ಕನ್ನಡ ಮಾಸಪತ್ರಿಕೆ

ಮೈಸೂರು ವಿದ್ಯಾ ಖಾತೆಯವರಿಂದ T.B.C. 117 of 39-40 ಪ್ರಕಾರ ಶಾಲೆಗಳಿಗೆ ಮಂಜೂರಾಗಿದೆ.

ವರ್ಷದ ಚಂದಾ ಅಂಚೆ ವೆಚ್ಚ ಸೇರಿ ಐದು ರೂಪಾಯಿ

ಜೀವನ

ಸಂಪಾದಕ :
ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪುಟ ೧೯] ಅಕ್ಟೋಬರ್ ೧೯೫೮ [ಸಂಚಿಕೆ ೬

ಸಂಸಾರ ಸಾಧನೆ

ಶ್ರೀ ಮೃತ್ಯುಂಜಯ, ಶಾಸ್ತ್ರೀಮಠ

ವಿಧಿಯಣಕ ಕಪುಕುಹಕ ಕೇಕಾರವಂಗಳಿಗೆ
ಮಧುವೆಂದು ವಿಷವಿಡುವ ಖಳರ ಸಂಘಂಗಳಿಗೆ
ಸದಯತೆಯ ಸೋಗಿನಿಂದೆದೆಗಿರಿಯುವಾಳ್ಗಳಿಗೆ
ಪಡೆದರ್ತಿಯಿಂ ರಮಿಪಬಸುವಸುರೆ ಪೀರ್ವಳಿಗೆ

ಎದೆಯೊಡೆದು ಕರಗದಿರು
ಹದಮೀರಿ ಮರುಗದಿರು
ಹೆದರಿ ಬಲು ಹಲುಬದಿರು

ಶಾರ್ದೂಲದೋಲ್ ಸಿಡಿದು ಗರ್ಜಿಸೊಮ್ಮೆ
ಸಿಡಿವ ಫಣಿಯೋಲ್ ಜಡೆನುಕೊಡಹು ಮ ಸದೊಮ್ಮೆ !

ಸಂಸ್ಕೃತಿಯ ಜ೦ಜಡವು ವಿಧಿಮಸೆಯುವಸಿಯಾಟ
ವಿಸ್ಮೃತಿಯ ಸರಸದೊಳಗನುದಿನವು ಬಿಸದೂಟ
ಸಂಸ್ಕೃತಿಯ ತೊಡಕಿನಲಿ ಕಡೆತನಕ ಮಿಡುಕಾಟ
ಸತ್ಕರ್ಮ ಸದ್ವೃತ್ತಿ ತಿಳಿದವರ ಹುಡುಗಾಟ

ಗತಿಗಾಣದೊರಲದಿರು
ಮತಿಮಸಳಿ ತಿರುಗದಿರು
ಹತಿಗುರುಳಿ ಬೀಳದಿರು

ರುದ್ರ ಗಾಂಭೀರ್ಯದಿಂ ತಡೆದೀಕ್ಷಿಸೊಮ್ಮೆ
ಛಿದ್ರಿಸುತಲರಿಬಲವ ನುಗ್ಗ ಮಗುದೊಮ್ಮೆ !

ಲೋಕ ವ್ಯವಹಾರಗಳ ಸನ್ಯಸಿಸಲೆಳಸದಿರು
ಏಕಾಂತ ಸಾಧನೆಗೆ ಕಾಂತಾರಕೋಡದಿರು
ಸಾಕು ಸಾಕೆಂದೆನಿಸಿ ಬಿಸಿಯುಸಿರನೆಳೆಯದಿರು
ಮೂಕ ಯಾತನೆಯಿಂದ ಬಲುಬಳಲಿ ಬಾಡದಿರು

ತೋಡಿದ್ದೆ ತೋಡದಿರು
ತೌಡನ್ನೆ ಕುಟ್ಟದಿರು
ಛಲವನೀಡಾಡದಿರು

ಸರಿಯೆನಿಸಿ ಸಂಸಾರಯೋಗಿಯೆನಿಸೊಮ್ಮೆ
ಸಿರಿಯರಿತು ಪೌರುಷವ ಮೆರೆಯೊ ಮಗುದೊಮ್ಮೆ !

ಹೊಟ್ಟೆ ಕರುಳನೆತಿಂದು ಹಸಿವು ಹಿಂಗುತ್ತಿರಲಿ
ಬಿಟ್ಟ ಕಂಗಳು ಸೇದಿ ದೀಪ ಹಚ್ಚುತ್ತಿರಲಿ
ಪ್ರಾಣ ನಡುನೆತ್ತಿಯಲಿ ನೃತ್ಯಮಾಡುತ್ತಿರಲಿ
ಶ್ವಾಸಗಳು ಎದೆಯುರಿಗೆ ತಿದಿಯನೊತ್ತುತ್ತಿರಲಿ

ನರಗಳುರುಲೆಳೆಯುತಿರೆ
ಶಿರಹರಿದು ಬೀಳುತಿರೆ
ಕರಗಳುರಿದೇಳುತಿರೆ

ಧೃತಿಯ ಕ್ಷುರಿಕಾಹತಿಗೆ ಬಿದಿಯನೆಳೆಯೊಮ್ಮೆ
ಮತಿ ವಿಜೃಂಭಣೆಯನ್ನು ಮೆರೆಯೊ ಮಗುದೊಮ್ಮೆ !

ಗೋಮುಖದ ನಟನೆಯಲಿ ಮಿತ್ರ-ವ್ಯಾಘ್ರಗಳಿರಲಿ
ಮಡದಿಮಕ್ಕಳು ಮುಳಿದು ರಾಕ್ಷಸಗಳಾಗಿರಲಿ
ಅಧಿಕಾರ ದರ್ಪ ದೂಷಿತ ಪ್ರೇತ ಮದಿಸಿರಲಿ
ಸರಿಕರೆದೆಗಿಚ್ಚು ನಿಗಿನಿಗಿಸಿ ಬಾನ್‌ಮುಟ್ಟಿರಲಿ

ಭೂಕಂಪವುಸೆದಿರಲಿ
ಜಲನಿಧಿಯು ಜ್ವಲಿಸಿರಲಿ
ಪ್ರಳಯ ಘೋರ್ಗರೆದಿರಲಿ

ಅಪ್ರತಿಹತಾತ್ಮ ತೇಜಸವ ಬೆಳಗೊಮ್ಮೆ
ಎದೆಯಾಳದಿಂ ನಗೆಯ ತುಳುಕು ಮಗದೊಮ್ಮೆ !

ಕರ್ಮ ಕೌಶಲ ಧರ್ಮವೃತ್ತಿ ಹಿತಮಿತಭಾಷೆ
ನಿರ್ಮಲತೆಗಭಿಮಾನ ಸೌಂದರ್ಯದಭಿಲಾಷೆ
ಪರಮೋನ್ನತಪ್ರೀತಿ ಕೆಚ್ಚು ಕಟ್ಟೆದ ಕಾಸೆ
ಚರಮ ಧ್ಯೇಯಾಸಕ್ತಿ ಸತ್ಯಕ್ಕೆ ಪ್ರತ್ಯಾಸೆ

ದಿನದಿನವು ವಿಸ್ತರಿಸೆ
ನವಶಕ್ತಿಯಂಕುರಿಸೆ
ದಿವ್ಯತೆಯು ಝುಂಕರಿಸೆ

ಲೌಕಿಕೋದ್ಯಾನ ಸುರಭೂಜವೆನಿಸೊಮ್ಮೆ

ಇಹಪರದ ಹವಣರಿತು ಮುಕ್ತಿಪದವನೆ ಕುರಿತು
ಸಫಲ ಕರ್ಮಾನಂದ ತನ್ಮಯಕೆ ಮೈಮರೆತು

ಸಂಸಾರ ಸಾಧನೆಗೆ ತೊಡಗು ಮಗುದೊಮ್ಮೆ !

ಎವೆಯಿಕ್ಕುವುದರೊಳಗೆ . . . . .

ಮೂಲ: ದಿ॥ ಮೌಲಾನಾ ಅಬುಲ್ ಕಲಾಮ್ ಅಜಾದ್

ಅನು: ಶ್ರೀ ಮುತ್ತೂರು ಕೃಷ್ಣಮೂರ್ತಿ

ಬಾಗದಾದ್ ನಗರದಲ್ಲಿ 'ಹಜರತ್ ಷೇಕ್ ಜಾನೀದ್ ಬಾಗದಾದೀ'ಯ ಹೆಸರು ಎಷ್ಟು ಪ್ರಸಿದ್ಧವೋ ಅಷ್ಟೇ ಪ್ರಸಿದ್ಧ ಇಬ್ನ-ಸಾಬಾದ್‌ನ ಹೆಸರು. ಮೊದಲನೆಯವರು ಅವರ ಪರಮಸಾತ್ವಿಕ ಗುಣಕ್ಕೆ; ಎರಡನೆಯವನು ಕಳ್ಳತನ, ದರೋಡೆ, ಸುಲಿಗೆಗೆ!

ಕಳೆದ ಹತ್ತು ವರ್ಷಗಳಿಂದ ಇಬ್ನ-ಸಾಬಾದ್, 'ಮದಾಯನ್ ಜೈಲಿ'ನಲ್ಲಿದ್ದ. ಜನ ಅವನ ಸುಲಿಗೆಯಿಂದ ಸುರಕ್ಷಿತರಾಗಿ ನೆಮ್ಮದಿಯಾಗಿದ್ದರು. ಆದರೇನು? ಎಲ್ಲಾದರೂ ಒಂದು ಭಾರೀ ಕಳ್ಳತನವೋ ದರೋಡೆಯೋ ಆದರೆ "ಇಬ್ನ-ಸಾಬಾದ್ ಬಂದುಬಿಟ್ಟನೋ!" ಎಂದುಕೊಳ್ಳುತಿದ್ದರು. ಅವನ ಹೆಸರಿಗೆ ಇಡೀ ಬಾಗದಾದ್ ನಗರವೇ ನಡುಗುತಿತ್ತು!

ಇಬ್ನ-ಸಾಬಾದಿನ ಕುಲಗೋತ್ರಗಳು ಯಾರಿಗೂ ಗೊತ್ತಿಲ್ಲ. ಹಿಂದೊಮ್ಮೆ ಮೊದಲಬಾರಿಗೆ ಆತನನ್ನು ಪೋಲೀಸ್ ಠಾಣೆಗೆ ಕರೆದೊಯ್ಯಲಾಗಿದ್ದಾಗ ಅವನು ಬಾಗದಾದಿಗೆ ಸೇರಿದವನಲ್ಲವೆಂದು ತಿಳಿಯಿತು. ಅವನ ತಂದೆ ತಾಯಿಯರು 'ದೂಸ್' ಎಂಬಲ್ಲಿಂದ ವ್ಯಾಪಾರಿಗಳ ತಂಡದೊಂದಿಗೆ ಬರುತ್ತಿದ್ದರೆಂದೂ ಮಾರ್ಗದಲ್ಲಿ ವ್ಯಾಧಿಪೀಡಿತರಾಗಿ ಮಡಿದರೆಂದೂ ತಿಳಿಯಿತು. ವ್ಯಾಪಾರಿಗಳು ಈ ಬಾಲಕ ಇಬ್ನ-ಸಾಬಾದಿನ ಮೇಲೆ ಮರುಕಗೊಂಡು ಬಾಗದಾದಿಗೆ ಕರೆದಕೊಂಡು ಬಂದುಬಿಟ್ಟರು. ಇದು ಅವನು ಮೊದಲಬಾರಿ ಸೆರೆಗೆ ಹೋಗಲು ಎರಡು ವರ್ಷ ಮುಂಚೆ ನಡೆದ ಸಂಭವ.

ಈ ಎರಡು ವರ್ಷಗಳ ಕಾಲ ಅವನೆಲ್ಲಿದ್ದ, ಏನು ಮಾಡುತ್ತಿದ್ದ ಎಂಬುದೆಲ್ಲ ಯಾರಿಗೂ ಗೊತ್ತಿಲ್ಲ. ದಸ್ತಗಿರಿಯಾದಾಗ ಅವನಿಗೆ ವಯಸ್ಸು ಹದಿನೈದು. ಪೋಲೀಸು ಠಾಣೆಗೆ ಕರೆದುಕೊಂಡು ಬಂದರು. ಜಗುಲಿಯಮೇಲೆ ಮಲಗಿಸಿದರು. ಛಡಿಯಲ್ಲಿ ಮೈಮುರಿಯ ಹೊಡೆದು ಆಗಲೇ ಬಿಡುಗಡೆಯನ್ನೂ ಮಾಡಿಬಿಟ್ಟರು.

ಈ ಛಡಿ ಏಟು ಬಿದ್ದಮೇಲೆ ಇಬ್ನ-ಸಾಬಾದಿನಲ್ಲಿ ಒಂದು ಮಾರ್ಪಾಟು ಆಯಿತು. ಆ ಮೊದಲು ಸಣ್ಣಪುಟ್ಟ ಕಳ್ಳತನ ಮಾಡುವುದಕ್ಕೂ ಹೇಡಿಯಂತೆ ಹೆದರುತ್ತಿದ್ದ. ಪುಕ್ಕನಾಗಿದ್ದ. ಈಗ ಎಂತೆಂತಹ ದರೋಡೆಗಳನ್ನೂ ಧೈರ್ಯವಾಗಿ ನಡೆಸುತಿದ್ದ, ಕೆಲವೇ ದಿನಗಳಲ್ಲಿ ಭಾರೀ ಕಳ್ಳನೆಂದೂ, ಅತ್ಯಂತ ಧೈರ್ಯಶಾಲಿಯೆಂದೂ ಹೆಸರು ತೆಗೆದ!

ಈಗೆಲ್ಲ ಸಾಧಾರಣ ಕಳ್ಳತನ ಅವನಿಗೆ ಬೇಡ. ಮೊದಲಿನಂತೆ ಹೊಟ್ಟೆಗಾಗಿ ರೊಟ್ಟಿ ಕದಿಯುವದು ಹೋಯಿತು. ಕಳ್ಳತನವನ್ನು ಕಸಬನ್ನಾಗಿಟ್ಟುಕೊಂಡು 'ಇದು ನನ್ನ ವೃತ್ತಿ' ಎಂದುಕೊಂಡು ಮಾಡಿದ. ಮಳಿಗೆ ಅಂಗಡಿಯತ್ತ ಈಗ ಕಣ್ಣೆತ್ತಿಯೂ ನೋಡುವುದಿಲ್ಲ ಅವನು. ಚಿನ್ನ ಬೆಳ್ಳಿಯ ಅಂಗಡಿಗಳಿಗೇ ಕೊಟ್ಯಧೀಶರ ಮನೆಗಳಿಗೇ ಹೊಗಲಾರಂಭಿಸಿದ.

ತೊಡಗಿದ ಕಾರ್ಯದಲ್ಲಿ ಜಯಪಡೆಯಲೇ ಬೇಕೆಂದು ಸಾಧಿಸಿದ. ಯುದ್ಧವೀರರ ಧೈರ್ಯ ಅವನೆದೆಯಲ್ಲಿ ಮೂಡಬೇಕೆಂದು ಸತತವಾಗಿ ಯತ್ನಿಸಿದ. ನಿಜಕ್ಕೂ ಬುದ್ಧಿಶಾಲಿಯಾದ ಬಾಗದಾದಿನವರೆಲ್ಲ ಅವನನ್ನು "ಕಳ್ಳ"ನೆಂದೇ ಕಂಡರು. ಅದಕ್ಕಾಗಿಯೇ ಅವನು ಅದರಲ್ಲಿ ಪ್ರಸಿದ್ಧನಾಗಿ ಬಿಡಬೇಕೆಂದು ಸಂಕಲ್ಪಮಾಡಿದ!

ಕೆಲವೇ ದಿನಗಳಲ್ಲಿ ಇಬ್ನ-ಸಾಬಾದ್‌ನ ದುಷ್ಕೃತ್ಯಗಳು ಸರಕಾರದ ಗಮನ ಸೆಳೆಯಿತು. ಅವರು ಇವನ ವಿಷಯದಲ್ಲಿ ಕ್ರಮತೆಗೆದುಕೊಳ್ಳಬೇಕಾಯಿತು. ಕೊನೆಗೊಂದು ದಿನ ನ್ಯಾಯಾಸ್ಥಾನದಲ್ಲಿ ಹಾಜರಾದ. ಆರೋಪಕ್ಕೆ ಗುರಿಯಾದ ಅವನ ಒಂದು ಕೈಯೇ ಅದಕ್ಕೆ ಆಹುತಿಯಾಯಿತು!

ಇಬ್ನ-ಸಾಬಾದಿನ ಒಂದು ಕೈ ಹೋದದ್ದೇನೋ ಸರಿ. ಆದರೆ ಅವನ ದುಷ್ಕೃತ್ಯಗಳು! ಒಂದಕ್ಕೆ ಸಾವಿರವಾದವು. ರಾವಣನ ತಲೆಹೋದ ಹೋದಂತೆ ಹೊಸ ತಲೆಗಳು ಹುಟ್ಟಿಕೊಳ್ಳುತ್ತಿದ್ದುವಂತೆ! ಹಾಗೆ ಇವನ ಕೈಯಿಂದ ರಕ್ತತೊಟ್ಟಿಕ್ಕಿದೆಡೆಯಲ್ಲಿ ನೂರಾರು ಕಳ್ಳರು ಹುಟ್ಟಿಕೊಂಡರು. ಇಡೀ ಬಾಗದಾದಿನ ಕಳ್ಳರನ್ನೆಲ್ಲ ಒಂದುಗೂಡಿಸಿದ. ನಗರನಗರಗಳನ್ನೇ ಲೂಟಿ ಮಾಡತೊಡಗಿದ. ಬಂದೂಕಗಳೊಂದಿಗೇ ಕೊಳ್ಳೆ ಹೊಡೆದ. ಕಳ್ಳರ ಗುಂಪಿನ ಮುಖಂಡನಾದ. ಕಳ್ಳರ 'ಸೇನೆ'ಯೊಂದನ್ನೇ ತಯಾರಿಸಿದ. ಸರಕಾರವನ್ನು ಗುಡುಗಾಡಿಸಿಬಿಟ್ಟ.

ಒಂದುಬಾರಿ ವಿಧಿ ಅವನಿಗೆ ಕೈಕೊಟ್ಟಿತು. ಅವನ ಗೆಳೆಯರೆಲ್ಲ ಅವರವರ 'ಕೆಲಸ'ದ ಮೇಲೆ ಹೋಗಿದ್ದರು. ತಾನೂ ಓಡಿಹೋಗಲು ಸಿದ್ಧನಾಗಿರಲಿಲ್ಲ. ಸರಕಾರದ ಪೋಲೀಸರು ಬಂದು ಹಿಡಿದುಬಿಟ್ಟರು, ಅವನನ್ನು. ಈ ಬಾರಿ ಕೊಳ್ಳೆಹೊಡೆದ ಅಪರಾಧಕ್ಕಾಗಿ ಖೈದಿಯಾದ. ವಿಚಾರಣೆ ನಡೆಯಿತು. ಮರಣದಂಡನೆಗೆ ಗುರಿಯಾದ. ಇಬ್ನ–ಸಾಬಾದ್ ಇದನ್ನು ನಿರೀಕ್ಷಿಸಿರಲಿಲ್ಲ. ಈಗೇನು ಮಾಡುವದು? ಅವನ ಬುದ್ಧಿ ಕೆಲಸಮಾಡಿತು. ನ್ಯಾಯಾಧೀಶನಿಗೆ ತಿಳಿಸಿದ: ಈ ಬಾರಿ ನನ್ನನ್ನು ಬಿಟ್ಟುಬಿಡುವುದಾದರೆ ತನ್ನ ಗುಂಪಿನವರನ್ನೆಲ್ಲ ತೋರಿಸಿ ಕೊಡುತ್ತೇನೆ! ಇದರ ಪರಿಣಾಮವೇನು? ಅವನನ್ನು ನಂಬಿದ್ದ ನೂರಾರು ಜನ ಮೃತ್ಯುವಿಗೆ ತುತ್ತಾದರು. ಅವನಾದರೂ ಏನು ಸುಖವಾಗಿದ್ದನೆ? ಜೀವಾವಧಿ ಶಿಕ್ಷೆಗೆ ಗುರಿಯಾದ.

* * *

ಬೇಸಗೆಯ ಒಂದು ರಾತ್ರಿ. ನಡುನಿಶಿ. ಒಬ್ಬಾತ ಮೈಮೇಲೆ ಮುಸುಕು ಹಾಕಿಕೊಂಡು ಮೌನವಾಗಿ ಮೆಲ್ಲನಡಿಯಿಡುತ್ತ ಹೋಗುತ್ತಿದಾನೆ. ಬೀದಿಯ ಒಂದು ಮೂಲೆಯಲ್ಲಿ ತಿರುಗಿ ಪಾದಚಾರಿಗಳ ರಸ್ತೆಯಲ್ಲಿ ನಿಂತ. ನಿಂತು ನಿರಾಳದ ಒಂದು ನಿಟ್ಟುಸಿರುಬಿಟ್ಟ. ಆವರೆಗೆ ಧಾರಾಳವಾಗಿ ಬಿಡದೆ ಕಟ್ಟಿದ್ದ ಅವನ ಉಸಿರು ರೈಲೆಂಜಿನ್ನು ಉಗುಳುವ ಹಬೆಯಂತೆ ಹೊರ ಹೊರಟಿತು.

ಆಗಸದತ್ತ ಒಮ್ಮೆ ಕತ್ತೆತ್ತಿ ನೋಡಿದ. ತನಗೆ ತಾನೇ ಹೇಳಿಕೊಂಡ. "ಮಾರನೇ ಜಾವ ಮುಗಿಯುತ್ತ ಬಂದಿದೆ. ಇಂದು ನನ್ನ ಕೆಲಸದಲ್ಲಿ ನಾ ಜಯ ಹೊಂದು ವುದು ಸಂಶಯವೇ!"

ಯಾರು ಇವನು ಎಂದು ವಾಚಕರಿಗೆ ಹೇಳ ಬೇಕಾಗಿಲ್ಲವಷ್ಟೆ? ಇಬ್ನ-ಸಾಬಾದೇ. ಹತ್ತು ವರ್ಷ ಸೆರೆ ವಾಸ ಅನುಭವಿಸಿ ಹೊರಗಡೆ ತಪ್ಪಿಸಿಕೊಂಡು ಬಂದ ದಿನ. ಹೊಸಜೀವನದ ಮೊಟ್ಟಮೊದಲ ದಿನ. ಪ್ರಾರಂಭಿಸಿಯೇ ಬಿಟ್ಟ ತನ್ನ ಹಿಂದಿನ ಕಸಬಿಗೆ.

'ಇನ್ನು ನಿಧಾನಕೂಡದು' ಎಂದು ದಶದಿಕ್ಕು ಗಳಿಂದಲೂ ಬರುವ ಸಪ್ಪಳದತ್ತಲೇ ಕಿವಿಗೊಟ್ಟು ಕೇಳುತ್ತ ಅಡಿಮೇಲಡಿ ಇಡುತ್ತ 'ಫುಟ್‌ಪಾತ್'ನ ಪಕ್ಕದ ಉದ್ದವಾದ ಗೋಡೆಯ ಪಕ್ಕದಲ್ಲೇ ನಡೆದ. ಇದೇನಿದು? ದೊಡ್ಡಬಾಗಿಲು! 'ಗರಕ್' ಎಂಬ ಈ ಬಡಾವಣೆ ಶ್ರೀಮಂತರ, ವ್ಯಾಪಾರಿಗಳ ನೆಲವೀಡು. ದೊಡ್ಡದೊಡ್ಡ ರತ್ನವ್ಯಾಪಾರಿಗಳೂ ಇರುವ ಸ್ಥಳ ಅದು. ಶ್ರೀಮಂತರ ಮನೆ ಅಥವಾ ದೊಡ್ಡ ವ್ಯಾಪಾರ ಸ್ಥಳ ಎರಡರಲ್ಲೊಂದಾಗಿರಬೇಕು ಎಂದು ಭಾವಿಸಿ ಇಬ್ನ-ಸಾಬಾದ್ ಅತ್ತನಡೆದ. ಬಾಗಿಲಮೇಲೆ ಕೈ ಇಟ್ಟ. ಇದೇನು? ತತ್‌ಕ್ಷಣ ಬಾಗಿಲು ತೆರೆದು ಕೊಂಡಿತು. ಒಳಗೆ ಪ್ರವೇಶಿಸಿದನೋ ಇಲ್ಲವೋ ದೊಡ್ಡ ಚೌಕಿಗೆ ಬಂದು ಸೇರಿದ. ಸುತ್ತಲೂ ನಾಲ್ಕಾರು ಕೋಣೆಗಳಿವೆ. ನಡುವೆ ಒಂದು ದೊಡ್ಡ ಪಡಸಾಲೆ.

ಇಬ್ನ-ಸಾಬಾದ್ ಪಡಸಾಲೆಯತ್ತ ನಡೆದ. ಅದರಲ್ಲಿ ಒಂದು ವಿಶೇಷ! ಅದರ ಬಾಗಿಲಿಗೆ ಒಳಗಡೆಯಿಂದ ಅಗಳಿಹಾಕಿರಲಿಲ್ಲ! ಆಶ್ಚರ್ಯದಿಂದಲೇ ಅವನು ಒಳಗೆ ಹೋದ. ಆದರೆ ಆ ಪಡಸಾಲೆಯಲ್ಲಿ ಬೆಲೆಬಾಳುವ ಯಾವ ಪದಾರ್ಥಗಳೂ ಇರಲಿಲ್ಲ. ಒಂದೆಡೆಗೆ ಒಂದು ದೊಡ್ಡ ಮಂದಲಿಗೆ. ಅದರ ಮೇಲೆ ಚರ್ಮದ ಹೊದಿಕೆ ಯುಳ್ಳ ತಲೆದಿಂಬು. ಕ್ಷಣಕಾಲ ಇಬ್ನ-ಸಾಬಾದ್ ಭ್ರಮೆಗೊಂಡು ನಿಂತುಬಿಟ್ಟ!

ಒಂದು ಮೂಲೆಯಲ್ಲಿ ಮಾತ್ರ ಕೆಲವು ಕಂಬಳಿಗಳು ಅವಸರವಸರವಾಗಿ ಹಾಕಿಹೋದಂತೆ ಬಿದ್ದಿದ್ದವು. ಪಕ್ಕದಲ್ಲೇ ಕೆಲವು ಚರ್ಮದ ಟೋಪಿಗಳೂ ಇದ್ದವು.

ಹಲವು ವರ್ಷಗಳನಂತರ ಇವೊತ್ತೇ ಇಬ್ನ-ಸಾಬಾದಿಗೆ ತನ್ನ ಉದ್ಯೋಗ ನಡಸುವ ಅವಕಾಶ ಸಿಕ್ಕಿದ್ದು. ಮೊದಲನೇ ಸಲದ ಈ ಬೇಟೆಯೇ ಹೀಗಾಯಿತಲ್ಲಾ ಎಂದು ಅವನಿಗೆ ತುಂಬಾ ಕೋಪ ಬಂತು! ಕಂಬಳಿ ಗಳೇನೋ ಉತ್ತಮ ದರ್ಜೆಯವು. ಒಳ್ಳೇ ಬೆಲೆ ಬಂದೀತು. ಆದರೇನು ಪ್ರಯೋಜನ? ತಾನೇ ಒಂಟಿಗ. ಒಂದೇ ಕೈನವ. ಥೇ! ಇದರಮನೆ ಹಾ ...... ಇಷ್ಟು ದೊಡ್ಡ ಮನೇಲಿ ಕತ್ತೆಗೆ ಕೂಡ ಹೊದಿಸಲಾಗದಷ್ಟು ಒರಟಾದ ದಪ್ಪವಾದ ಕಂಬಳಿ ಗಳು ಮಾತ್ರ ಇರಬೇಕೆ?

ರಾತ್ರಿಬೇರೆ ಕಳೆಯುತ್ತ ಬಂದಿದೆ. ಬೇರೆ ಜಾಗಕ್ಕೆ ಹೋಗುವುದಕ್ಕೂ ಇನ್ನು ಹೊತ್ತಿಲ್ಲ. ಇನ್ನೇನು ಮಾಡು ವುದು? .... ಅದರಲ್ಲೇ ಒಂದನ್ನು ಕೆಳಗೆ ಹಾಸಿ ಕೈಲಾದಷ್ಟನ್ನು ಗಂಟುಕಟ್ಟಿ ಹೊತ್ತುಕೊಂಡು ಹೋಗುವುದೆಂದು ತೀರ್ಮಾನಿಸಿದ.

ಕಂಬಳಿಗಳು ಮೊದಲೇ ಹೇಳಿದಂತೆ ಒರಟು, ದಪ್ಪ. ಅವನ್ನು ಮಡಿಸಿ ಕಟ್ಟಿಡುವುದೂ ಅಷ್ಟೇನು ಸುಲಭ ಸಾಧ್ಯವಾದ ಕಾರ್ಯವಾಗಿರಲಿಲ್ಲ. ಎರಡೂ ಕೈ ಇರು ವವರಿಗೇ ಕಷ್ಟ. ಪಾಪ ಒಂದೇ ಕೈ ಇರುವ ಈತ ಹೇಗೆ

ಕಟ್ಟೆಯಾನು? ಬಹಳ ಪ್ರಯಾಸಪಟ್ಟು ತನ್ನ ಹಲ್ಲುಗಳ ಸಹಾಯದಿಂದ ಕಟ್ಟತೊಡಗಿದ. ತುಂಡಾದ ಪೊಳಕ್ಕೆ ತುದಿಯಿಂದ ಗಂಟುಹಾಕಿದ ಒಂದು ತುದಿಯನ್ನು ಅದುಮಿ ಹಿಡಿದ. ಆದರೂ ಎಷ್ಟು ಕಷ್ಟಪಟ್ಟರೂ ಅವನಿಂದಾಗಲಿಲ್ಲ. ಪ್ರಯತ್ನಿಸಿ ಪ್ರಯತ್ನಿಸಿ ಸುಸ್ತಾದ.

ಈ ಸಂದರ್ಭದಲ್ಲೇ ಅವನು ಗಾಬರಿಯಾಗುವಂಥ ಒಂದು ಘಟನೆ ನಡೆಯಿತು. ದೂರದಲ್ಲಿ ಯಾರೋ ನಡೆದು ಬರುವಂತೆ ಅವನ ಸೂಕ್ಷ್ಮವಾದ ಕಿವಿಗಳಿಗೆ ಕೇಳಿಸಿತು.

ಒಂದು ಕ್ಷಣ ಮೌನ.

ಇದೇನು? ಯಾರೋ ಬಾಗಿಲಾಚೆ ನಿಂತಂತಿದೆ. ಇಬ್ನ ಸಾಬಾದ್ ಬೆದರಿ ಎದ್ದುನಿಂತ. ಅಡಿ ಎತ್ತಿಡುವುದರೊಳಗಾಗಿ ಆ ಬಾಗಿಲು ತೆರೆಯಿತು. ಒಬ್ಬಾತ ಕೈಯಲ್ಲಿ ದೀಪ ಒಂದನ್ನು ಹಿಡಿದುಕೊಂಡು ಅವನೆದುರಿಗೆ ಬಂದು ನಿಂತ. ಕೊರಳಿಂದ ಕಾಲಿನವರೆಗೆ ಉದ್ದವಾದ ನಿಲುವಂಗಿ ಧರಿಸಿದಾನೆ. ಸೊಂಟಕ್ಕೊಂದು ತುಂಡು ಸುತ್ತಿದಾನೆ. ತಲೆಯಲ್ಲಿ ಒಂದು ಟೋಪಿ. ಹುಬ್ಬುಗಳನ್ನು ಮುಚ್ಚುವಷ್ಟು ಕೆಳಗೆ ಬಂದಿತ್ತು ಆ ಟೋಪಿ.

ತುಂಬಾ ನಿಶ್ಯಕ್ತನಾಗಿರುವಂತೆ ಕಾಣುತ್ತಾನೆ. ಎತ್ತರವಾದ ಆಕೃತಿ. ಅದರಿಂದಾಗಿ ಸೊಂಟ ಕೊಂಚ ಬಾಗಿದೆ. ಆದರೆ ಅವನ ಮುಖದಲ್ಲಿ ನಿಶ್ಯಕ್ತಿಯ ಕುರುಹು ಕಾಣಿಸುತ್ತಿಲ್ಲ. ಕಂಗಳಲ್ಲಿ ನವಚೇತನ ಹೊರಹೊಮ್ಮುತ್ತಿದೆ. ಕಪೋಲಗಳು ಬತ್ತಿಹೋಗಿವೆ. ಆದರೂ ಮುಖದಲ್ಲಿಯ ಕಾಂತಿ ನೋಡುವವರನ್ನು ಚಕಿತರನ್ನಾಗಿಸುತ್ತದೆ. ಸಾತ್ವಿಕ ಕಳೆ ತುಂಬಿ ಹರಿಯುತ್ತಿದೆ. ದೇಹಶಕ್ತಿ ಇಲ್ಲದಿದ್ದರೂ ಆತ್ಮಶಕ್ತಿಯಲ್ಲಿ ಎಲ್ಲರಿಗಿಂತ ಒಂದು ಕೈ ಮೇಲಾಗಿದಾನೆ ಎನ್ನುವಂತಿತ್ತು, ಆತನ ಪ್ರಕಾಶಮಾನವಾದ ಎರಡು ಕಂಗಳನ್ನು ನೋಡಿದಾಗ. ಕಂಗಳು ನೆಪಮಾತ್ರಕ್ಕೆ ಹೊರಗೆ ಕಾಣಿಸುತ್ತಿದ್ದವೇ ವಿನಾ ಆತನ ದೃಷ್ಟಿ ಈ ಲೋಕದಲ್ಲೇ ಇದ್ದಂತೆ ಕಾಣಿಸುತ್ತಿರಲಿಲ್ಲ. ಯೋಗನಿದ್ರೆಯಲ್ಲಿರುವವರಂತೆ ಗಂಭೀರವಾದ ನೋಟ ಬೀರುತಿತ್ತು.

ಒಂದುಗಳಿಗೆ ಆತ ದೀಪವನ್ನೆತ್ತಿ ಹಿಡಿದು ಇಬ್ನ-ಸಾಬಾದನನ್ನು ನೋಡುತ್ತ ನಿಂತ. ಅನಂತರ ತಿಳಿಯಬೇಕಾದ್ದನ್ನು ತಿಳಿದುಕೊಂಡುಬಿಟ್ಟವನಂತೆ ಮುಂದೆ ಅಡಿ ಇಟ್ಟ.

ದೀಪವನ್ನು ಬದಿಗೆ ಇಟ್ಟು ಹೇಳಿದ:—"ಗೆಳೆಯ! ದೇವರು ನಿನ್ನಮೇಲೆ ಅನುಗ್ರಹ ಇಡಲಿ. ನೀ ಮಾಡಬೇಕಾಗಿರುವ ಕಾರ್ಯವನ್ನು ದೀಪ, ಸಹಾಯಕ ಇಲ್ಲದೆ ಪೂರೈಸಲಾಗದು. ಇದೋ ದೀಪ ಇಲ್ಲಿದೆ. ಸಹಾಯಕನಾಗಿ ನಾನಿದೇನೆ. ದೀಪದ ಬೆಳಕಿನಲ್ಲಿ ನಾವಿಬ್ಬರೂ ಕೂಡಿ ಈ ಕೆಲಸವನ್ನು ಧೈರ್ಯದಿಂದ ಬೇಗ ಮಾಡಿ ಮುಗಿಸೋಣ.

ಪುನಃ ಕ್ಷಣಕಾಲ ಮೌನ.

ಆತ ಪುನಃ ಹೇಳಿದ:–"ನೀ ತುಂಬಾ ದಣಿದವನಂತಿದೀಯಾ. ನೆತ್ತಿಯೆಲ್ಲಾ ಬೆವರಿನಲ್ಲಿ ತೊಯ್ದಿದೆ . . . ಓ! ಬಾಗಿಲು ಮುಚ್ಚಿದೆ. ಅದರಿಂದಲೇ ಇಷ್ಟು ಸೆಖೆ! ಏನು ಕಷ್ಟ ನೋಡು! ಮನುಷ್ಯ ಹೊಟ್ಟೇಪಾಡಿಗಾಗಿ ಎಷ್ಟೆಲ್ಲ ಕಷ್ಟಕ್ಕೊಳಗಾಗಬೇಕು! ಅದೋ ಚಾಪೆಹಾಸಿದೆ. ತಲೆದಿಂಬೂ ಇದೆ. ನೀ ಕೊಂಚ ವಿಶ್ರಾಂತಿ ತೆಗೆದುಕೋ. ಅಷ್ಟರಲ್ಲಿ ನೀನು ಅರ್ದಂಬರ್ದ ಮುಗಿಸಿರುವ ಈ ಕೆಲಸವನ್ನು ನಾ ಪೂರೈಸಿ ಬಿಡುತ್ತೇನೆ!"

ಇಷ್ಟುಹೇಳಿ ಇಬ್ನ-ಸಾಬಾದನನ್ನು ಕೂಡುವಂತೆ ಸಂಜ್ಞೆಮಾಡಿದ. ನೆತ್ತಿಯ ಮೇಲಣ ಬೆವರನ್ನು ತನ್ನ ಕರವಸ್ತ್ರದಲ್ಲಿ ಒರೆಸಿದ. ಮಾತ್ರವಲ್ಲ; ಇನ್ನೂ ನಿಂತೇ ಇದ್ದ ಅವನ ತೋಳನ್ನು ಅದುಮಿ ಕೂಡುವಂತೆ ಮಾಡಿದ!

ಇಷ್ಟೂ ಕ್ಷಣಮಾತ್ರದಲ್ಲಿ ನಡೆದುಹೋಯಿತು. ಇದೆಲ್ಲಾ "ಏನು? ಏಕೆ ಹೀಗೆ?" ಎಂದು ಇಬ್ನ-ಸಾಬಾದ್‌ಗೆ ಯೋಚನೆಮಾಡಲು ಅವಕಾಶವಾಗಲಿಲ್ಲ. ತನ್ನ ಪರಿವೆಯೇ ಇಲ್ಲದೆ ಶಿಲೆಯಂತೆ ನಿಂತುಬಿಟ್ಟ! ಮಂತ್ರಕ್ಕೆ ಕಟ್ಟುಬಿದ್ದ ಸರ್ಪದಂತೆ ಆ ಹೊಸ ಮನುಷ್ಯ ಹೇಳಿದಂತೆಲ್ಲಾ ಮಾಡಿದ.

ಅನಂತರವೇ ಆ ಹೊಸಬ, ತಾ ಹೇಳಿದಂತೆ ಕೆಲಸ ಮಾಡುವುದರಲ್ಲಿ ತೊಡಗಿದ್ದನ್ನು ಇಬ್ನ-ಸಾಬಾದ್ ಕಂಡ.

ಇಬ್ನ-ಸಾಬಾದ್ .ಕೂಡಿಟ್ಟ ಮೂಟೆಗೆ ಆತ ಮತ್ತೆರಡು ಕಂಬಳಿಗಳನ್ನು ಸೇರಿಸಿದ. ಅದನ್ನು ಎರಡು ಗಂಟುಗಳನ್ನಾಗಿ ಮಾಡಿದ. ಒಂದು ದೊಡ್ಡದು-ಮತ್ತೊಂದು ಸ್ವಲ್ಪ ಚಿಕ್ಕದು. ಕೂಡಲೇ ಏನೋ ನೆನಪು ಬಂದವನಂತೆ, ತನ್ನ ಸೊಂಟಕ್ಕೆ ಸುತ್ತಿದ್ದ ತುಂಡನ್ನೂ ತೆಗೆದು ಒಂದು ಗಂಟಿನಲ್ಲಿ ಸೇರಿಸಿ ಕಟ್ಟಿದ. ಆಮೇಲೆ ಇಬ್ನ-ಸಾಬಾದಿನ ಬಳಿಗೆ ಬಂದು, "ಗೆಳೆಯ!

ನಿನ್ನನ್ನು ನೋಡಿದರೆ ತುಂಬಾ ಹಸಿದವನಂತಿದೀಯಾ! . . . ಆದ್ದರಿಂದ ಇಲ್ಲಿಂದ ಹೊರಡುವ ಮುನ್ನ ಕೊಂಚ ಹಾಲುತೆಗೆದುಕೊಂಡು ಹೋದರೆ ಒಳ್ಳೆಯದು!” ಎಂದ. ಇಬ್ನ-ಸಾಬಾದ್ ಬಾಯ್ತೆರೆದು ಏನೂ ಹೇಳುವುದಕ್ಕೆ ಮುಂಚಿತವಾಗಿಯೇ ಆತ ಸರಸರನೆ ಒಳಕ್ಕೆ ಹೋದ.

ಈಗ ಇಬ್ನ-ಸಾಬಾದ್ ಪುನಃ ಒಂಟಿಯಾದ.

ಆ ಹೊಸಬನ ನೋಟ, ಆತ ನಡೆದುಕೊಂಡ ವಿಧದ ಬಗ್ಗೆ ಅವನು ಅಲ್ಲಿದ್ದತನಕ ಇಬ್ನಸಾಬಾದಿಗೆ ಆಲೋಚಿಸಲು ಆಗಲಿಲ್ಲ. ಈಗಲೀಗ ಅವನ ಬುದ್ಧಿ ಆಲೋಚಿಸತೊಡಗಿತು: ನಡೆದ ಸಂಭವವನ್ನು ತಾನು ಅವರೆಗೆ ಕಂಡ ಎಲ್ಲವನ್ನೂ ಹೇಗೆ ಕಾಣುತ್ತಿದ್ದನೋ ಆ ಬಗ್ಗೆ ಹೇಗೆ ಚಿಂತಿಸುತ್ತಿದ್ದನೋ ಹಾಗೇ ಅದೇ ದೃಷ್ಟಿಯಿಂದ ಕಂಡು ಚಿಂತಿಸಿದ. ಯೋಚಿಸಿದ:—“ಇವನೂ ನಮ್ಮಲ್ಲಿ ಒಬ್ಬನಾಗಿಯೇ ಇರಬೇಕು. ಇಲ್ಲೇ ಹತ್ತಿರದಲ್ಲಿರುವವನಾಗಿದ್ದಾನು. ಈ ಮನೆಯಲ್ಲಿ ಅಷ್ಟಾಗಿ ಜನರಿರಲಾರರು ಎಂಬುದನ್ನು ಅರಿತಿದ್ದಾನು. ಅದರಿಂದಲೇ ಧೈರ್ಯವಾಗಿ ದೀಪವನ್ನು ತಂದಿದಾನೆ. ಆದರೆ ಅವನಿಗೆ ಮುಂಚಿತವಾಗಿಯೇ ನಾ ಬಂದಿರುವುದನ್ನು ಕಂಡು ನನಗೇ ಸಹಾಯಕನಾದರೆ ಇದರಲ್ಲಿ ಒಂದು ಪಾಲು ತನಗೂ ಸಿಕ್ಕೀತು ಎಂಬ ಬಯಕೆಯಿಂದ ಹೀಗೆ ಮಾಡುತ್ತಿದಾನೆ. . . . . .” ಹೀಗೆಂದೆಲ್ಲ ಇಬ್ನ-ಸಾಬಾದ್ ಯೋಚಿಸುತ್ತಿದ್ದಂತೆಯೇ ಆ ಮನುಷ್ಯ ಒಂದು ಮರದ ಮರಿಗೆಯಲ್ಲಿ ಹಾಲಿನೊಂದಿಗೆ ಬಂದ. ಬಂದು, “ಇದೋ ನಿನಗೆ ಹಾಲು ತಂದಿದೇನೆ. ಕುಡಿದು ಹಸಿವು ದಾಹಗಳನ್ನು ಅಡಗಿಸಿಕೊ!” ಎಂದ.

ಇಬ್ನಸಾಬಾದ್ ಒಂದೇ ಗುಟುಕಿಗೆ ಮರಿಗೆಯನ್ನು ಖಾಲಿ ಮಾಡಿದ. ಮರುಕ್ಷಣ ಅವನಿಗೆ ಕೆಲಸದ ಚಿಂತೆ ಹತ್ತಿತು. “ಇಲ್ಲಿ ನೋಡು ನಾನು ನಿನಗಿಂತ ಮೊದಲು ಬಂದವನು; ಕೆಲಸದಲ್ಲಿ ತೊಡಗಿದವನು. ನ್ಯಾಯವಾಗಿ ನೋಡಿದರೆ ನಿನಗಿದರಲ್ಲಿ ಒಂದು ಪಾಲೂ ಸಿಗಕೂಡದು. ಕೇಳುವುದಕ್ಕೆ ಹಕ್ಕೂ ಇಲ್ಲ ನಿನಗೆ. ಆದರೂ ನಿನ್ನ ಶಕ್ತಿ ಸಾಮರ್ಥ್ಯಕ್ಕಾಗಿ ನಿನ್ನನ್ನೂ ನನ್ನ ದರೋಡೆಯುವರ ಗುಂಪಿಗೆ ಸೇರಿಸಿಕೊಳ್ಳುತ್ತೇನೆ. ನಿನಗಿಚ್ಛೆಯಿದ್ದರೆ ನಿನ್ನೊಂದಿಗೆ ನಿರಂತರ ಒಪ್ಪಂದವೊಂದನ್ನು ಮಾಡಿಕೊಳ್ಳಲೂ ನನ್ನ ಅಭ್ಯಂತರವಿಲ್ಲ. ಆದರೆ ಇಂದಿನದರಲ್ಲಿ ನಿನಗೆ ಪಾಲು ಕೊಡಲಾಗದು. ಈಗಲೇ ಹೇಳಿಬಿಟ್ಟೆ. ಹಿಂದಿನಿಂದ ತಕರಾರು ಗಿಕರಾರು ಮಾಡೀಯೇ ಜೋಕೆ; ಹೌದು! ಏಕೆಂದರೆ ಇಂದಿನ ಬೇಟೆ. . . . .” ಆತ ಮಾತು ಮುಗಿಸುವಷ್ಟರಲ್ಲಿ ಆ ಹೊಸಬ ನಡುವೆ ಬಾಯಿ ಹಾಕಿ, “ಗೆಳೆಯಾ ಯಾಕೆ ವೃಥಾ ಮನಸ್ಸಿಗೆ ವ್ಯಥೆ ಹಚ್ಚಿಕೊಳ್ಳುತ್ತೀಯಾ? ಬಾ! ಮೊದಲು ಕೆಲಸ ಮುಗಿಸೋಣ. . . . ಎರಡು ಗಂಟೆನ್ನಾಗಿ ಮಾಡಿದೇನೆ. ದೊಡ್ಡದನ್ನು ನಾ ಹೊತ್ತುಕೊಳ್ಳುತ್ತೇನೆ; ಚಿಕ್ಕದನ್ನು ನೀ ಹೊತ್ತುಕೋ. ನನ್ನ ಪಾಲು, ನಿನ್ನ ಪಾಲು ಎಂಬುದರ ಬಗ್ಗೆ ಹಿಂದಿನಿಂದ ನೋಡಿಕೊಳ್ಳೋಣ.”

“ಈಗಲೇ ಏನವಸರ? ನೀ ನನ್ನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಬಯಸಿದೆಯಲ್ಲಾ! ನನಗೂ ಸಮ್ಮತ. ನೀನು ನಿರಂತರವಾಗಿ ಒಂದು ಒಪ್ಪಂದ ಮಾಡಿಕೊಳ್ಳಲಪೇಕ್ಷಿಸಿದರೆ ನಾನು ಅದಕ್ಕೆ ತಕ್ಕಂತೆ ಬದ್ಧನಾಗಿರುತ್ತೇನೆ!”

“ಬಹಳ ಸಂತೋಷ. ನಾ ಯಾರು ಎಂದು ನಿನಗೆ ಗೊತ್ತಿಲ್ಲ. ಗೊತ್ತಾದರೆ ಹಿಗ್ಗುವೆ. ನಾಡಿನಾದ್ಯಂತ ಹುಡುಕಿದರೂ ನಿನಗೆ ನನ್ನಂಥ ಮುಖಂಡ ಸಿಕ್ಕಲಾರ.”

ಹೀಗೆಂದು ಹೇಳುತ್ತಲೇ ಇಬ್ನ-ಸಾಬಾದ್ ತನ್ನ ಮೂಟೆಯನ್ನು ಹೊತ್ತುಕೊಂಡ. ಅದು ತುಂಬಾ ಹಗುರಾಗಿತ್ತು. ಇಬ್ಬರೂ ಹೊರಬಂದರು. ಮೊದಲೇ ಹೊಸಬನ ಬೆನ್ನು ಕೊಂಚಬಾಗಿತ್ತು. ಭಾರಬಿದ್ದ ಕೂಡಲೇ ಮತ್ತಷ್ಟು ಬಾಗಿತು. ಮೊದಲೇ ಕತ್ತಲಲ್ಲಿ ನಡೆಯುವದು ಕಷ್ಟ; ಹೊರೆಯನ್ನೂ ಹೊತ್ತುಕೊಂಡು . . . ಕೇಳಬೇಕೆ? ಆದರೆ ಇಬ್ನ-ಸಾಬಾದಿನ ಹೊರೆ ಹಗುರಾಗಿತ್ತು. ಆಸಾಮಿಯೂ ಜೋರಾಗಿದ್ದ. ವೇಗವಾಗಿ ನಡೆದ. ಆಗಾಗ್ಗೆ ಹಿಂದೆ ನೋಡುತ್ತ ಅವನನ್ನೂ ವೇಗವಾಗಿ ಬರುವಂತೆ ಸಂಜ್ಞೆಮಾಡುತಿದ್ದ.

ಆದರೆ ಈ ಭಾರದ ಮೂಟೆ ಆ ಹೊಸಬನ ಶಕ್ತಿಗೆ ಮೀರಿದ್ದಾಗಿತ್ತು. ಆದ್ದರಿಂದ ಎಡವುತ್ತ ತಡವುತ್ತ ಹೋಗಿ, ಬಿದ್ದುಬಿಡುವನೋ ಎಂಬಂತಿದ್ದ. ಹಾಗೂ ಎಡವಿದ. ಅಂಗಾಲಿನ ಚರ್ಮ ಕಿತ್ತು ಬಂತು. ರಕ್ತ ಸೋರಿತು. ಒಳ್ಳೇ ಏಟು. ಆದರೂ ನಿಲ್ಲಲಿಲ್ಲ. ಸೋತವನಂತೆ ತೋರಲಿಲ್ಲ. ಇಬ್ನ-ಸಾಬಾದಿನೊಂದಿಗೆ ಸರಿಯಾಗಿ ನಡೆಯಲು ಯತ್ನಿಸಿದ. ಆದರೆ ಇಬ್ನ-ಸಾಬಾದೋ ಅವನ ನಡಿಗೆಯಿಂದ ತೃಪ್ತನಾಗಲಿಲ್ಲ. ಸಂಜ್ಞೆಯಿಂದ ಮೊದಲು ಮಾಡಿದವ ಈಗ ಬೈಯಲಾರಂಭಿಸಿದ. ರೇಗಾಡಿದ. ಇಷ್ಟರಲ್ಲಿ ಒಂದು ಸೇತುವೆ ಬಂದಿತು. ಅದು ಸ್ವಲ್ಪ ಉಬ್ಬು; ಬಲಹೀನವಾದ

ದೇಹ; ಹೊರೆಹೊತ್ತು ನಡೆದುಬಂದ ಆಯಾಸ ಬೇರೆ. ಹೊಸಬನಿಂದ ಸಂಭಾಳಿಸಲಾಗಲಿಲ್ಲ. ಈ ಬಾರಿ ತನ್ನನ್ನೂ ಮೀರಿ ಕೆಳಗೆ ಬಿದ್ದೇಬಿಟ್ಟ. ಕೂಡಲೇ ಏಳುವದಕ್ಕೂ ಯತ್ನಿಸಿದ. ಆದರೆ ಅಷ್ಟರಲ್ಲಿ ಇಬ್ನ-ಸಾಬಾದ್ ಅವನತ್ತ ಧಾವಿಸಿಬಂದು ಕಾಲಲ್ಲಿ ಬಲವಾಗಿ ಒದೆದು, 'ಭಾರವನ್ನೂ ಹೊರಲಾಗದು ಎಂದಮೇಲೆ ಯಾತಕ್ಕಾಗಿ ಹೊತ್ತು ತಂದೆ?" ಎಂದು ಚೀರಿದ.

ಬಹಳ ಪ್ರಯಾಸದಿಂದ ಆತ ಎದ್ದ. ಅವನ ಮುಖದಲ್ಲಿ ವೇದನೆಯಾಗಲಿ, ಶ್ರಮವಾಗಲಿ ವ್ಯಕ್ತವಾಗುವುದಕ್ಕೆ ಬದಲಾಗಿ ನಾಚಿಕೆ ಕಂಡುಬಂದಿತು. ಮೂಟೆಯನ್ನು ಹೊತ್ತುಕೊಂಡು ಹೊರಟೇಬಿಟ್ಟ.

ನಗರದ ಹೆಚ್ಚು ಜನಸಂಚಾರವಿಲ್ಲದೆಡೆಯೊಂದನ್ನು ತಲುಪಿದ ಕೂಡಲೇ ಇಬ್ಬರೂ ಅಲ್ಲಿ ನಿಂತರು. ಅಲ್ಲಿ ಪಾಳುಬಿದ್ದ ಒಂದು ಕಟ್ಟಡ. ತೊಟ್ಟಿ ಒಂದಿದ್ದಿತು. ಅದರ ಬಳಿ ಹೋದರು. ಇಬ್ನ-ಸಾಬಾದ್ ನಿಂತ. ಹೊಸಬನನ್ನೂ ಮೂಟೆಯನ್ನು ಕೆಳಗಿರಿಸುವಂತೆ ಹೇಳಿದ. ಮರುಕ್ಷಣ ತೊಟ್ಟಿಯನ್ನು ಒಂದೇ ನೆಗೆತಕ್ಕೆ ನೆಗೆದು ಮನೆ ಒಳಹೊಕ್ಕ. ಹೊಸಬ ಆ ಎರಡು ಮೂಟೆಗಳನ್ನು ಒಳಕ್ಕೆಸೆದ. ಅನಂತರ ಅವನೂ ತೊಟ್ಟಿಯನ್ನು ನೆಗೆದು ಒಳಕ್ಕೆ ಹೋದ.

ಆ ಕಟ್ಟಡದ ನೆಲಮಾಳಿಗೆಯಲ್ಲಿ ಒಂದು ಕೋಣೆ. ಇಬ್ನ-ಸಾಬಾದ್ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದಂದಿನಿಂದ ಅಲ್ಲೇ ವಾಸವಾಗಿದ್ದ. ಆದರೆ ಆತ ಆ ಕೋಣೆಯೊಳಕ್ಕೆ ಹೋಗಲಿಲ್ಲ. ಏಕೆಂದರೆ ಆ ಹೊಸಬನಿಗೆ ತನ್ನ ಕೋಣೆಯನ್ನು ತೋರಿಸಲು ಇಚ್ಛಿಸಲಿಲ್ಲ. ಪಕ್ಕದಲ್ಲಿದ್ದ ಒಂದು ಕಲ್ಲನ್ನು ನೋಡಿ ಇಬ್ನ-ಸಾಬಾದ್ ಅದರಮೇಲೆ ಕುಳಿತ. ಹೊಸಬ ಅಲ್ಲೇ ಒಂದೋರದಲ್ಲಿ ನಿಂತು ದಣಿವಾರಿಸಿಕೊಳ್ಳುತಿದ್ದ.

ಇದ್ದಕ್ಕಿದ್ದಂತೆ ಆ ಹೊಸಬ ಇಬ್ನಸಾಬಾದಿನ ಬಳಿಗೆ ಬಂದು, "ಸಖ! ನಾ ನನ್ನ ಕೆಲಸವನ್ನು ಮುಗಿಸಿಬಿಟ್ಟೆ. ಹೋಗಿಬರುತ್ತೇನೆ. ಈ ಕಾರ್ಯವನ್ನು ಮಾಡುವಾಗ ನನ್ನಲ್ಲಿ ತೋರಿದ ಬಲಹೀನತೆಗಾಗಿಯೂ, ನಿಧಾನಕ್ಕಾಗಿಯೂ ಅದರಿಂದ ನಿನಗಾದ ಅನಾನುಕೂಲಕ್ಕಾಗಿಯೂ ತುಂಬ ನಾಚುತ್ತೇನೆ; ಅದಕ್ಕಾಗಿ ನಿನ್ನಲ್ಲಿ ಕ್ಷಮೆ ಬೇಡುತ್ತೇನೆ. ದೇವರು ಮಾಡುವ ಕೆಲಸವೂ ನಾವು ಮಾಡುವ ಕೆಲಸವೂ ಒಂದೇ ಆಗಿರುವುದು ಈ ಲೋಕದಲ್ಲಿ ಒಂದೇ. ಅದೇ ಒಬ್ಬರನ್ನೊಬ್ಬರು ಕ್ಷಮಿಸುವದು. ಆದರೆ ಈಗ ನಾನು ನಿನ್ನಿಂದ ಬೀಳ್ಕೊಂಡು ಹೋಗುವ ಮುನ್ನ ನಿನಗೆ ಒಂದು ವಿಷಯವನ್ನು ತಿಳಿಸಬಯಸುತ್ತೇನೆ. ನೀನು ಬಗೆದಿರುವ ಮನುಷ್ಯ ನಾ ಅಲ್ಲ. ಇಂದು ನೀ ನನ್ನನ್ನು ಕಂಡೆಯಲ್ಲ ಅಲ್ಲೇ ಅದೇ ಮನೆಯಲ್ಲಿ ನಾನಿದೇನೆ. ನೀನು ಕತ್ತಲೆಯಲ್ಲಿ ಕುಳಿತು ಶ್ರಮಪಡುತ್ತಿದ್ದುದನ್ನು ಕಂಡೆ. ನನ್ನ ಮನೆಗೆ ನೀ ಬಂದಮೇಲೆ ನೀನು ನನ್ನ ಅತಿಥಿಯಾದೆ. ಅತಿಥಿಗಳಿಗೆ ಸಹಾಯ ಮಾಡುವುದು ಮನೆಯವನ ಕರ್ತವ್ಯವಲ್ಲವೆ? ಆದರೆ ಒಂದೇ ಕೊರತೆ ನನ್ನನ್ನು ಬಾಧಿಸುತ್ತಿದೆ. ನೀ ನಮ್ಮ ಮನೆಗೆ ಬಂದಾಗ ನಿನಗೆ ತಕ್ಕ ಮರ್ಯಾದೆ ಮಾಡುವ ಗೌರವಿಸುವ ಯೋಗ್ಯತೆಯನ್ನು ನಾ ಪಡೆದುಕೊಂಡು ಬರಲಿಲ್ಲವಲ್ಲಾ ಎಂದು. ಅಂತೂ ಈಗ ನೀನು ನನ್ನ ಮನೆಯನ್ನು ನೋಡಿದ್ದಾಗಿದೆ.

ಎಂದಾದರೂ ಏನಾದರೂ ನಿನಗೆ ಅಗತ್ಯ ಬಿದ್ದಾಗ ನಿಸ್ಸಂಕೋಚವಾಗಿ ಬಾ! ಭಗವಂತನ ಅನುಗ್ರಹ ಆಶೀರ್ವಾದ ಎಂದೆಂದೂ ನಿನ್ನ ಮೇಲಿರಲಿ!"

ಇಷ್ಟನ್ನು ಹೇಳಿ ಆ ಹೊಸಬ, ಇಬ್ನ-ಸಾಬಾದಿನ ಕೈಗಳನ್ನೆತ್ತಿ ಕುಲುಕಿದ. ನಮಸ್ಕರಿಸಿದ. ಮರುಕ್ಷಣ ಅಲ್ಲಿಂದ ಹೊರ ಹೊರಟೇಬಿಟ್ಟ.

ಆತನೇನೋ ಹೋದ. ಆದರೆ ಇಬ್ನ-ಸಾಬದನ್ನು ಬೇರಾವ ಲೋಕದಲ್ಲೊ ಬಿಟ್ಟು ಹೋಗಿಬಿಟ್ಟ.

ಸೂರ್ಯ ಪಶ್ಚಿಮ ದಿಗಂತದತ್ತ ನಡೆದ. ಸಾಯಂಕಾಲದ ಸಮಯ. ಬಡವಬಲ್ಲಿದರೆಲ್ಲ ಅವರವರ ಗುಡಿಸಲು, ಸೌಧಗಳನ್ನು ಬಿಟ್ಟು ಗಾಳಿಸಂಚಾರಕ್ಕಾಗಿ ಹೊರ ಹೊರಟಿದಾರೆ. ಆದರೆ ಇಬ್ನ-ಸಾಬಾದ್ ಮಾತ್ರ ರಾತ್ರಿ ಆ ಹೊಸ ಮನುಷ್ಯ ಹೊರಟು ಹೋದಾಗ ಎಲ್ಲಿ, ಯಾವೆಡೆಯಲ್ಲಿ ಹೇಗೆ ಕುಳಿತಿದ್ದನೋ ಹಾಗೇ ಅಲ್ಲೇ ಅಲುಗಾಡದೆ ಕುಳಿತಿದಾನೆ. ರಾತ್ರಿ ತಂದ ಎರಡು ಮೂಟೆಗಳೂ ಇಟ್ಟಲ್ಲಿಯೇ ಇವೆ. ಅವನ ಮನಸ್ಸು ಆ ಹೊಸಬನ ಬಗ್ಗೆಯೇ ಚಿಂತಿಸುತ್ತಾ ಇದೆ. ಕಂಗಳೂ ತಮಗೆ ಕಾಣುವಷ್ಟು ದೂರ, ಆತ ಕಾಣುತ್ತಾನೋ ಎಂದು ನೋಡುತ್ತಿವೆ. ಆತ ಹೊರಟು ಹೋಗಿ ಹನ್ನೆರಡು ಗಂಟೆ ಕಳೆದಿದೆ. ಹಸಿವು ದಾಹಗಳ ಪರಿಯೇ ಇಲ್ಲದೆ ಕುಳಿತಿದಾನೆ. ಯಾವ ಭಯಕ್ಕಾಗಿ ಮೊದಲೆಲ್ಲ ಹೊರಕ್ಕೆ ಹೊರಡಲು ರಾತ್ರಿಯನ್ನೇ ಕಾಯುತ್ತಿದ್ದನೋ ಆ ಭಯ ಈಗ ಅವನನ್ನು ಬಿಟ್ಟುಹೋಗಿದೆ. ಅವನ ಅಂತಶ್ಚಕ್ಷುವಿನ ಮುಂದೆ ಆತನಕ ಸುಳಿಯುತ್ತಿದ್ದ ಯೋಚನೆಗಳು, ಮಾಡಬೇಕಾದ ಕೆಲಸ ಇತ್ಯಾದಿಗಳೆಲ್ಲದರೋಡೆಯಲ್ಲಿ ಈಗ ಆ ಹೊಸಬನ ಮುಖಮಾತ್ರ

ವಿರಾಜಮಾನವಾಗಿ ಬೆಳಗುತಲಿದೆ! ಈವರೆಗೆ ಅವನಿಗೆ ಸೂರ್ಯನನ್ನು ಕಂಡರಾಗುತ್ತಿರಲಿಲ್ಲ. ಈಗ ಸೂರ್ಯನ ಮೇಲೆ ಆವನಿಗೆ ಅಭಿಮಾನ ಹುಟ್ಟಿತು. ಮಾತ್ರವಲ್ಲ. ಜಗತ್ತಿನಲ್ಲಿ ಆ ಪ್ರೇಮ ಸೂರ್ಯ ಬೆಳಗುವಾಗ ಬರೀ ಹೊರಗಿನಃಕತ್ತಲೆ ಮಾಯವಾಗುವುದು ಮಾತ್ರವಲ್ಲದೆ ಒಳಗಿನ ಕತ್ತಲೆಯೂ ನೀಗಿ ಆತ್ಮಕ್ಕೂ ಬೆಳಕು ನೀಡುತ್ತದೆಂಬುದನ್ನು ಕಂಡುಕೊಂಡ.

ಪ್ರೇಮಸೂರ್ಯನ ಕಿರಣಗಳು ಇಬ್ನ-ಸಾಬಾದಿನ ಹೃದಯದ ಮೇಲೆ ಬಿದ್ದವು. ಅದೇಕ್ಷಣ ಆತ ಝುಗ್ಗನೆದ್ದ. ಕತ್ತಲಲ್ಲಿದ್ದವನು ಹೊರಗೆ ಬಂದ.

ಯೋಚಿಸಿ ಯೋಚಿಸಿದಂತೆ ಅವನ ಮನಸ್ಸಿನ ಹುಣ್ಣು ದೊಡ್ಡದಾಗುತ್ತ ಬಂತು. ತಾನು ಆವರೆಗೆ ಮಾಡಿದ ಕಾರ್ಯಗಳೊಂದೊಂದನ್ನೂ ಯೋಚಿಸಿದಂತೆ ಒಂದೊಂದು ಹುಣ್ಣುಹುಟ್ಟಿಕೊಂಡು ಸೂಜಿಯಿಂದ ಕುಕ್ಕುವಂತೆ . . . ಸೂರ್ಯ ಮುಳುಗಿದ. ಬಾಗದಾದ್ ನಗರದ ಗೋಪುರಗಳಿಂದ ಗಂಟೆಗಳು ಬಾರಿಸಿದವು . . .

ಇಬ್ನ-ಸಾಬಾದ್ ಹೊದಿಕೆಯೊಂದನ್ನು ಹೊದೆದುಕೊಂಡುಹೊರಟ. ಎಂದಿನಂತೆ ಅವನ ಕಾಲುಗಳು ಹಿಂದೇಟು ಹಾಕಲಿಲ್ಲ. ಕಂಗಳು ಅತ್ತ ಇತ್ತ ಹೊರಳಲಿಲ್ಲ. ಭಯವೆಂಬುದು ಅವನ ಬಳಿ ಸುಳಿಯಲೂ ಇಲ್ಲ. ಆಸ್ಥಾನದಲ್ಲಿ ಈಗ ಬೇರೊಬ್ಬ ಬಂದು ಕುಳಿತಿದಾನಲ್ಲ.

ನಿನ್ನೆ ರಾತ್ರಿ ಹೋದಲ್ಲಿಗೇ ಹೋದ. ಅದನ್ನು ಕಂಡುಹಿಡಿಯುವುದೂ ಕಷ್ಟವಾಗಲಿಲ್ಲ. ಪಕ್ಕದಲ್ಲೇ ಸೌದೆ ಅಂಗಡಿಯೊಂದಿತ್ತು. ಅಲ್ಲಿಗೆ ಹೋಗಿ ಆ ಮಾಲೀಕನನ್ನು, "ಅದೋ ಪಕ್ಕದಲ್ಲಿದೆಯಲ್ಲ, ಆ ದೊಡ್ಡ ಕಟ್ಟಡ, ಅಲ್ಲಿ ಯಾವ ವ್ಯಾಪಾರಿ ವಾಸಿಸುತ್ತಿದಾನೆ?" ಎಂದು ಕೇಳಿದ.

"ವ್ಯಾಪಾರಿಯೇ?" ಆಶ್ಚರ್ಯದಿಂದ ಕೇಳಿದ ಸೌದೆ ವ್ಯಾಪಾರಿ. "ನೀ ಈ ,ಊರಿನವನಲ್ಲವೆಂದು ತೋರುತ್ತೆ, ಇಲ್ಲೆಲ್ಲಿ ವ್ಯಾಪಾರಿ ಇದಾನೆ? ಈ ಮನೆಯಲ್ಲೇ ಹಜರತ್ ಷೇಕ್ ಜಾನೀದ್ ಬಾಗ್‌ದಾದೀ ಇರುವದು!" ಎಂದ.

ಇಬ್ನ-ಸಾಬಾದ್ ಆತನ ಹೆಸರು ಕೇಳಿದ್ದ. ಆದರೆ ಆ ತನಕ ಕಂಡಿರಲಿಲ್ಲ. ಕಾಣದವನ ಕೀರ್ತಿಯನ್ನು ಮಾತ್ರ ಕೇಳಿದ್ದ. ಕಟ್ಟಡದ ಕದ ಹಿಂದಿನ ರಾತ್ರಿಯಂತೆಯೇ ತೆರೆದಿದ್ದಿತು. ಒಳಗಡೆ ಹೋದ. ರಾತ್ರಿ ಕಂಡ ಅದೇ ಪಡಸಾಲೆ. ಹಾಗೇ ಇದೆ. ಅಲ್ಲಲ್ಲಿ ಚಾಪೆ, ದಿಂಬುಗಳು. ದಿಂಬೊಂದನ್ನೊರಗಿಕೊಂಡು ಆ ವಿಚಿತ್ರ ಮನುಷ್ಯ ಕುಳಿತಿದಾನೆ. ಮೂವತ್ತು ನಲವತ್ತು ಮಂದಿ ಅವನೆದುರು ಕುಳಿತಿದಾರೆ. ಅವನೇ ಷೇಕ್ ಜಾನೀದ್ ಬಾಗ್‌ದಾದೀ ಎಂದರಿಯಲು ಇಬ್ನಸಾಬಾದಿಗೆ ಕಷ್ಟವಾಗಲಿಲ್ಲ. ನಗರದ ಗೋಪುರಗಳು ಗಂಟೆ ಬಾರಿಸಿದ್ದು ನಿಂತಿತು. ಒಬ್ಬೊಬ್ಬರಾಗಿ ಎಲ್ಲರೂ ಹೊರಟರು. ಎಲ್ಲರೂ ಹೋದಕೂಡಲೇ ಇಬ್ನಸಾಬಾದ್ ಧಾವಿಸಿ ಬಂದು ಅವರ ಕಾಲುಗಳಮೇಲೆ ಬಿದ್ದ.

ಇಡೀ ಜೀವಮಾನದಲ್ಲಿ ತೇವವೆಂಬುದನ್ನೇ ಕಂಡರಿಯದ ಆತನ ಕಂಗಳಿಂದ ಈಗ ನೀರು ಧಾರಾಕಾರವಾಗಿ ಹರಿಯಿತು, ಇನ್ನು ಅವನ ಹೃದಯದ ಕಲ್ಮಶಕ್ಕೆಲ್ಲಿ ಅವಕಾಶ? ಅಶುದ್ಧವನ್ನು ಶುದ್ಧಮಾಡುವ ಗುಣ ನೀರಿಗೆ ಇದೆ ಎಂಬುದು ಲೋಕಕ್ಕೇ ತಿಳಿದಿರುವ ಸತ್ಯ ಅಲ್ಲವೆ?

ಷೇಕ್ ಜಾನೀದನು ಬಾಗಿ ಅವನಗಲ್ಲವನ್ನು ಹಿಡಿದು ಎತ್ತಿದರು. ಆತ ಎದ್ದುನಿಂತ, ಆದರೆ ಮಾತನಾಡಲು ನಾಲಿಗೆ ಏಳಲಿಲ್ಲ, ಇನ್ನು ಅದರ ಅಗತ್ಯವಾದರೂ ಏನು? ಕಂಗಳೇ ಮಾತನಾಡಿದಮೇಲೆ ಬಾಯಿ ಆಡುವುದರ ಅಗತ್ಯವಾದರೂ ಏನು?

* * *

ಇದು ನಡೆದು ಎಷ್ಟೋ ವರ್ಷಗಳಾದವು. ಹಿಂದಿನ ಇಬ್ನಸಾಬಾದ್ ಈಗ 'ಷೇಕ್ ಅಹಮದ್ ಬಿನ್ ಸಾಬಾದ್ ಆಗಿದಾನೆ. ಷೇಕ್ ಜಾನೀದನ ಮುಖ್ಯ ಶಿಷ್ಯರಲ್ಲಿ ಅವನೂ ಒಬ್ಬ. ಇಂದಿಗೂ ಷೇಕ್ ಜನ ಹೇಳುತ್ತಾರೆ, "ಹಲವರು ವರ್ಷಾನುಗಟ್ಟಲೆ ದಾಟಲಾಗದ ಮಾರ್ಗವನ್ನು 'ಇಬ್ನ-ಸಾಬಾದ್' ಎವೆಯಿಕ್ಕುವುದರೊಳಗಾಗಿ ದಾಟಿಬಿಟ್ಟ!" ಎಂದು.

[ನವನೀತದಿಂದ]

ಚಂಡಮಾರುತ

ಭಾಷಾಂತರ : ಶ್ರೀನಿವಾಸ

(ಮುಂದುವರಿದುದು)

ದೃಶ್ಯ ೨

ದ್ವೀಪದ ಇನ್ನೊಂದು ಭಾಗ

(ಸೌದೆಯ ಹೊರೆ ಒಂದನ್ನು ಹೊತ್ತು ಕ್ಯಾಲಿಬನ್ ಬರುತ್ತಾನೆ. ಗುಡುಗಿನ ಶಬ್ದ ಒಂದು ಕೇಳುತ್ತದೆ.)

ಕ್ಯಾಲಿಬನ್

ಎಲ್ಲ ಯಾದವು ಸೋಂಕುಗಳನು ನೇಸರು, ಕೆಸರು
ಕೊಚ್ಚೆ ಬಯಲುಗಳಿಂದ ಹೀರುವನು, ಅವು ಎಲ್ಲ
ಪ್ರಾಸ್ಪೆರನ ಮೇಲೆ ಬೀಳಲಿ; ಬಿದ್ದು ಅವನನು,
ಒಂದೊಂದು ಅಂಗುಲವು, ರೋಗಿಷ್ಟ ಮಾಡಲಿ.
ಅವನ ಭೂತಾಳುಗಳಿಗೆನ್ನ ನುಡಿ ಕೇಳುವುದು;
ಆದರೆಯು ನಾನವನ ಶಪಿಸದಿರಲಾರೆನು.
ಇಂತಿದ್ದು ಅವು, ಅವನು ಆಜ್ಞೆ ಮಾಡಿದ ಹೊರತು
ನನ್ನ ಜಿಗಟುವುದಿಲ್ಲ; ತುಂಟಾಟದಲಿ ನನ್ನ
ಅಂಜಿಸುವುದಿಲ್ಲ; ಕೆಸರೊಳಕೆ ಎಸೆಯುವುದಿಲ್ಲ;
ಇಲ್ಲವೇ ಕೊಳ್ಳಿಯಾಕಾರದಲಿ ಕತ್ತಲಲಿ
ದಾರಿತಪ್ಪಿಸಿ ಒಯ್ಯುವುದಿಲ್ಲ. ಇಂತಿದ್ದೇನು,
ಒಂದೊಂದು ಸಣ್ಣ ವಿಷಯಕು ನನ್ನ ಮೇಲೆ ಅವ
ಅವನು ಛೂಬಿಡುವನು. ಕೆಲವೇಳೆ ಅವುಗಳನು
ನನ್ನನಣಕಿಸಿ ನನ್ನ ಕುರಿತು ಮೊರೆದಾಮೇಲೆ
ನನ್ನ ಕಚ್ಚುವ ಕೋಡಗಗಳಾಗಿ, ಆಮೇಲೆ
ಬರಿಗಾಲು ನಾನಡೆವ ದಾರಿಯಲಿ ಉರುಳಿದ್ದು
ನಾ ಹೆಜ್ಜೆ ಇಕ್ಕಿದುದೆ ತನ್ನೊತ್ತಲ ಮುಳ್ಳುಗಳ
ನಿಮಿರಿಸುವ ಮುಳ್ ಹಂದಿಯಾಗಿ; ಕೆಲಸಮಯದಲಿ
ಸೀಳುನಾಲಗೆಯ ಹಾವುಗಳು ಪೂರಾ ನನ್ನ
ಸುತ್ತಿದುವೆ ಬುಸುಗುಟ್ಟಿ ಹುಚ್ಚು ಹಿಡಿಸಿವೆ ನನಗೆ.

(ಟ್ರಿಂಕ್ಯುಲೋ ಬರುತ್ತಾನೆ)

ಅಕೊ, ಅಲ್ಲಿ; ಅಕೊ ಅವನ ಒಂದು ಚೇತನ; ಇಲ್ಲಿ
ಬರುತಿಹುದು; ಸೌದೆ ತರುವುದರಲಿ ತಡಮಾಡಿದೆನೆ,
ಇದಕಾಗಿ ನನ್ನ ಕಾಡಲು; ನಾನು ಕೆಡೆಯುವೆನು,
ಅದು ನನ್ನ ಗಮನಿಸದೆ ಇಹುದು ಸಂಭವ.

ಟ್ರಿಂಕ್ಯುಲೋ

ಇಲ್ಲಿ ಗಾಳಿ ಮಳೆಯಿಂದ ತಡೆಯೋಕೆ ಗಿಡ ಪೊದೆ ಒಂದೂ ಇಲ್ಲ. ಬಿರುಮಳೆಯೋ ತಿರುಗಿ ಬರುವಂತೆ ಇದೆ. ಗಾಳೀಲಿ ಅದರ ಮೊರೆತ ಕೇಳಿಸುತ್ತಿದೆ. ಅಲ್ಲಿದೋ ಆ ಮೋಡ, ಅದೇ ಆ ದೊಡ್ಡದು, ಹೊಟ್ಟೇಲಿದೋ ಹೆಂಡ ಸುರೀತೇನೋ ಅನ್ನೋ ಪೀಪಾಯಿಯಂತೆ ಕಾಣುತ್ತದೆ. ಈ ಮೊದಲು ಗುಡುಗಿದ ಹಾಗೆ ತಿರುಗಿ ಗುಡುಗಿದರೆ ತಲೆ ಎಲ್ಲಿ ಮರೆಸಿಕೊಳ್ಳೋದು ಕಾಣಲಿಲ್ಲ. ಅದೇ ಆ ಮೋಡ ತಪ್ಪಲೆ ತಪ್ಪಲೆ ಸುರಿಯಬೇಕು, ಅಲ್ಲ ಇಲ್ಲಿ ಇದೇನು ಇಲ್ಲಿ? ಮೀನೇ ಮನುಷ್ಯನೇ? ಬದುಕಿದೆಯೋ ಸತ್ತಿದೆಯೋ? ಮೀನು; ವಾಸನೆ ಮೀನಿನದು. ಪೂರಾ ಹಳಸಿದ್ದು ಮೀನ ವಾಸನೆಯಂಥ ವಾಸನೆ. ಅಂಥಾ ಹೊಸದಲ್ಲದ ಒಂದು ರೀತಿ ಹುರಿದ ಮೀನು. ವಿಚಿತ್ರ ಮೀನಾಗಿದೆ ಇದು! ಈಗ ನಾನು ಇಂಗ್ಲೆಂಡಿನಲ್ಲಿದ್ದು—ಒಂದು ಸಲ ಅಲ್ಲಿದ್ದೆ—ಈ ಮೀನಿಗೆ ಬಣ್ಣ ಬಳಿಸಿದ್ದರೆ ಅಲ್ಲಿಯ ಹಬ್ಬದ ದಿನದ ಹುಚ್ಚ ಒಬ್ಬ ತಪ್ಪದೆ ಇದಕ್ಕೆ ಒಂದು ದುಡ್ಡು ಕೊಡುತಿದ್ದ. ಎಂತಹದೇ ವಿಚಿತ್ರ ಮೃಗವೂ ಅಲ್ಲಿ ಒಂದು ಮನುಷ್ಯನಾಗುತದೆ. ಕುಂಟ ಭಿಕ್ಷೆಗಾರನ ಕಷ್ಟಕ್ಕೆ ಒಂದು ಕಾಸು ಕೊಡೋದಿಲ್ಲ; ಇಂಡಿಯಾದವನೊಬ್ಬನ ಹೆಣ ನೋಡೋಕೆ ಹತ್ತುಕಾಸು ಸಿದ್ಧ. ಮನುಷ್ಯನಂತೆ ಕಾಲು ಇದಕ್ಕೆ! ಗರಿ ತೋಳಿನಂತೆ ಇವೆ. ನನ್ನಾಣೆ, ಬೆಚ್ಚನೆ ಜೀವ ಇದೆ! ನಾನೀಗ ನನ್ನ ಅಭಿಪ್ರಾಯವನ್ನು ಬಿಟ್ಟೆ; ಅದನ್ನು ಇಟ್ಟುಕೊಂಡಿಲ್ಲ; ಇದು ಏತರದೂ ಮೀನಲ್ಲ, ಈ ದ್ವೀಪದವಾಸಿ ಒಬ್ಬ ಮನುಷ್ಯ. ಇವನ ಮೇಲೆ ಈಗ ತಾನೆ ಸಿಡಿಲೆರಗಿರಬೇಕು. (ಗುಡುಗು.) ಅಯ್ಯೋ ಈ ಮಳೆ ತಿರುಗಿ ಬಂತು. ನನಗೆ ಬಹು ಒಳ್ಳೆಯ ಏರ್ಪಾಡು ಇವನ ಹಚ್ಚಡದ ಮರೆಯಲ್ಲಿ ತೂರಿಕೊಳ್ಳೋದು. ಇಲ್ಲಿ ಹತ್ತಿರದಲ್ಲಿ ಬೇರೆ ಮನೆ ಇಲ್ಲ. ಕಷ್ಟಕಾಲ ಮನುಷ್ಯರಿಗೆ ವಿಚಿತ್ರ ಸ್ನೇಹಿತರನ್ನ ಮಾಡಿಕೊಡುತ್ತದೆ. ಮಳೆಯ ಕೊಸರು ಮುಗಿಯುವವರೆಗೆ ನಾನಿಲ್ಲಿ ಇದ್ದು ಆಗಿರುತ್ತೇನೆ.

(ಕೈಯಲ್ಲಿ ಒಂದು ಸೀಸೆ ಹಿಡಿದು ಹಾಡುತ್ತಾ ಸ್ಟೆಫಾನೊ ಬರುತ್ತಾನೆ.)

ಸ್ಟೆಫಾನೊ

ಇನ್ನು ಹೋಗೆನು ನಾನು ಮುನ್ನೀರ ಮುನ್ನೀರ;
ಸಾಯುತೇನಿಲ್ಲಿ ದಡದಲ್ಲಿ.

ತೀರಾ ಹಾಳಾದಾಗ ಬಂದಿದು; ಒಬ್ಬನ್ನ ಹೂಳೋ ಹೊತ್ತಿನಲ್ಲಿ ಹಾಡೋಕೆ. ಆಯ್ತು ನನ್ನ ಸಂತ ಇದೋದು ಇಲ್ಲಿದೆ.

(ಸೀಸೆಯಿಂದ ಕುಡಿಯುತ್ತಾನೆ)

ಆಳ್ವ, ಒಡೆಯ, ನಾಯಕ, ನಾನು,
ಕೋವಿಗೆ ಅವನ ಜೊತೆಗಾರ,
ಮೆಚ್ಚಿಕೊಂಡಿವಿ ಮುರಿಗಿ ಮಿಾನೂ
ಮುದ್ದೀನ ಮನೀನ ಅಪಾರ;
ಬೇಡವೆ ಬೇಡ
ಯಾರಿಗು ಚೌಡಿ;
ಅವಳಾ ನಾಲಿಗೆ ಹೊಡೆಯುವ ಚಿತ್ತ;
ನಾವಿಕ ಬಂದನೆ, "ನಡೆ ತೊಲಗತ್ತ;"
ಸಹಿಸದು ಅವಳಿಗೆ ಕಂದನೆ ಕಂಪು.
ಆಯಿತೆ, ಬಂದನೆ ಒಬ್ಬಾ ಸಿಂಪಿ,
ತಿನಿಸಾದಲ್ಲಿ ಕೆರೆ ಅವಳೊಡಲ;
ಸಾಯಲಿ ಬಿಡಿರೋ ಅಣ್ಣಾ ತೊತ್ತ;
ಬನ್ನಿರೊ ಸಾರುವ ಕಡಲ.

ಇದೂ ಹಾಳಾದ ರಾಗಾನೆ. ಅಂದರೆ ಇಲ್ಲಿದೆ ನನ್ನ ಸಂತಯಿಸೋ ಸಾಮಾನು. (ಕುಡಿಯುತ್ತಾನೆ).

ಕ್ಯಾಲಿಬನ್

ಓ ನನ್ನ ಕಾಡಬೇಡ.

ಸ್ಟೆಫಾನೊ

ಏನು ಸಂಗತಿ? ಇಲ್ಲೇನು ದೆವ್ವ ಇವೆಯೊ? ನಮ್ಮ ಜೀವಿಗಳಿಂದ ಇಂಡಿಯಾ ಜನರಿಂದ ನಮ್ಮ ಬೆಳ್ಳಿಸು ವೆಯಾ ಹೇಗೆ? ಹ! ಮುಳುಗಿ ಸಾಯದೆ ತಪ್ಪಿಸಿ ಕೊಂಡು ಬಂದದ್ದು ನಿನ್ನ ನಾಲ್ಕು ಕಾಲು ಕಂಡು ಈಗ ಅಂಜುವುದಕ್ಕಲ್ಲ. ಏಕೆ, ವಚನ ಇದೆ, ಎಂದೇ ಆಗಲಿ, ನಾಲ್ಕು ಕಾಲಿನಮೇಲೆ ನಡೆದ ಎಂಥಾವನೇ ಮನುಷ್ಯ ನಿಗೂ, ಇವನು ಸೋಲಲಿಲ್ಲ, ಎಂತ. ಸ್ಟೆಫಾನೋ ಮೂಗಿನಲ್ಲಿ ಉಸಿರಿರುವಷ್ಟು ಕಾಲ ಇದು ತಿರುಗಿ ವಚನ ಆಗುತ್ತೆ.

ಕ್ಯಾಲಿಬನ್

ಈ ಚೇತನ ನನ್ನ ಕಾಡುತ್ತೆ, ಹೋ!

ಸ್ಟೆಫಾನೊ

ಇದು ಈ ದ್ವೀಪದ,ಯಾವುದೋ ವಿರೂಪ ಪ್ರಾಣಿ: ನಾಲ್ಕು ಕಾಲಿನದು. ಇದಕ್ಕೆ ಚಳಿಜ್ವರ ಬಂದಿದೆ ಎಂತ ಕಾಣುತ್ತೆ. ದೆವ್ವನಾಣೆ, ಈ ಪ್ರಾಣಿ ನಮ್ಮ ಭಾಷೇನ ಎಲ್ಲಿ ಕಲಿತಿತು? ಬೇರೆ ಏಕಕ್ಕೂ ಅಲ್ಲ ಅಂದರೂ ಇದ ಕ್ಕಾಗಿ ನಾನು ಈ ಪ್ರಾಣಿಗೆ ಸ್ವಲ್ಪ ಶಮನ ಮಾಡು ತೇನೆ. ಇದಕ್ಕೆ ಗುಣಮಾಡಿ ಇದನ್ನ ಪಳಗಿಸಿ ಇದನ್ನ ತಕ್ಕೊಂಡು ನೇಪಲ್ಸ್ ಸೇರಿದೆ ಎಂದರೆ, ಎಂದೇ ಆಗಲಿ ಕೆರಮೆಟ್ಟ ನಡದ ರಾಜರ ರಾಜನಿಗೆ ಇದು ಕಾಣಿಕೆ ಆದೀತು.

ಕ್ಯಾಲಿಬನ್

ನನ್ನ ಕಾಡಬೇಡ ನಿನ್ನ ಧರ್ಮ. ನಾ ತರಬೇಕಾದ ಸೌದೇನ ಬೇಗನೇನೆ ಮನೆಗೆ ತರುತೇನೆ.

ಸ್ಟೆಫಾನೊ

ಇದು ಈಗ ಜ್ವರದ ಮೊರೆಯಲ್ಲಿದೆ. ಮಾತು ಅಷ್ಟೇನು ವಿವೇಕವಾಗಿಲ್ಲ. ಇದು ನನ್ನ ಸೀಸೆ ರುಚಿ ನೋಡಲಿ. ಹಿಂದೆ ಎಂದೂ ಇದು ಸಾರಾಯಿ ಕುಡಿದಿಲ್ಲ ಅಂದರೆ ಅದು ಇದರ ಈ ಮೊರೆ ಜ್ವರವನ್ನ ಬಿಡಿಸೋ ಮಟ್ಟಿಗೆ ಬಂದಿತೆ. ಇದಕ್ಕೆ ಗುಣಮಾಡಿ ಪಳಗಿಸಿದೆ ಅಂದರೆ ಇದಕ್ಕೆ ಎಷ್ಟು ಬೆಲೆ ತಕ್ಕೊಂಡರೂ ಕಡಮೇನೆ. ಇದು ಬೇಕು ಅನ್ನೋನು ಬೆಲೆ ತೆರಬೇಕು; ಪೂರಾಬೆಲೆ.

ಕ್ಯಾಲಿಬನ್

ನೀನು ಇನ್ನೂ ನನಗೆ ಬಹಳ ಕಷ್ಟ ಕೊಡುತಿಲ್ಲ. ಇಷ್ಟರಲ್ಲೇ ಕೊಡುತಿ. ನಿನ್ನ ನಡುಕದಿಂದ ನಾ ಬಲ್ಲೆ.ಈಗ ಪ್ರಾಸ್ಪೆರೋ ನಿನ್ನ ಕೆರಳಿಸುತಿದಾನೆ.

ಸ್ಟೆಫಾನೊ

ಎಲ, ಇತ್ತಬಾ; ಬಾಯಿ ತೆರಿ; ಇಲ್ಲಿ ಇದೆ, ಬೆಕ್ಕು, ನಿನಗೆ ಮಾತು ಕಲಿಸೋ ಸಾಮಾನು. ತೆರಿ ಬಾಯಿ. ಇದು ನಿನ್ನ ನಡುಕಾನ ನಡುಗಿಸುತ್ತೆ, ತಿಳುಕೊ. ಅದೂ ಪೂರಾ. (ಕ್ಯಾಲಿಬನ್‌ಗೆ ಮದ್ಯ ಕುಡಿಸುತ್ತಾನೆ.) ಯಾರು ನಿನ್ನ ಹಿತವರು, ಅದು ನೀ ಕಾಣೆ; ತೆರಿ ತಿರುಗಿ ನಿನ್ನ ಬಾಯಿ.

ಟ್ರಿಂಕ್ಯುಲೋ

ಈ ಧ್ವನಿ ನನಗೆ ಗುರುತು. ಮಾತಾಡುತಿರೋನು ನಮ್ಮ—ಆದರೆ ಅವನು ಮುಳುಗಿ ಸತ್ತ. ಇವು ಪಿಶಾಚ ಗಳು. ಓ ನನ್ನ ಕಾಪಾಡು.

ಸ್ಟೆಫಾನೊ

ನಾಲ್ಕು ಕಾಲು, ಎರಡು ದನಿ! ತೀರಾ ವಿಲಕ್ಷಣವಾದ ಪ್ರಾಣಿ. ಈಗ ಕೇಳಿದ ಇದರ ಮುಂದನಿ ತನ್ನ ಸ್ನೇಹಿತ ನನ್ನ ಹೊಗುಳುತದೆ. ಇದರ ಹಿಂದನಿ ಹೊಲಸು ಶಬ್ದ

ಗಳನ್ನ ನುಡಿಯುತ್ತೆ, ದೂರುತ್ತೆ. ಸೀಪೋಲಿರೋ ಸಾರಾಯಿ ಎಲ್ಲಾ ಆದರೂ ಸರಿಯೆ, ಇದ ಗುಣಮಾಡು ವುದಾದರೆ ಇದರ ಜ್ವರ ಬಿಡಿಸತೇನೆ. ಬಾ. ತಥಾಸ್ತು. ನಿನ್ನ ಇನ್ನೊಂದು ಬಾಯಲ್ಲಿ ಅಷ್ಟು ಸುರಿಯುತ್ತೇನೆ.

ಟ್ರಿಂಕ್ಯುಲೋ

ಸ್ಟೆಫಾನೊ !

ಸ್ಟೆಫಾನೊ

ನಿನ್ನ ಇನ್ನೊಂದು ಬಾಯಿ ನನ್ನ ಹೆಸರು ಹೇಳು ತ್ತಿಯೆ? ದೇವರೇ, ದೇವರೇ, ಇದು ದೆವ್ವನೇ; ವಿರೂಪ ಪ್ರಾಣಿಯೇತರದೂ ಅಲ್ಲ. ಇದರ ಸಹವಾಸ ಬೇಡ ನನಗೆ. ನನ್ನ ಹತ್ತಿರ ರಕ್ಷೆಸವುಟಲ್ಲ

ಟ್ರಿಂಕ್ಯುಲೋ

ಸ್ಟೆಫಾನೊ—ನೀನು ಸ್ಟೆಫಾನೊ ಹೌದಾದರೆ ನನ್ನ ಮುಟ್ಟು, ನನ್ನ ಮಾತಾಡಿಸು. ನಾ ಟ್ರಿಂಕ್ಯುಲೋ ಹೌದು. ನಿನಗೆ ಭಯ ಬೇಡ. ನಿನ್ನ ಒಳ್ಳೇ ಗೆಳೆಯ ಟ್ರಿಂಕ್ಯುಲೋ.

ಸ್ಟೆಫಾನೊ

ನೀ ಟ್ರಿಂಕ್ಯುಲೋ ಹೌದಾದರೆ ಹೊರಗೆ ಬಾ. ನಿನ್ನ ನಾನು ಈ ಸಣ್ಣನ್ನ ಕಾಲು ಹಿಡಿದು ಸೆಳೆಯುತೇನೆ. ಯಾವುದೇ ಕಾಲು ಟ್ರಿಂಕ್ಯುಲೋವು ಅನ್ನುವದಾದರೆ ಈ ಕಾಲು ಅವನನ್ನ. ಏನು ನೀನು ಖಟಿವೇ ಟ್ರಿಂಕ್ಯುಲೋ ಆಗಿಲ್ವೇಯಲ್ಲ! ಇದು ಹೇಗೆ ನೀನು ಈ ಪೆದ್ದ ಮಾಗನಿಗೆ ಸೆರೆ ಆಗಿದೀಯು? ಇವನೇನು ಟ್ರಿಂಕ್ಯುಲೋಗಳನ್ನ ಉಗುಳಬಲ್ಲನೋ?

ಟ್ರಿಂಕ್ಯುಲೋ

ಇವನ್ನ ನಾನು ಸಿಡಿಲು ಹೊಡೆದು ಸತ್ತಿದ್ದಾನೆ ಅಂದು ಕೊಂಡೆ. ಅದಿರಲಿ, ನೀನು ಮುಳುಗಿ ಸಾಯಲಿಲ್ಲವೇ ಸ್ಟೆಫಾನೊ? ಸದ್ಯ ನನಗೆ ಬೇಕಾದದ್ದು ನೀನು ಮುಳುಗಿ ಸತ್ತಿಲ್ಲ ಅನ್ನೋದು. ಬಿರುಗಾಳಿ ನಿಂತಿತೆ? ಅದರ ಭಯಕ್ಕೆ ನಾನು ಈ ಪೆದ್ದಮಾಗನ ಹೆಣದಡಿ ಔಸಿ ಕೊಂಡೆ. ಅಂತೂ ನೀ ಬದುಕಿದೀಯಾ ಸ್ಟೆಫಾನೊ, ನೇಪಲ್ಸವರು ಇಬ್ಬರು ಉಳುಕೊಂಡೆವು.

ಸ್ಟೆಫಾನೊ

ನನ್ನ ಅತ್ತ ಇತ್ತ ತಿರುಗಿಸಬೇಡ, ನಿನ್ನ ಧರ್ಮ. ನನ್ನ ಹೊಟ್ಟೆ ಸ್ಥೈರ ಇಲ್ಲ.

ಕ್ಯಾಲಿಬರ್ (ತನ್ನಲ್ಲೆ)

ಬೂತಾಳು ಅಲ್ಲ ಎನೆ ಇವು ಚೆಲುವ ಜಂತುಗಳು. ಇವನೊಬ್ಬ ದಿವ್ಯ ಸುರೆ ಕೈಯುಲಿಹ ಘನ ದೈವ. ನಾ ಇವಗೆ ಮಂಡಿಯೂರುವೆನು.

ಸ್ಟೆಫಾನೊ

ನೀ ಹೇಗೆ ಉಳುಕೊಂಡೆ? ಇಲ್ಲಿಗೆ ಹೇಗೆ ಬಂದೆ? ಈ ಸೀಸೆಮೇಲೆ ಆಣೆ ಇಕ್ಕಿ ಹೇಳು, ನೀ ಇಲ್ಲಿಗೆ ಬಂದದ್ದು ಹೇಗೆ ಎಂತ. ಈ ಸೀಸೆ ಆಣೆ ನಾನು ನಾವಿಕರು ನೀರಿ ಗೆಸೆದ ಮರದ ಪೀಪಾಯಿ ಒಂದರಮೇಲೆ ಏರಿ ಉಳು ಕೊಂಡೆ. ಇದನ್ನ ನಾನು ನೆಲ ಮುಟ್ಟಿದಮೇಲೆ ನನ್ನದೇ ಕೈಯಿಂದ ಒಂದು ಮರದ ತೊಗಟೇಲಿ ಮಾಡಿಕೊಂಡೆ.

ಕ್ಯಾಲಿಬರ್

ಆ ಸೀಸೆಮೇಲೆ ನಾ ಆಣೆ ಇಕ್ಕುತೇನೆ; ನಾ ನಿನಗೆ ಕೃತ್ರಿಮ ಇಲ್ಲದ ಪ್ರಜೆಯಾಗಿರುತ್ತೇನೆ. ಯಾಕಂದರೆ ಆ ಮದ್ಯ ಈ ಲೋಕದ್ದಲ್ಲ.

ಸ್ಟೆಫಾನೊ

ಎಲ್ಲಿ, ಆಣೆ ಇಕ್ಕು ಮತ್ತೆ; ಹೇಗೆ ಉಳುಕೊಂಡೆ ಹೇಳು.

ಟ್ರಿಂಕ್ಯುಲೋ

ಈಜಿ ದಡಕ್ಕೆ ಬಂದೆ, ಅಣ್ಣಯ್ಯ; ಒಂದು ಬಾತು ಅನ್ನೋ ಹಾಗೆ. ಒಂದು ನೀರು ಕೋಳಿಯಂತೆ ಈಜ ಬಲ್ಲೆ ನಾನು; ಆಣೆ ಇಕ್ಕಿ ಹೇಳುತ್ತೇನೆ.

ಸ್ಟೆಫಾನೊ

ಬಾ ಇಲ್ಲಿ, ಈ ಪವಿತ್ರ ವಸ್ತುವಿನ ಮೇಲೆ ಆಣೆ ಇಕ್ಕು. (ಟ್ರಿಂಕ್ಯುಲೋಗೆ ಮದ್ಯ ಕೊಡುತ್ತಾನೆ.) ನೀ ನೀರುಕೋಳಿ ಯಂತೆ ಈಜಬಲ್ಲೆಯಾದರೂ ಒಂದು ಬಾತಿನಂತೆ ಆಗಿ ದೀಯೆ.

ಟ್ರಿಂಕ್ಯುಲೋ

ಓ ಸ್ಟೆಫಾನೋ ಇದು ಇನ್ನಷ್ಟು ಇದೆಯೆ?

ಸ್ಟೆಫಾನೊ

ಪೀಪಾಯಿ ಪೀಪಾಯೇ ಇದೆ, ಅಣ್ಣಯ್ಯ. ನನ್ನ ಮದ್ಯದ ಉಗ್ರಾಣ ಕಡಲ ಕರೆಯ ಬದಿ ಬಂಡೆಯಲ್ಲಿದೆ. ಅಲ್ಲಿ ನನ್ನ ಮದ್ಯಾನ ಭದ್ರಪಡಿಸಿದೇನೆ. ಏನೊ ಸಂಗತಿ, ಪೆದ್ದಮಗನೆ? ನಿನ್ನ ಜ್ವರ ಹೇಗಿದೆ.

ಕ್ಯಾಲಿಬರ್

ನೀ ಸ್ವರ್ಗದಿಂದ ದುಮುಕಿದೆ ಅಲ್ಲ?

ಸ್ಟೆಫಾನೊ

ಚಂದ್ರನಿಂದ ದುಮುಕಿ ಬಂದಿದೇನೆ. ದಿಟವಾಗಿ ತಿಳುಕೋ. ಒಂದು ಕಾಲದಲ್ಲಿ ನಾನು ಚಂದ್ರನಲ್ಲಿರುವ ಮನುಷ್ಯ ಆಗಿದ್ದೆ.

ಕ್ಯಾಲಿಬರ್

ನಾನು ನಿನ್ನ ಚಂದ್ರನಲ್ಲಿದ್ದಾಗ ನೋಡಿದ್ದೇನೆ. ನಾ ನಿನ್ನ ಪೂಜಿಸುತ್ತೇನೆ. ನನ್ನ ಒಡತಿ ನನಗೆ ನಿನ್ನ ನಾಯನ್ನ ನಿನ್ನ ಪೊದೆಯನ್ನ ತೋರಿಸಿದಳು.

ಸ್ಟೆಫಾನೊ

ಎಲ್ಲಿ ಅದು ಸತ್ಯ ಎಂತ ಆಣೆ ಇಕ್ಕು. ಈ ಪವಿತ್ರ ವಸ್ತುವಿನಮೇಲೆ. ಇಷ್ಟರಲ್ಲೇ ತಿರುಗಿ ಇದರಲ್ಲಿ ಹೊಸ ತಿರುಳು ಇರುವಂತೆ ಮಾಡುತ್ತೇನೆ. ಆಣೆ ಇಕ್ಕು.

ಟ್ರಿಂಕ್ಯುಲೋ

ಈ ಸೂರ್ಯದೇವನಾಣೆ, ಇವನೊಬ್ಬ ದಡ್ಡ ವಿರೂಪ ಪ್ರಾಣಿ! ನಾನು ಇವನಿಗೆ ಅಂಜಿಕೊಂಡೆನೇ! ತೀರಾ ನಿತ್ರಾಣದ ಒಬ್ಬ ವಿರೂಪಿ. ಚಂದ್ರನಲ್ಲಿರುವ ಮನುಷ್ಯನಂತೆ. ಹೇಳಿದ್ದನ್ನೆಲ್ಲ ನಂಬುವ ತೀರಾ ದಡ್ಡ ವಿರೂಪಿ. ಎಲಾ ವಿರೂಪಿ, ಚೆನ್ನ ಹೀರಿದೆ, ಅಡ್ಡಿ ಇಲ್ಲ.

ಕ್ಯಾಲಿಬರ್

ದ್ವೀಪದೆಲ್ಲಾ ಹಸನು ನೆಲವ ಅಂಗುಲ ಬಿಡದೆ
ನಾ ನಿನಗೆ ತೋರುವೆನು. ಅಂತೆ ನಾ ನಿನ್ನಡಿಗೆ
ಮುತ್ತಿಕ್ಕುವೆನು. ದೇವರಾಗೆನಗೆ, ನಿನ ಧರ್ಮ.

ಟ್ರಿಂಕ್ಯುಲೋ

ಈ ಸೂರ್ಯನಾಣೆ, ತೀರಾ ವಂಚಕ, ತೀರಾ ಕುಡುಕ, ವಿರೂಪಿ. ಇವನ ದೇವರು ನಿದ್ದೆ ಹೋದಾಗ ಇವನು ಅವನ ಸೀಸೆಯನ್ನ ಕದಿಯುತಾನೆ.

ಕ್ಯಾಲಿಬರ್

ನಾನು ನಿನ್ನಡಿಗೆ ಮುತ್ತಿಕ್ಕುವೆನು ; ನಾ ನಿನ್ನ
ಪ್ರಜೆಯೆಂದು ಆಣೆ ಮಾಡುವೆನು.

ಸ್ಟೆಫಾನೊ

ಬಾ ಹಾಗಾದರೆ; ಮಂಡಿಯೂರು; ಆಣೆ ಮಾಡು,

ಟ್ರಿಂಕ್ಯುಲೋ

ಈ ಕುನ್ನಿ ಬುದ್ಧಿವಿರೂಪಿಯ ಆಟ ನೋಡಿ ನಾನು ನಕ್ಕು ನಕ್ಕು ಸಾಯುತೇನೆ. ತೀರಾ ಹೊಲಸು ವಿರೂಪಿ, ನನ್ನ ಮನಸ್ಸು ಇವನನ್ನು ಹೊಡೆಯೋಕೆ ಒಪ್ಪೀತು—

ಸ್ಟೆಫಾನೊ

ಬಾ ಮುತ್ತಿಡು.

ಟ್ರಿಂಕ್ಯುಲೋ

ಕುಡಿದಿದ್ದಾನೆ ಎಂತ ಒಲ್ಲದೆ ಇದೆ. ಹೇಸಿಕೆ ವಿರೂಪಿ!

ಕ್ಯಾಲಿಬರ್

ಬಹು ಒಳ್ಳೆ ನೀರ್ಚಿಲುಮೆಗಳ ನಿನಗೆ ತೋರುವೆನು ;
ನಿನಗಾಗಿ ಮಿಡಿಗಳನು ಕೀಳುವೆನು ; ನಿನ್ನ ಸಲು
ಮೀನ ಹಿಡಿವೆನು ; ಯಥೇಚ್ಛದ ಸೌದೆ ತರುವೆನು ;
ನಾ ಸೇವಿಸುತ್ತಲಿರುವ ಕ್ರೂರ ಪ್ರಭುವನು ಮಾರಿ
ತಿನ್ನ ! ನಾನವನಿಗಿನ್ನೊಂದು ಕಟ್ಟಿಯ ತರನೆ
ಓ ಕಳಾಪುರುಷ ನಿನಗನುಯಾಯಿ ಆಗುವೆನು.

ಟ್ರಿಂಕ್ಯುಲೋ

ಶುದ್ಧ ಅವಿವೇಕದ ವಿರೂಪಿ ! ಬಡ ಕುಡುಕ ಮುಂಡೇದನ್ನ ಕಳಾಪುರುಷನ್ನ ಮಾಡತಾನೆ.

ಕ್ಯಾಲಿಬರ್

ಬೇಡುವೆನು ಬಾ ; ನಿನ್ನ ಮರಸೇಬು ಬೆಳೆವೆಡೆಗೆ
ಕರೆದೊಯ್ಯುವೆನು ; ನನ್ನ ಉದ್ದನೆಯ ಉಗುರಿಂದ
ನಿನಗೆ ನೆಲದಿಂದ ಕಡಲೆಯನಗಿದು ಕೊಡುವೆನು ;
ಗುಬ್ಬಚ್ಚಿಗೂಡ ತೋರುವೆನು ; ಅಂತೇ ಹಗುರ
ಸುಳಿವ ಕಪಿಮಂಗನನು ಸಿಡಿಯಿಂದ ಹಿಡಿವ ಪರಿ
ಕಲಿಸುವೆನು ; ಹಣ್ಣುಗೊಂಚಲಿಗೆ ಕರೆದೊಯ್ಯುವೆನು ;
ಅಂತೆ ಒಮ್ಮೊಮ್ಮೆ ನಾ ನಿನಗೆ ಬಂಡೆಗಳಿಂದ
ಎಳೆಯ ನೀರಂಜಿಗಳತಹೆನು ; ಜೊತೆಗೈತಹೆಯ ?

ಸ್ಟೆಫಾನೊ

ಆಯ್ತು ಇನ್ನು, ಮಾತು ನಿಲ್ಲಿಸಿ ದಾರಿ ತೋರಿಸು ನಡೆ. ಟ್ರಿಂಕ್ಯುಲೋ, ದೊರೆಗಳು, ನಮ್ಮ ಜೊತೆ ಜನ ಉಳಿದವರೆಲ್ಲರು, ಮುಳುಗಿ ಸತ್ತಿದಾರೆ. ಅಂದಮೇಲೆ ನಾವೇ ಇಲ್ಲಿ ಅಧಿಕಾರಿಗಳು. ಬಾ ಈ ಸೀಸೆ ಹಿಡಿಯೋ. ಗೆಳೆಯ ಟ್ರಿಂಕ್ಯುಲೋ, ಇಷ್ಟರಲ್ಲೇ ಬೇಗನೆ ನಾವು ಇದನ್ನು ತುಂಬೋಣ.

ಕ್ಯಾಲಿಬರ್

ನಾ ಹೊರಟೆ, ನನ್ನೊಡೆಯ ; ನಾ ಹೊರಟೆ ; ನಾ ಹೊರಟೆ. (ಕುಡಿತದಿಂದ ಅಸ್ವಾಧೀನ ಆಗಿ ಹಾಡುತ್ತಾನೆ.)

ಟ್ರಿಂಕ್ಯುಲೋ

ವಿರೂಪಿ ಮುಂಡೇದು ಊಳಿಡುತ್ತೆ. ವಿರೂಪಿ ಕುಡಿದು ಮೈ ಮರೆತದೆ.

ಕ್ಯಾಲಿಬರ್

ಮೀನಿಗೆಂದು ಇನ್ನು ಕಟ್ಟೆ ನಾನು ಕಟ್ಟೆಯ ;
ಸೌದೆಯನ್ನು ತರುವುದಿಲ್ಲ ;
ತಾರೊ ಎಂದು ಹೇಳಲಲ್ಲ ;
ಮಡಕೆ ಕೆರೆವುದಿಲ್ಲ, ತೊಳೆವುದಿಲ್ಲ ತಟ್ಟೆಯ ;
ಕ್ಯಾ ಕ್ಯ ಕ್ಯಾಲಿಬರ್‌ಗೆ ಬಂದ
ಹೊಸಬ ದೊರೆ ; ಇಂದಿನಿಂದ
ಹಿಡಿನೀ ಹೊಸ ಆಳು ಬಂದ ;

ಉಘೇ ಉಘೇ ನಾ ಸ್ವತಂತ್ರನಾದೆ ಉಘೇ ನಾ ಸ್ವತಂತ್ರ.

ಸ್ಟೆಫಾನೊ

ಒಳ್ಳೇ ಚೆಲುವ ವಿರೂಪಿ; ನಡಿ, ದಾರಿ ತೋರಿಸು.

(ಹೋಗುತ್ತಾರೆ.)

ಅಂಕ ೩

ದೃಶ್ಯ ೧

ಪ್ರಾಸ್ಪೆರೋ ವಾಸದ ಗವಿಯ ಮುಂಭಾಗ.

(ಒಂದು ಸೌದೆ ತುಂಡನ್ನು ಹೊತ್ತು ಫರ್ಡಿನೆಂಡ್ ಬರುತ್ತಾನೆ.)

ಫರ್ಡಿನೆಂಡ್

ಕೆಲವಿವೆ ವಿನೋದ, ಜೇನೆಯುತಹವು; ಅವು ತರುವ
ಸುಖ ಅವುಗಳಾಯಸಕೆ ಪರಿಹಾರ. ಕೆಲ ತೆರನ
ಸೇವೆ ಗೆಯ್ಯುವುದು ಗೌರವವೆ; ಅಂತೆ ಅನೇಕ
ನೀಚವರ್ತನ ಫಲದ ಉನ್ನತಿಯ ತೋರುವುದು.
ಹೀನಾಯದೀ ನನ್ನ ದುಡಿತ, ನನಗೆನಿತರುಚಿ,
ಅನಿತೆ ದುಸ್ಸಹ ಆಗುತಿದ್ದಿತು. ಆದರೆಯೊ,
ನಾನಾರ ಸೇವೆ ಮಾಡುತಲಿಹೆನು ಆ ಒಡತಿ,
ಸಾವಿಗೇ ಜೀವವೀಯುತ, ನನ್ನ ಕಷ್ಟಗಳ
ಸುಖಗಳೆಂದೆನಿಸಿಹಳು. ಓ ಆಕೆ, ಅವಳಪ್ಪ
ಎಷ್ಟು ಕರ್ಕಶ, ಆದರ ಹತ್ತುಮಡಿ ಮೆದುಮನಸು.
ಅವನೊ ಕರ್ಕಶವೆ ಕರ್ಕಶ. ನಾನು ಈ ತುಂಡು
ಕೆಲವೊಂದು ಸಾವಿರವ ಹೊತ್ತು ಪೇರಿಸಬೇಕು!
ಇದು ಅವನ ಕಠಿನಾಜ್ಞೆ. ಇನಿಯೆ ನನ್ನಯ ಒಡತಿ
ನಾ ದುಡಿಯೆ ನೋಡಿ ಅಳುವಳು: ಎಂದೆ ಆಗಲಿ
ಇಂಥ ಹೀನಾಯ ಕಾರ್ಯವ ಇಂಥ ಹಿರಿಯ ಜನ
ಗೆಯ್ದಿಲ್ಲ ಎನ್ನುವಳು. ಮರೆತೆನಾ ಕೆಲಸವನು.
ಇರಲಿ; ಈ ಇನಿಯ ಯೋಚನೆ ದುಡಿವಹೊತ್ತಲೇ
ಅತಿತೀವ್ರ ಸರಿದು ದುಡಿಮೆಯ ಶ್ರಮವ ಹರಿಸುವುದು.

(ಮಿರಾಂಡಾ ಬರುತ್ತಾಳೆ. ಹಿಂದೆ ಪ್ರಾಸ್ಪೆರೋ.)

ಮಿರಾಂಡಾ

ಅಯ್ಯೊ, ನಾ ನಿಮ್ಮ ಬೇಡುವೆನು, ನೀವಿನಿತೊಂದು
ದುಡಿಯುವುದು ಬೇಡ; ಪೇರಿಸಲೆಂದು ನಿಮಗೆ
ಆಜ್ಞೆಯಾಗಿರುವ ಆ ತುಂಡುಗಳು ಸಿಡಿಲೆರಗಿ
ಸುಟ್ಟಿದ್ದರಾಗಿತ್ತು ಎಂದು ನಾ ಬಯಸುವೆನು
ಬೇಡುವೆನು. ಇದನು ಕೆಳಗಿರಿಸಿ, ವಿಶ್ರಮಿಸಿರಿ.
ಇದು ಉರಿವ ಹೊತ್ತು ನಿಮಗಾಯಾಸ ಇತ್ತ ಸಲು
ನೀರ ಸುರಿಸುವುದು ಇದು. ಅಪ್ಪಾಜಿ ಓದಿನಲಿ
ಗಾಢ ತೊಡಕಿಹರು. ಬೇಡುವೆ ಈಗ ವಿಶ್ರಾಂತಿ
ತೆಗೆದುಕೊಳ್ಳಿರಿ. ಅವರು ಈ ಮೂರು ತಾಸುವರ
ಇತ್ತ ಬಹ ಭಯ ಇಲ್ಲ.

ಫರ್ಡಿನೆಂಡ್

ಇನಿ ಇನಿಯ ನನ್ನೊಡತಿ,
ನಾ ಶ್ರಮಿಸಿ ಮಾಡಲಿಹುದನು ಮುಗಿಸಬಹಮುನ್ನ
ಸೂರ್ಯ ಮುಳುಗುವನು.

ಮಿರಾಂಡಾ

ಕುಳಿತಿರೆ ನೀವು ಆ ಹೊತ್ತು,
ನೀವು ಹೊರಲಿಹ ತುಂಡುಗಳ ನಾನು ಹೊರುವೆನು.
ಬೇಡುವೆನು; ಇದ ತನ್ನಿ; ನಾ ಬಣವೆಗೊಯ್ಯುವೆನು.

ಫರ್ಡಿನೆಂಡ್

ಬೇಡ, ಕಟ್ಟಾಣಿ ಜೀವವೆ. ಸೋಂಬನಾಗಿ ನಾ
ಕುಳ್ಳಿರುತ ನೀವಿಂತ ಹೀನಾಯ ಉಂಬುದಕೆ
ಮಿಗಿಲು ಸಮುತ್ಮವಾಗಿ, ಈ ನನ್ನ ನರಗಳನು
ಬಿರಿದೇನು ನಾನು, ನನ್ನಯ ಬೆನ್ನ ಮುರಿದೇನು.

ಮಿರಾಂಡಾ

ನಿಮಗೆನಿತು ತಗುವುದದು ತಗುವುದನಿತೂ ನನಗೆ.
ಮೇಲಾಗಿ ನಿಮಗಿಂತ ಮಿಗಿಲು ಸುಳುವಾಗಿ ನಾ
ಇದನು ಮಾಡುವೆನು. ಏಕೆನೆ, ಇದನು ಮಾಡುವರೆ
ನನಗೆ ಮನ ಉಂಟು, ನಿಮಗೋ ಇಲ್ಲ.

ಪ್ರಾಸ್ಪೆರೋ

ಬಡ ಹುಳು,
ಸೊಂಕು ಮುಟ್ಟಿದೆ ನಿನ್ನ! ನೀನಿಲ್ಲಿ ಬಂದಿಹುದು
ಅದ ತೋರುತಿದೆ.

ಮಿರಾಂಡಾ

ನೀವು ದಣಿದಂತೆ ಕಾಣುವಿರಿ.

ಫರ್ಡಿನೆಂಡ್

ಇಲ್ಲ, ಘನರಾಜ್ಞಿ, ನೀವಿರೆ ಬದಿಗೆ, ಇರುಳಿನಲು
ನನಗೆ ಹೊಸ ಉದಯವೆ. ನಾ ನಿಮ್ಮ ಬೇಡುವೆನು,—
ಬೇಡುವುದು, ಮುಖ್ಯ, ನಾ ಗೆಯ್ವ ಪ್ರಾರ್ಥನೆಯಲದ
ಸೇರಿಸುವ ಸಲುವಾಗಿ,—ನಿಮ್ಮ ಹೆಸರು?

ಮಿರಾಂಡಾ

ಮಿರಾಂಡಾ.
ಓ ನನ್ನ ಅಪ್ಪಾಜಿ, ಇದಹೇಳಿ ನಾ ನಿಮ್ಮ
ಆಣತಿಯ ಮುರಿದೆನೆ!

ಫರ್ಡಿನೆಂಡ್

ಮಿರುಮಿರುಗುವ ಮಿರಾಂಡಾ
ದಿಟವೆ, ಮಿರುಗುವ ವಸ್ತುಗಳ ಶಿಖರ. ಜಗಕೆ ಬಹು
ಬಹು ಇಷ್ಟವಾದುದರ ಸಮನೆ! ನಾ ಹಲ ಹಲವು
ಮಹಿಳೆಯರ ಚೆನ್ನ ದೃಷ್ಟಿಸಿ ನೋಡಿಹೆನು; ಅಂತೆ
ಹಲ ಸಮಯ ಅವರ ದನಿಗಳ ಇಂಪು, ಅತಿ ಒಲಿದು
ಕೇಳಿದೀ ಕಿವಿಗಳನು ಸೆರೆಮಾಡಿ ನಿಲಿಸಿತು.
ಬೇರೆಬೇರೆಯ ಮಹಿಳೆಯರ ಬೇರೆಬೇರೆಯಹ
ಅವರ ಗುಣಗಳಿಗಾಗಿ ಮೆಚ್ಚಿಹೆನು; ಯಾರನೂ
ಆಕೆಯದು ಯಾವುದೋ ಒಂದು ಕೊರೆ ಆಕೆಯಲಿ
ಇದ್ದ ಅತ್ಯಂತ ಘನ ಲಾವಣ್ಯವನು ಕಾದಿ
ಕಳೆ ಕೆಡಿಸದನಿತು ಮೆಚ್ಚೆನು ಎಂದೆ. ಇಂತಿರುತ,
ನೀನೊ, ಓ ನೀನಿನಿತು ಪೂರ್ಣೆ, ಇನಿತಸದೃಶೆ,
ಎಲ್ಲ ಜೀವಗಳ ಉತ್ತಮತೆಯೂ ಸೇರಿ ನೀ
ನಿರ್ಮಾಣ ಆಗಿರುವೆ.

ಮಿರಾಂಡಾ

ನನ್ನಂತೆ ಹೆಣ್ಣೆಂಬ
ಬೇರೆಯುದ ನಾನರಿಯೆ. ನನ್ನ ಕನ್ನಡಿಯಿಂದ
ನನ್ನ ಮುಖ ಇದ ಹೊರತು ಹೆಣ್ಣ ಮುಖ ಇನ್ನೊಂದ
ನೋಡಿದುದು ನನಗೆ ನೆನಪಿಲ್ಲ. ಅಂತೇ ನೀವು,
ಮೇಲಾಗಿ ನನ್ನ ಪ್ರಿಯ ಅಪ್ಪಾಜಿ, ನಿಮ್ಮನು
ಮೀರಿ, ನಾ ಗಂಡೆಂದು ಕರೆಯಬಹ ಹೆಚ್ಚಿನ
ಮಂದಿಯನು ನಾನು ಕಂಡವಳಲ್ಲ. ಬೇರೆ ಎಡೆ
ರೂಪುಗಳು ಎಂತಿಹವು, ನಾ ಅದರೊಳರಿವಿಲಿ.
ಇಂತಿದ್ದು ನನ್ನ ಸಚ್ಚರಿತದಾಣೆಗೆ ನಾನು,—
ಅದು ನನ್ನ ಬಳುವಳಿಯ ಮುಖ್ಯಮಣಿ,—ನೀವಲ್ಲ
ಲೋಕದಲಿ ಬೇರೆ ಒಬ್ಬನ ನನ್ನ ಜೊತೆಯಿರಲು
ಬಯಸೆನವ್ವುದು. ಅಂತೆ ನಿಮ್ಮದಲ್ಲದೆ ಬೇರೆ
ನಾ ಮೆಚ್ಚಬಹ ಬೇರೆ ಆಕೃತಿಯ ನಿರ್ಮಿಸಲು
ಆರದಿದೆ ಊಹೆ. ನಾ ತುಸವೇನೊ ಮಿತಿ ಮರೆತು
ಒಳರುತಿರುವೆನು; ಇಂತು ಗೆಯ್ಯದಿರಲಪ್ಪಾಜಿ
ವಿಧಿಸಿಹುದ ಮರೆತಿಹೆನು.

ಫರ್ಡಿನೆಂಡ್

ಸ್ಥಿತಿಯಿಂದ ನಾ ಒಬ್ಬ
ದೊರೆಮಗ, ಮಿರಾಂಡಾ. ತೋರುತಿದೆ ದೊರೆಯೆಂದೆ;—
ಬೇಡ ನನಗಿದು; ಇಂತಿರುತ ಸೌದೆ ಊಳಿಗ
ಇದ ಹೆಣನ ನೊಣ ಬಂದು ನನ್ನ ಬಾಯಲಿ ತನ್ನ
ಗುಡ್ಡನಿಕ್ಕುವುದನೆಂತದಕಿಂತ ಮಿಗಿಲು ನಾ
ಒಪ್ಪುತಿರಲಿಲ್ಲ. ನನ್ನಾತ್ಮ ನುಡಿವುದ ಕೇಳಿ:
ನಿಮ್ಮ ನಾ ನೋಡಿದ ಅದೇ ಕ್ಷಣವೆ ನನ್ನುಸಿರು
ನಿಮ್ಮ ಸೇವೆಗೆ ಹಾರಿತಹುದು; ಅದರಲಿ ನಿಂತು
ಅದಕೆ ನನ್ನನು ದಾಸನೆನಿಸಿಹುದು; ಇಂತಾಗಿ
ನಾ ಇಂಥ ಸಹನಪರ ಸೌದೆ ಆಳಾಗಿಹೆನು.

ಮಿರಾಂಡಾ

ನನ್ನ ಕೂರ್ತಿರ ನೀವು?

ಫರ್ಡಿನೆಂಡ್

ಓ ದೈವವೇ, ನೆಲವೆ,
ಸಾಕ್ಷಿಯಾಗಿರಿ ಶಬ್ದ ಇದಕೆ. ಅಂತೇ ನಾನು
ದಿಟವೆ ನುಡಿವೆನೆ, ನಾನು ಏನನೊರೆವೆನು ಅದು
ಶುಭವಾಗಿ ಮುಗಿವುದನನುಗ್ರಹಿಸಿ. ನುಡಿ ಪೊಳ್ಳೆ,
ನನಗೆ ಬರಲಿರುವ ಅತ್ಯಂತ ಶುಭ ಕೇಡಪ್ಪ
ತೆರ ಅದನು ಮೇಲು ಕೆಳಗಾಗಿ ಪಲ್ಲಟಿಸಿರಿ.
ಜಗದೊಳಿಹ ಇನ್ನುಳಿದುದರ ಮೇರೆಯೆಲ್ಲವನು
ಮೀರಿ ನಾ ನಿಮಗೊಲಿದು ಹಿರಿ ವಸ್ತುವೆಂದೆಣಿಸಿ
ಗೌರವಿಸುತಿಹೆನು.

ಮಿರಾಂಡಾ

ಸಂತಸ ತಂದ ನುಡಿಯಿಂದ
ಕಣ್ಣಿನಲಿ ನೀರತಹೆ ನಾನು ಗಾಂಪಳು.

ಪ್ರಾಸ್ಪೆರೋ

ತೀರ
ಅಪುರೂಪದೆರಡು ಪ್ರೇಮಗಳ ಸುಂದರ ಸಂಧಿ.
ಇವರ ಮಧ್ಯದಲಿ ಮೂಡಿಹೆ ಇದರ ತಲೆಯಲಿ
ದೈವ ತನ್ನರುಳ ಸುರಿಯಲಿ.

ಫರ್ಡಿನೆಂಡ್

ಏಕೆ ಕಣ್ಣೀರು?

ಮಿರಾಂಡಾ

ನನ್ನನರ್ಹತೆಗಾಗಿ. ಅದರ ಕಾರಣ, ನನಗೆ,
ಕೊಡಲು ಬಯಸುವುದ ಕೊಳ್ಳಿರಿ ಎಂದು ನೀಡುವರೆ
ಧೈರ್ಯ ಸಾಲದು. ಏನ ಪಡೆಯದಿರೆ ಸಾವೆನು
ಅದ ಕೊಳ್ಳುವರೆ ಧೈರ್ಯ ಮತ್ತಷ್ಟು ಸಾಲದು.
ಆದರಿದು ಜೊಳ್ಳು. ತನ್ನನೆ ಮರೆಸಿಕೊಳ್ಳುವರೆ
ಎನಿತು ತೊಡಗುವುದು, ಅನಿತೂ ಹಿರಿದು ಗಾತ್ರದಲಿ
ಹೊರಗೆ ಕಾಣುತಿದೆ. ತೊಲಗತ್ತ, ನಾಣಿನ ಜಾಣೆ;
ಅಂತೆ ಪಾವನ ಸರಳ ಶುದ್ಧ ಮನವೇ ನನ್ನ
ಪ್ರೇರಿಸು. ನೀವೆನ್ನ ಮದುವೆ ಆಗುವಿರಾಗೆ

ನಾ ನಿಮ್ಮ ಪತ್ನಿ. ಅಗರಿ, ನಿಮ್ಮ ಮಿಾಸಲಿನ
ಕನ್ಯೆಯಾಗಿದ್ದು ಸಾಯುವೆನು. ನನ್ನನು ನೀವು
ನಿಮ್ಮ ಜೊತೆಯೆನಿಸೆ ಸಿರಾಕರಿಸಬಹುದು. ಒಪ್ಪಿ,
ಒಪ್ಪದಿರಿ, ನಾ ನಿಮ್ಮ ದಾಸಿಯಾಗಿರುವವಳು.

ಫರ್ಡಿನೆಂಡ್

ಒಡತಿಯಾಗಿರುವವಳು, ಇನಿಸಿಯೆ; ಅಂತೆ ನಾ
ಎಂದೆ ಇಂತೆ ವಿನೀತ.

ಮಿರಾಂಡಾ

ಅಂತಿರಲು, ನನ್ನಾಣ್ಮ.

ಫರ್ಡಿನೆಂಡ್

ಅಪ್ಪುದು. ಅದೋ ದಾಸ್ಯ, ಎಂದೇ ವಿಮೋಚನಕೆ
ಎನಿತು, 'ಅಸಿತೂ ಸಮ್ಮತಿಸುವ ಮನದಿಂದ. ಇಕೊ
ನನ್ನ ಕೈ.

ಮಿರಾಂಡಾ

ನನ್ನ ಕೈ, ಅದರಲಿಟ್ಟಿಹನನ್ನ
ಹೃದಯ, ಇಕೊ. ಆಯಿತೇ, ಇನ್ನರ್ಧತಾಸು ವರ
ಬೀಳುಕೊಡಿ, ಹರಕೆಗಳು.

ಫರ್ಡಿನೆಂಡ್

ಸಾವಿರದ ಸಾವಿರ.

(ಫರ್ಡಿನೆಂಡ್ ಇತ್ತ ಮಿರಾಂಡಾ ಅತ್ತ ಹೋಗುವರು.)

ಪ್ರಾಸ್ಪೆರೋ

ಇವರಿಗಿದರಿಂದೆನಿತು ಸಂತೋಷ ನನಗನಿತು
ಆಗುವುದಸಾಧ್ಯ. ಅಚ್ಚರಿಯ ಸಂಭವ ತೀರ
ಇವರಿಗಿದು. ಆದರೆಯು ಬೇರೆ ಏನನೆ ಕುರಿತು
ನಾನಿದಕೆ ಮಿಗಿಲು ಆನಂದಿಸೆನು. ನಾನೆನ್ನ
ಪುಸ್ತಕವ ಸಾರುವೆನು. ಏಕೆನಲು, ಹದನಿದಕೆ
ಸಂಬಂಧಿಸಿದ ತುಂಬ ಕರ್ತವ್ಯವನು ನಾನು
ಸಂಜೆಯೂಟದ ಹೊತ್ತಮುನ್ನ ನಡೆಸಿರಬೇಕು.

(ಹೋಗುತ್ತಾನೆ.)

ದೃಶ್ಯ ೨

ದ್ವೀಪದ ಇನ್ನೊಂದು ಭಾಗ.

(ಕ್ಯಾಲಿಬರ್ ಸ್ಟೆಫಾನೊ ಟ್ರಿಂಕ್ಯುಲೋ ಬರುತ್ತಾರೆ.
ಕ್ಯಾಲಿಬರ್ ಕೈಯಲ್ಲಿ ಒಂದು ಸೀಸೆ).)

ಸ್ಟೆಫಾನೊ

ಬಾಯಿಮುಚ್ಚು. ಪೀಪಾಯಿ ಬರಿದಾದಮೇಲೆ ನೀರು ಕುಡಿಯುವ ಮಾತು. ಒಂದು ತೊಟ್ಟು ಮುಂದಿಲ್ಲ. ಅಂದಮೇಲೆ ಧೈರ್ಯವಾಗಿರು, ಆನರಮೇಲೆ ಹಾಯಿ. ಬಾರೋ ವಿಕಾರಿ ದಾಸ, ನನಗೆ ಶುಭಕೋರಿ ಕುಡಿ.

ಟ್ರಿಂಕ್ಯುಲೋ

ವಿಕಾರಿ ದಾಸ! ಈ ದ್ವೀಪದ ಹುಚ್ಚನ್ನ ಏನೆಂಬ? ಹೇಳು ತಾರಿ ಈ ದ್ವೀಪದಲ್ಲಿರೋದು ಐದು ಜನ ಎಂತ. ಅದರಲ್ಲಿ ಮೂವರು ನಾವು. ಉಳಿದಿಬ್ಬರ ಮಿದುಳೂ ನಮ್ಮಂತೆ ಇದೆ ಎಂದರೆ ರಾಷ್ಟ್ರ ಅಲುತಾ ಇದೆ.

ಸ್ಟೆಫಾನೊ

ಕುಡಿ ಅಂದಾಗ ಕುಡಿಯೋ ವಿಕಾರಿ ದಾಸ. ನಿನ್ನ ಕಣ್ಣು ನಿನ್ನ ತಲೇಲಿ ಹತ್ತಹತ್ತಿರ ಕೆತ್ತಿ ನಿಂತಿವೆಯಲ್ಲೊ.

ಟ್ರಿಂಕ್ಯುಲೋ

ತಲೆಯಲಿಲ್ಲ. ಇನ್ನೆಲ್ಲಿ ಇರಬೇಕು ಅವು? ಕಣ್ಣು ಬಾಲದಲ್ಲಿ ಕೆತ್ತಿತ್ತು ಅಂದರೆ ದಿಟಕೆ ಅದೊಂದು ಚಂದದ ವಿಕಾರಿಆಗಬೇಕು!

ಸ್ಟೆಫಾನೊ

ನನ್ನ ಆಳು ಈ ವಿಕಾರಿ, ಅವನ ನಾಲಗೆಯನ್ನು ಸಾರಾಯಲ್ಲಿ ಮುಳುಗಿಸಿ ಬಿಟ್ಟಿದಾನೆ. ನನ್ನ ಮಾತಾದರೆ ನನ್ನನ್ನ ಸಮುದ್ರವೂ ಮುಳುಗಿಸಲಾರದು. ದಡ ಮುಟ್ಟೋ ಮುನ್ನ ನಾನು ಹೆಚ್ಚು ಕಡಮೆ ಮೂವತ್ತೈದು ಹರಿದಾರಿ ಈಜಿದೇನೆ. ಈ ಸೂರ್ಯನಾಣೆ. ಲಾ ವಿಕಾರಿ ನಿನ್ನನ್ನು ನನ್ನ ಸಹಾಯಕನ್ನ ಮಾಡಿಕೊಳ್ಳುತೇನೆ. ಇಲ್ಲದಿದ್ದರೆ ನನ್ನ ಧ್ವಜ.

ಟ್ರಿಂಕ್ಯುಲೋ

ಬೇಕೆಂದರೆ ಸಹಾಯಕ ಆದಾನು; ಇವನು ಧ್ವಜ ಅಲ್ಲ.

ಸ್ಟೆಫಾನೊ

ನಾವು ಓಡೋದು ಬೇಡ, ವಿಕಾರಿ ಮಹಾಶಯ.

ಟ್ರಿಂಕ್ಯುಲೋ

ನಡೆಯೋದು ಕೂಡ ಇಲ್ಲ. ನಾಯಿಗಳಂತೆ ಕೆಡೆಯುತೀರಿ; ಅದರಮೇಲೆ ಬಾಯೂ ತೆರೆಯೋದಿಲ್ಲ.

ಸ್ಟೆಫಾನೊ

ಲಾ ಪೆದ್ದಮಗನೆ, ಇರೋ ದಿನದಲ್ಲಿ ಒಂದುಸಲ ಬಾಯಿತೆರಿ, ನೀ ಒಳ್ಳೇ ಪೆದ್ದಮಗನಾಗಿದ್ದರೆ.

ಕ್ಯಾಲಿಬರ್

ತಮ್ಮ ಸನ್ನಿಧಿ ಸುಖವೇ? ನಿಮ್ಮ ಮೆಟ್ಟನ್ನು ನೆಕ್ಕುತ್ತೇನೆ, ಅಪ್ಪಣೆ ಕೊಡಿ. ನಾನು ಇವನ ಊಳಿಗ ಮಾಡೋಲ್ಲ; ಇವನು ಧೀರನಲ್ಲ.

ಟ್ರಿಂಕ್ಯುಲೋ

ನೀ ಬೊಂಕುತೀಯೋ, ತೀರ ತಿಳಿವಿಲ್ಲದ ವಿಕಾರಿ. ನಾನು

ಒಬ್ಬ ಕೊತ್ವಾಲನ್ನ ಧಿಕ್ಕರಿಸೋ ಸ್ಥಿತಿಯಲ್ಲಿದೇನೆ. ಯಾಕೋ, ಕುಡಿದು ಕೆಟ್ಟ ಮೀನೇ, ನಾನು ಇವತ್ತು ಕುಡಿದಿರೋಷ್ಟು ಹೆಂಡ ಕುಡಿದವನು ಯಾವನಾದರೂ ಒಬ್ಬ ಎಂದಿಗಾದರೂ ಅಂಜುಬುರುಕನಾಗಿರೋದು ಉಂಟೇನೋ? ಅರ್ಧ ಮೀನು ಅರ್ಧ ವಿಕಾರಿ ಆಗಿರೋ ನೀನು, ಪೂರಾ ವಿಕಾರಿಯಾದ ಈ ಸುಳ್ಳ ಹೇಳೀಯೇನೋ?

ಕ್ಯಾಲಿಬನ್

ನೋಡು ಇವನು ನನ್ನ ಹೇಗೆ ಅಪಹಾಸ್ಯ ಮಾಡುತಾನೆ. ಇವನ್ನ ಸುಮ್ಮನೆ ಬಿಡತೀಯಾ, ಪ್ರಭು?

ಟ್ರಿಂಕ್ಯುಲೋ

ಪ್ರಭುವಂತೆ! ಒಬ್ಬ ವಿಕಾರಿ ಇಂಥ ಹೆಡ್ಡನಾಗಿದಾನಲ್ಲಾ ಏನು ಹೇಳೋದು!

ಕ್ಯಾಲಿಬನ್

ನೋಡು, ನೋಡು, ತಿರಿಗೀ ಹಾಗೇ ಮಾಡುತಾನೆ. ಇವನ್ನ ಕಚ್ಚಿ ಕೊಲ್ಲು ನಿನ್ನ ಧರ್ಮ.

ಸ್ಟೆಫಾನೊ

ಟ್ರಿಂಕ್ಯುಲೋ, ನಿನ್ನ ತಲೇಲಿರೋ ನಾಲಗೆ ಅಷ್ಟು ಅಡಗಿರಲಿ. ನೀನು ವಿದ್ರೋಹಿ ಆದರೆ ಬರೋ ಮರಕ್ಕೆ ನೇಣು! ಬಡಪಾಯಿ ಈ ವಿಕಾರಿ ನನ್ನ ಪ್ರಜೆ. ನಾನು ಅವನಿಗೆ ಅವಮಾನ ಆಗುವುದಕ್ಕೆ ಬಿಡೋದಿಲ್ಲ.

ಕ್ಯಾಲಿಬನ್

ಉಪಕಾರವಾಯ್ತು ಘನ ನನ್ನ ಪ್ರಭು ; ನಾ ನಿಮಗೆ
ಅರಿಕೆ ಮಾಡಿದ ಬೇಡಿಕೆಯ ಮರಳಿ ಕೇಳುವಿರ?

ಸ್ಟೆಫಾನೊ

ಅಡ್ಡಿ ಇಲ್ಲ ಕೇಳುತೇನೆ. ಮಂಡಿಯೂರಿ ತಿರುಗಿ ಹೇಳಿಕೋ. ನಾ ನಿಂತಿರುತೇನೆ.

(ಏರಿಯೆಲ್ ಅದೃಶ್ಯವಾಗಿ ಬರುತ್ತದೆ.)

ಕ್ಯಾಲಿಬನ್

ನಾ ಮೊದಲೇ ನಿಮಗೆ ಅರಿಕೆ ಮಾಡಿದ್ದಂತೆ ನಾ ಒಬ್ಬ ಕ್ರೂರಿ ಮಂತ್ರವಾದಿಗೆ ಅಧೀನನಾಗಿದೇನೆ. ಅವನು ತನ್ನ ತಂತ್ರದ ಮೂಲಕ ಈ ದ್ವೀಪವನ್ನು ನನ್ನಿಂದ ಕಸಿದುಕೊಂಡಿದಾನೆ.

ಏರಿಯೆಲ್

ನೀ ಬೊಂಕುತೀ.

ಕ್ಯಾಲಿಬನ್

ನೀ ಬೊಂಕುತೀಯೊ, ಎಲ ನಗೆಗಾರ ಮಂಗನೆ!
ಧೀರ ನನ್ನೊಡೆಯ ನಿನ್ನನ್ನು ಕೊಂದರಿದ್ದೀತು
ಎಂದೆನಿಸುತಿದೆ ನನಗೆ–ನನ್ನ ನುಡಿ ಬೊಂಕಲ್ಲ.

ಸ್ಟೆಫಾನೊ

ಟ್ರಿಂಕ್ಯುಲೋ, ನೀ ತಿರಿಗಿ ಅವನ ಮಾತಿನಲ್ಲಿ ಅವನಿಗೆ ತೊಂದರೆ ಮಾಡಿದಿ ಅಂದರೆ, ಈ ಕೈ ಆಣೆ ನಾ ನಿನ್ನ ಹಲ್ಲು ಒಂದಷ್ಟನ್ನು ಉದುರಿಸುತ್ತೇನೆ.

ಟ್ರಿಂಕ್ಯುಲೋ

ಎಲ, ನಾ ಏನೂ ಹೇಳಲಿಲ್ಲವೆ!

ಸ್ಟೆಫಾನೊ

ಅಂದಮೇಲೆ ಗಪ್‌ಚಿಪ್. ಸೊಲ್ಲು ಬೇಡ. (ಕ್ಯಾಲಿಬನ್‌ಗೆ) ಮುಂದಕ್ಕೆ ಹೇಳು.

ಕ್ಯಾಲಿಬನ್

ನಾ ಹೇಳಿದೆನೆ, ಮಂತ್ರ ಮಾಡಿ ಈ ದ್ವೀಪವನು
ಅವನು ಪಡೆದನು. ನನ್ನ ಕೈಯಿಂದ ತಪ್ಪಿಸಿ
ಪಡೆದನು. ನಿಮ್ಮ ಉನ್ನತಿ ಯುಕ್ತ ಎಂದೆಣಿಸೆ
ಅವನಮೇಲೀ ಸೇಡ ಹರಿಸಿ. ಏಕೆನೆ ನೀವು,
ನಾ ಬಲ್ಲೆ, ಇಂತೆಸಗಬಲ್ಲ ಧೀರರು; ಪ್ರಾಣಿ
ಇದಕೆ ಇಲ್ಲಾ ಧೈರ್ಯ.

ಸ್ಟೆಫಾನೊ

ಇದರಲ್ಲಿ ಸಂದೇಹವಿಲ್ಲ.

ಕ್ಯಾಲಿಬನ್

ನೀವಿದರ ಪ್ರಭುವಾಗಿ ; ನಾ ನಿಮಗೆ ಸೇವೆ ಮಾಡುತೇನೆ.

ಸ್ಟೆಫಾನೊ

ಹೌದು, ಈಗ ಇದನ್ನು ಸ್ಥಾಪಿಸುವ ಬಗೆ ಏನು? ನೀನು ನನ್ನನ್ನ ಆತನ ಬಳಿಗೆ ಒಯ್ಯುವಿಯಾ?

ಕ್ಯಾಲಿಬನ್

ಒಯ್ಯುವೆನು ಪ್ರಭು, ಒಯ್ಯುವೆನು ; ನಿದ್ರಿಸುವ ವೇಳೆ
ಅವನ ನಾ ನಿಮಗೊಪ್ಪಿಸುವೆನು; ಅಲ್ಲಿಯೆ ನೀವು
ಅವನ ತಲೆಯೊಳಕೆ ಒಂದಾಣಿ ಪೆಟ್ಟಲುಬಹುದು.

ಏರಿಯೆಲ್

ನೀ ಬೊಂಕುತೀ ; ಇದ ನೀ ಮಾಡಲಾರೆ.

ಕ್ಯಾಲಿಬನ್

ಇದು ಯಾತರದು, ಒಂದು ಬೆರಕೆ ಕುನ್ನಿ. ಎಲಾ
ಕಜ್ಜಿಬಾಕ ವಿದೂಷಕ—ನಿಮ್ಮ ಉನ್ನತಿಯ
ಬೇಡಿಕೊಂಬೆನು, ಇವನಿಗೆರಡು ಕೊಡಿ. ಇವನಿಂದ
ಇವನ ಕೈ ಸೀಸೆಯನು ಕಿತ್ತುಕೊಳ್ಳಿರಿ. ಅದು
ಹೋದಮೇಲಿವನು ಚೌಳನು ಬಿಟ್ಟು ಬೇರೆ ಅದು
ಏನನೂ ಕುಡಿಯದಂತೆಸಗುವೆನು. ಏಕೆನಲು
ತಿಳಿನೀರ ಚಿಲುಮೆ ಇರುವೆಡೆ ತೋರೆ ನಾನಿವಗೆ.

ಸ್ಟೆಫಾನೊ

ಟ್ರಿಂಕ್ಯುಲೋ, ಇನ್ನು ಮುಂದೆ ನೀನು ಅಪಾಯಕ್ಕೆ ತಲೆಕೊಡಬೇಡ. ವಿಕಾರಿಯ ಮಾತನ್ನು ಇನ್ನು ಒಂದು ಬಾರಿ ನೀ ತಡದೀ ಅಂದರೆ, ನನ್ನ ಕೈಯಾಣೆ, ನಾನು ಕರುಣೇ ಅನ್ನೋದನ್ನ ಬೈಲಿಗಟ್ಟಿ ನಿನ್ನ ಏಡಿಮಾಡಿ ಚಚ್ಚುತೇನೆ.

ಟ್ರಿಂಕ್ಯುಲೋ

ಎಲ ನಾ ಏನ ಮಾಡಿದೆ? ಏನೂ ಮಾಡಲಿಲ್ಲವಲ್ಲ. ನಾ ದೂರ ನಿಲ್ಲತೇನೆ.

ಸ್ಟೆಫಾನೊ

ಅವನು ಬೊಂಕಿದ ಅಂತ ನೀ ಹೇಳಲಿಲ್ಲ?

ಏರಿಯೆಲ್

ನೀ ಬೊಂಕುತೀ.

ಸ್ಟೆಫಾನೊ

ನಾ ಬೊಂಕುತೇನಾ? ಕೋ ಇದ (ಟ್ರಿಂಕ್ಯುಲೋವನ್ನು ಹೊಡೆಯುತ್ತಾನೆ.) ಇದು ರುಚಿಯಾಗಿದ್ದರೆ ಇನ್ನೊಂದು ಸಲ ನನ್ನ ಸುಳ್ಳ ಅನ್ನು.

ಟ್ರಿಂಕ್ಯುಲೋ

ನಾ ನಿನ್ನ ಸುಳ್ಳ ಅನ್ನಲಿಲ್ಲ. ನಿನದೇನು ಬುದ್ಧಿ ಕಿವಿ ಎರಡೂ ಕೆಟ್ಟಿದೆಯೇನು? ನಿನ್ನ ಸೀಸೆ ಹಾಳಾಗ! ಹೀಗಾ ಡಿಸುತ್ತೆ ಸಾರಾಯಿ, ಅದನ್ನ ಕುಡಿಯೋದು. ನಿನ್ನ ವಿಕಾರಿಗೆ ದೊಡ್ಡರೋಗ ಬರಲಿ; ನಿನ್ನ ಬೆರಳು ದೆವ್ವನ ಪಾಲಾಗಲಿ.

ಕ್ಯಾಲಿಬನ್

ಹ ಹ ಹ

ಸ್ಟೆಫಾನೊ

ಎಲ್ಲಿ ನಿನ್ನ ಕತೆ ಮುಂದೆ ಹೇಳು;—ನಿನ್ನ ಧರ್ಮ ಇನ್ನಷ್ಟು ದೂರ ನಿಲ್ಲು.

ಕ್ಯಾಲಿಬನ್

ಇವನ ಸಾಕನಿತು ಹೊಡೆ; ತುಸು ಹೊತ್ತ ತರುವಾಯ
ನಾನೂ ಅವನ ಹೊಡೆವೆ.

ಸ್ಟೆಫಾನೊ

ಇನ್ನನಿತು ದೂರ ನಿಲು;
ಬಾ, ಹೇಳು.

ಕ್ಯಾಲಿಬನ್

ಆಯಿತೇ, ನಾನಿನಗೆ ತಿಳಿಸಿದೆನೆ,
ಅಂತೆ, ನಡು ಹಗಲು, ಮಲಗುವುದವನ ವಾಡಿಕೆ.
ಅಲ್ಲಿ ಆತನನು, ಮೊದಲವನ ಪುಸ್ತಕಗಳನು
ಹಿಡಿದುಕೊಂಡವನೆ, ನೀ ತಲೆ ಒಡೆಯೆ ಬರುವುದು.
ಇಲ್ಲವೇ ಒಂದು ತುಂಡಿಂದ ಮಂಡೆಯು ಜಜ್ಜು.
ಇಲ್ಲವೇ ದಸಿಯೊಂದ ಕೊಂಡು ಬೊಜ್ಜೆಯನು ತಿವಿ.
ಇಲ್ಲವೇ ನಿನ್ನ ಚೂರಿಯಲಿ ಕಂಠವನು ಕೊಯ್.
ನೆನಪಾಗಿ ಅವನ ಪುಸ್ತಕಗಳನು ಮೊದಲು ಹಿಡಿ.
ಏಕೆನಲು, ಅವು ಇಲ್ಲದಿರೆ ಅವನು ನಾ ಎಂತು
ಅಂತೆ ಪಶು ಒಂದು; ಆಗವನಾಜ್ಞೆಯನು ನಡಸೆ
ಒಂದು ಚೇತನವಿಲ್ಲ. ನಾನೆಂತು ಅವು ಎಲ್ಲ
ಅಂತೆ ದೃಢ ಅವನ ಹಗೆವವು. ಅವನ ಪುಸ್ತಕವ
ಸುಡುಮಾತ್ರ. ಚೆಲುವಾದ ಉಪಕರಣ–ಅವನವನು
ಇಂತೆಂದು ಕರೆಯುವನು,–ಉಂಟು ಅವನಲಿ. ತನತು
ಮನೆ ಒಂದು ಆದಾಗ ಅವುಗಳಿಂದವನು ಅದ
ಸಿಂಗರಿಸುವವನು. ಮೇಲಾಗಿ, ಎಲ್ಲಕು ಮಿಗಿಲು
ಎಣಿಸತಕ್ಕುದು ಅವನ ಮಗಳ ಚೆಲುವು. ಅವನೆ
ಅವಳನನುಪಮೆ ಎನ್ನುವನು. ಸಿಕೋರಾ, ನನ್ನ
ತಾಯಿ, ಇವಳು, ಇವರ ಹೊರತು ಬೇರೆಯ ಹೆಣ್ಣ
ನಾನು ಕಂಡವನಲ್ಲ. ಎಂತೂ ಸಿಕೋರಳಿಗೆ
ಇವಳು ಶೂನ್ಯಕೆ ಪೂರ್ಣ ಎನಿತನಿತು ಮಿಗಿಲು ಚೆಲು.

ಸ್ಟೆಫಾನೊ

ಅಂಥ ಚೆಂದುಳ್ಳಿ ಕೈನೆ?

ಕ್ಯಾಲಿಬನ್

ಹೌದು ಪ್ರಭು ದೃಢ ನುಡಿವೆ
ನಿನ್ನ ಹಾಸಲಿ ಚೆಂದ ಕಾಣುವಳು; ಚೆನ್ನನವು
ಮರಿಗಳನು ನಿನಗೆ ಹೆರುವಳು.

ಸ್ಟೆಫಾನೊ

ವಿಕಾರಿ, ನಾನು ಈ ಮನುಷ್ಯನನ್ನ ಕೊಲ್ಲುತ್ತೇನೆ. ಅವನ ಮಗಳು ನಾನು ರಾಜಾ ರಾಣಿ ಆಗುತೇನೆ. ಆಯಿತು ರಾಜಾ ರಾಣಿ. ಅಂತೆ, ಟ್ರಿಂಕ್ಯುಲೋ ನೀನು ಪಂತ ಪ್ರತಿನಿಧಿಗಳಾಗಿ. ತಂತ್ರ ನಿನಗೆ ಚೆನ್ನ ಕಾಣುತ್ತೆಯೆ, ಟ್ರಿಂಕ್ಯುಲೊ?

ಟ್ರಿಂಕ್ಯುಲೋ

ಅಪರಂಜಿ.

ಸ್ಟೆಫಾನೊ

ನಿನ್ನ ಕೈ ತಾ. ನಿನ್ನ ಹೊಡದದ್ದು ತಪ್ಪಾಯಿತು. ಆದರೂ ಉಸಿರೋ ಅಷ್ಟು ದಿನ ನಿನ್ನ ತಲೇಲಿರೋ ನಾಲಗೆ ಎಚ್ಚರ ಇರಲಿ.

ಕ್ಯಾಲಿಬನ್

ಇನ್ನೊಂದುಗಳಿಗೆ ಮುನ್ನವನು ನಿದ್ರೆಯೊಳಿಹನು;
ಅವನ ಆ ವೇಳೆ ಕೊಲ್ಲುವೆಯ?

ಸ್ಟೆಫಾನೊ

ಕೊಲ್ಲುವೆ, ಆಣೆ.

ಏರಿಯಲ್

ಇದ ನನ್ನ ಒಡೆಯರಿಗೆ ತಿಳಿಸುವೆನು.

ಕ್ಯಾಲಿಬರ್ಣ

ನಿನ್ನ ನುಡಿ ನನಗೆ ಹರ್ಷವ ನೀಡಿಹುದು. ನನಗೆ
ತುಂಬ ಸಂತೋಷ. ಬಾ ಬಿನದವಾಡುವ. ತುಸವೆ
ಮುನ್ನ ನೀ ನನಗೆ ಕಲಿಸಿದ ಪಲ್ಲವಿಯ ನುಡಿಯ
ಹಾಡುವೆಯ ?

ಸ್ಟೆಫಾನೊ

ನೀ ಕೇಳಿದೆ ಎಂತ ವಿಕಾರಿ, ನಾನು ಯುಕ್ತವಾದದ್ದು ಏನನ್ನಾದರೂ ಮಾಡುತ್ತೀನೆ. ಯುಕ್ತವಾದದನ್ನ. ಬಾ, ಟ್ರಿಂಕ್ಯುಲೋ ; ಜೊತೆಗೆ ಹಾಡು. (ಹಾಡುತ್ತಾನೆ.)
ಅಟ್ಟು ಅವರ; ಕುಟ್ಟು ಅವರ; ಅವರ ಕುಟ್ಟು; ಅವರನಟ್ಟು;
ಎಣಿಕೆಗೆ ತಡೆಯೇ ?

ಕ್ಯಾಲಿಬರ್ಣ

ಅದಲ್ಲ ರಾಗ.

(ಏರಿಯೆಲ್ ರಾಗವನ್ನು ಕೊಳಲು ತಮ್ಮಟೆಯ ಮೇಲೆ ನುಡಿಸುತ್ತದೆ.)

ಸ್ಟೆಫಾನೊ

ಇದು ಏನಿದು ?

ಟ್ರಿಂಕ್ಯುಲೋ

ಇದು ನಮ್ಮ ಹಾಡಿನ ರಾಗ; ಇಲ್ಲಪ್ಪನ ಗೊಂಬೆ ನುಡಿಸುತಾ ಇದೆ.

ಸ್ಟೆಫಾನೊ

ನೀ ಒಬ್ಬ ಮನುಷ್ಯ ಆದರೆ ನೀ ಇರುವಂತೆ ಕಣ್ಣಿಗೆ ಕಾಣು; ದೈಯ ಆಗಿದ್ದರೆ ಈ ನಾತನ್ನ ನಿನ್ನ ಇಷ್ಟದಂತೆ ತಕ್ಕೊ.

ಟ್ರಿಂಕ್ಯುಲೋ

ತಪ್ಪೊಪ್ಪಿ ಕಾಯಿ ಅಪ್ಪ.

ಸ್ಟೆಫಾನೊ

ಸತ್ತಮೇಲೆ ಸಾಲ ಇಲ್ಲ; ಬೇಕಾದ್ದು ಮಾಡು ; ದೇವರೇ ಕಾಪಾಡು.

ಕ್ಯಾಲಿಬರ್ಣ

ನಿನಗೆ ಭಯವೇ ?

ಸ್ಟೆಫಾನೊ

ಇಲ್ಲಪ್ಪೋ, ವಿಕಾರಿ ; ಭಯ ಏತರದು ?

ಕ್ಯಾಲಿಬರ್ಣ

ಭಯ ಬೇಡ. ದ್ವೀಪದಲಿ ತುಂಬ ಇವೆ ಶಬ್ದಗಳು :
ಸುಖವ ನೀಡುವ, ನೋವ ಕೊಡದ, ಇನಿ ದನಿ ರಾಗ.
ಕೆಲವೇಳೆ ಒಂದು ಸಾವಿರ ಮಿಡಿವ ವಾದ್ಯಗಳು,
ನನ್ನ ಕಿವಿಯೆಡೆ ಗುಂಜಿಸುವುವು ; ಕೆಲ ಹೊತ್ತಿನಲಿ
ಇಂಥ ಕಂಠಗಳು, ಬಹು ಹೊತ್ತು ನಿದ್ದಿಸಿ ಆಗ
ಎದ್ದಿದ್ದರೆಯು, ನನ್ನ ಮರಳಿ ನಿದ್ರಿಸುವಂತೆ
ಮಾಡುವವು. ಆ ನಿದ್ದೆಯಲೊ, ನನಗೆ ಕನಸಿನಲಿ
ಮೋಡಗಳು ತೆರೆದಂತೆ, ನನ್ನ ಮೇಗಡೆ ಸುರಿಯೆ
ಅಣಿಯಾದ ಸಂಪತ್ತುಗಳನು ತೋರಿಸಿದಂತೆ,
ಕಾಣುವುದು. ಇಂತಾಗಿ ನಾನು, ಎಚ್ಚತ್ತವನು,
ನಿದ್ರೆಬರಲೆಂದು ಅತ್ತಿಹೆನು.

ಸ್ಟೆಫಾನೊ

ಇದು ನನಗೆ ಒಳ್ಳೇ ರಾಜ್ಯ ಆಗುತ್ತೆ. ಕಾಸು ಕೊಡದೇನೆ ಬೇಕಾದ ಸಂಗೀತ ಕೇಳಬಹುದು.

ಕ್ಯಾಲಿಬರ್ಣ

ಪ್ರಾಸ್ಪೆರೋನ ಕೊಂದನೋಲೆ.

ಸ್ಟೆಫಾನೊ

ಹೊತ್ತು ಬಂದಾಗ ಅದು ಆಗುತ್ತೆ. ಕತೆ ನನಗೆ ನೆನಪಿದೆ.

ಟ್ರಿಂಕ್ಯುಲೋ

ಶಬ್ದ ಹೊರಟು ಹೋಗುತಿದೆ. ಅದರ ಹಿಂದೆ ಹೋಗಿ ಆಮೇಲೆ ನಾವು ನಮ್ಮ ಕೆಲಸ ಮಾಡೋಣ.

ಸ್ಟೆಫಾನೊ

ಮುಂದೆ ನಡೆಯೋ, ವಿಕಾರಿ. ನಾವು ಹಿಂದೆ ಬರತೇವೆ. ಈ ತಮ್ಮಟೆಗಾರ ಕಣ್ಣಿಗೆ ಬಿದ್ದರೆ ಇದ್ದೀತೆ ! ಪೂರಾ ಚಚ್ಚುತಿದಾನೆ ! ಬಂದಿಯಾ ?

ಟ್ರಿಂಕ್ಯುಲೋ

ಬಂದೆ, ಸ್ಟೆಫಾನೊ.

(ಹೋಗುತ್ತಾರೆ.)

(ಮುಂದುವರಿಯುವುದು)

" ಜೀಟ "

ಶ್ರೀ ಪಿ. ಶ್ರೀನಿವಾಸರಾವ್

ವಿಜ್ಞಾನ ಪ್ರಪಂಚದಲ್ಲಿ ಈಚೆಗೆ ಕಂಡು ಬಂದಿರುವ ಸರ್ವತೋಮುಖವಾದ ಪ್ರಗತಿ ಅದ್ಭುತವಾಗಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಆಗಿಂದಾಗ್ಗೆ 'ZETA' ವಿಚಾರವನ್ನು ಕುರಿತ ಸುದ್ದಿಗಳು ವರ್ತಮಾನ ಪತ್ರಿಕೆಗಳಲ್ಲಿ ಸಂಗ್ರಹವಾಗಿ ಕಾಣಬಂದಿವೆ. ಈ ಸಂಶೋಧನೆಯ ಮೂಲ ಉದ್ದೇಶ, ಈಗ ಸಾಧಿಸಲ್ಪಟ್ಟಿರುವ ಅಂಶಗಳು, ಮತ್ತು ಮುಂದೆ ಇದರ ಫಲವಾಗಿ ದೊರೆಯ ಬಹುದೆಂದು ನಿರೀಕ್ಷಿಸಲಾಗಿರುವ, ವಿಚಾರಗಳು ಇವುಗಳನ್ನು ಕುರಿತು ಕೆಲವು ವಿವರಗಳನ್ನು ಈಗ ತಿಳಿಸುವೆನು. ಈ ಸಂಶೋಧನೆಯು ನಡೆದಿರುವ ಕ್ರಮವನ್ನು ಗಮನಿಸಿ ಆಳವಾಗಿ ಆಲೋಚಿಸಿದರೆ ಮಾನವನ ಪೌರುಷಕ್ಕೆ ಮಿತಿಯುಂಟೆ? ಎನ್ನಿಸುತ್ತದೆ.

ಬ್ರಿಟನ್ನಿನಲ್ಲಿ ಹಾರ್ವೆಲ್ (Harwell) ಎಂಬಲ್ಲಿ ಪರಮಾಣು ವಸ್ತುವಿನಿಂದ ಶಕ್ತಿಯನ್ನು ನಮ್ಮ ಇಚ್ಛೆಗನುಸಾರವಾಗಿ ಬಳಸಲು ಅನುಕೂಲಿಸುವಂಥ ಸಂಶೋಧನೆಗಳನ್ನು ನಡೆಸುವ ವಿಜ್ಞಾನಮಂದಿರ ಒಂದಿದೆ.

ಅಲ್ಲಿ ಯುರೇನಿಯಂ ಧಾತುವಿನ ಅಣುಗಳು ಒಡೆದು ಅಷ್ಟು ಭಾರವಿಲ್ಲದ ಇತರ ಅಣುಗಳಾಗಿ ಮಾರ್ಪಡುವಂತೆ ಪ್ರೇರೇಪಿಸಲು ಅವಶ್ಯಕವಾದ ವಾತಾವರಣವನ್ನು ಕಲ್ಪಿಸಿ 'ರೀಆಕ್ಟರ್' ಎಂಬ ಹೆಸರಿನ ಯಂತ್ರಗಳನ್ನು ನಿರ್ಮಿಸಿದ್ದಾರೆ. ಕಳೆದ ಯುದ್ಧದಲ್ಲಿ ಆಟಂ ಬಾಂಬ್ ಎಂಬ ಹೆಸರಿನ ಮಾರಣಾಸ್ತ್ರಕ್ಕೆ ಚೈತನ್ಯ ಕೊಟ್ಟ ಪರಮಾಣು ಶಕ್ತಿಯನ್ನು ಈಗ ಈ ರೀಆಕ್ಟರ್‌ಗಳ ಸಹಾಯದಿಂದ ಮನುಷ್ಯನ ನೆಮ್ಮದಿಗೆ ನೆರವಾಗುವಂತೆ ಏರ್ಪಡಿಸುವ ಶಕ್ತಿಯನ್ನು ಪಡೆಯುವ ಕ್ರಮಗಳಲ್ಲಿ ಇದು ಮೊದಲನೆಯದಾದರೂ, ಈಚೆಗೆ ಇದಕ್ಕಿಂತಲೂ ಉತ್ತಮವಾದ ಇನ್ನೊಂದು ಮಾರ್ಗವಿದೆ ಎಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಈ ಮಾರ್ಗದಲ್ಲಿ, ಹಗುರವಾದ ಪರಮಾಣುಗಳನ್ನು ಒಂದಕ್ಕೊಂದು ಬಲವಾಗಿ ಕಚ್ಚಿಕೊಂಡಿರುವಂತೆ ಬೆಸೆದು ಹೆಚ್ಚಿನ ತೂಕದ ಪರಮಾಣುವನ್ನು ಸೃಷ್ಟಿಸಿದರೆ, ಈ ಕಾರ್ಯ ನಡೆಯುವಾಗ ಸ್ವಲ್ಪ ಭಾಗ ವಸ್ತುವು ಮಾಯವಾಗಿ ಅದಕ್ಕೆ ಸಮಾನವಾದ ಶಕ್ತಿ ಉತ್ಪನ್ನವಾಗುತ್ತದೆ. ಅತ್ಯಂತ ಹಗುರವಾದ ಪರಮಾಣು (Hydrogen) ಜಲಜನಕದ್ದು. ಪರಮಾಣುಗಳನ್ನು ಅವುಗಳ ತೂಕಕ್ಕನುಸಾರವಾಗಿ ತೋರಿಸುವ ಪಟ್ಟಿಯಲ್ಲಿ ಇದು ಮೊದಲನೆಯ ಸ್ಥಾನದಲ್ಲಿದೆ. ಇದರನಂತರ ಎರಡನೆಯ ಮನೆಯಲ್ಲಿ Helium ಹೀಲಿಯಂ ಧಾತುವನ್ನು ಕಾಣುತ್ತೇವೆ. ಹಗುರವಾದ ಹೈಡ್ರಜನ್ ಪರಮಾಣುಗಳನ್ನು ಹೇಗಾದರೂ ಮಾಡಿ ಬೆಸೆದು ಹೀಲಿಯಂ ಅಣುವನ್ನು ಸೃಷ್ಟಿಸಬೇಕೆಂಬುದೇ ಮೂಲ ಉದ್ದೇಶ. ಸೂರ್ಯಮಂಡಲದಿಂದ, ಇತರ ನಕ್ಷತ್ರಗಳಿಂದ ನಿರಂತರವೂ ಹೊರ ಹೊಮ್ಮುತ್ತಿರುವ ಶಕ್ತಿಯ ಪ್ರವಾಹ ಈ ಕ್ರಮದಲ್ಲಿ ಉತ್ಪನ್ನವಾದುದೆಂದು ವಿಜ್ಞಾನಿಗಳು ನಂಬಿದ್ದಾರೆ. ಸೂರ್ಯನ ಅಂತರಾಳದಲ್ಲಿ ಕಾವಿನ ಮಟ್ಟ ೧೫ ಮಿಲಿಯನ್ (೧ ಕೋಟಿ ೫೦ ಲಕ್ಷ) ಡಿಗ್ರಿಗಳು. ಅನೇಕ ಇತರ ನಕ್ಷತ್ರಗಳ ಒಳಗೆ ಇದಕ್ಕಿಂತಲೂ ಅನೇಕ ಪಾಲು ಹೆಚ್ಚಿನ ಕಾವು ಇದೆ. ಈ ತೀಕ್ಷ್ಣತೆಯ ಬೆಸೆಯಿಂದ ಅಲ್ಲಿನ ಪರಮಾಣುಗಳೆಲ್ಲಾ ಅತ್ಯಂತ ರಭಸವಾಗಿ ಎಲ್ಲ ದಿಕ್ಕುಗಳಲ್ಲೂ ಓಡಾಡುತ್ತಿವೆ. ಮತ್ತು ಆಗಿಂದಾಗ ಡಿಕ್ಕಿ ಹೊಡೆಯುತ್ತವೆ. ಹೀಗಾಗಿ ಪರಮಾಣುವಿನ ಹೊರವಲಯದಲ್ಲಿರುವ ಎಲೆಕ್ಟ್ರಾನ್ ಎಂಬ ವಿದ್ಯುತ್ಕಣಗಳೆಲ್ಲಾ ಕಳಚಿ ಬಿದ್ದು ಬೇರೆಯಾಗಿರುತ್ತವೆ. + ಜಾತಿಯ ವಿದ್ಯುತ್ತನ್ನು ಪಡೆದಿರುವ ಪರಮಾಣು ವಸ್ತುವಿನ Nuclei (ಅಂತರ್ಬೀಜ)ಗಳೂ, ಈ ಎಲೆಕ್ಟ್ರಾನ್‌ಗಳೂ, ಎಲ್ಲೆಡೆಯಲ್ಲೂ ತುಂಬಿರುತ್ತವೆ. ಇದಕ್ಕೆ "ಪ್ಲಾಸ್ಮ" ಎಂದು ಹೆಸರು. ಸಾಮಾನ್ಯ ಸಂದರ್ಭಗಳಲ್ಲಿ ಎರಡು ನ್ಯೂಕ್ಲಿಯಾಯ್‌ಗಳು ಸಜಾತಿಯ ವಿದ್ಯುತ್ತಿರುವುದರಿಂದ ಪರಸ್ಪರ ದೂಡಿದರೂ, ಕಾವಿನ ತೀಕ್ಷ್ಣತೆಯಿಂದ ಏರ್ಪಟ್ಟ ವೇಗದ ಬಲದಿಂದ ಇವು ಸಂಧಿಸಿ ಬೆಸುಗೆ ಮಾಡಿದಂತೆ ಕಚ್ಚಿಕೊಳ್ಳಬಲ್ಲವು. ಹೀಗಾದಾಗ ಹೀಲಿಯಂ ಅಣುವು ಕಾಣಿಸಿಕೊಳ್ಳುತ್ತದೆ. ಮತ್ತು ವಿಶೇಷ ಪ್ರಮಾಣದಲ್ಲಿ ಶಕ್ತಿ ಹೊರ ಹೊಮ್ಮುತ್ತದೆ.

ನಕ್ಷತ್ರಗಳ ಗರ್ಭದಲ್ಲಿ ನಡೆಯುತ್ತಿರುವ ಈ ಪರಮಾಣು ಸಂಯೋಗವನ್ನು ಇಲ್ಲಿ, ನಮ್ಮ ಭೂಮಿಯ ಮೇಲೆ ನಮ್ಮ ವಿಜ್ಞಾನ ಮಂದಿರಗಳಲ್ಲಿ ಆಗುವಂತೆ ಏರ್ಪಡಿಸಬೇಕೆಂಬ ಹೆಬ್ಬಯಕೆ ವಿಜ್ಞಾನಿಗಳಿಗೆ ಕೆಲವು ವರ್ಷಗಳ ಹಿಂದಿನಿಂದಲೂ ಇದೆ. ಆದರೆ ಅದನ್ನು ಕಾರ್ಯದಲ್ಲಿ ಸಾಧಿಸಲು ಅವಶ್ಯಕವಾದ ತಂತ್ರ ಕೌಶಲ ಈಗತಾನೆ ಸ್ವಲ್ಪಮಟ್ಟಿಗೆ ಬೆಳೆದಿದೆ. ಹಾರ್ವೆಲ್‌ನಲ್ಲಿನ ವಿಜ್ಞಾನಿಗಳು ಈ ಮಹಾ

ಕಾರ್ಯಸಾಧನೆಯಲ್ಲಿ ಮೊದಲನೆಯ ಮೆಟ್ಟಿಲನ್ನು ಈಗ ಹತ್ತಿದ್ದಾರೆ. ಅವರ ಪ್ರಯೋಗ ಪರೀಕ್ಷೆಯ ಪರಿಚಯವನ್ನು ಸಂಗ್ರಹವಾಗಿ ಈಗ ತಿಳಿಸುತ್ತೇನೆ.

ಜಲಜನಕದ ಪರಮಾಣುಗಳನ್ನು ಚೆನ್ನಾಗಿ ಗಮನಿಸಿದರೆ ಅವುಗಳಲ್ಲಿ ಎರಡು ಬಗೆ ಇವೆ ಎಂಬುದು ತಿಳಿಯುತ್ತದೆ. ಸುಮಾರು ಹತ್ತು ಸಾವಿರ ಸಾಮಾನ್ಯ ಜಾತಿಯ ಅಣುಗಳೊಂದಿಗೆ ಸರಾಸರಿ ಎರಡು ವಿಶೇಷ ಬಗೆಯ ಅಣುಗಳು ಬೆರೆತಿರುತ್ತವೆ. ಹೇರಳವಾಗಿರುವ ಸಾಮಾನ್ಯ ಅಣುಗಳ ತೂಕ ೧ ಅಂಶವಾದರೆ, ಈ ವಿಶೇಷ ಬಗೆಯವುಗಳ ತೂಕ ೭. ಈ ಕಾರಣದಿಂದ ಇವುಗಳನ್ನು Deuteron ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಎರಡು "ಡ್ಯೂಟೆರಾನ್" ಗಳ ಬೆಸುಗೆಯಿಂದ ೪ ಅಂಶ ತೂಕ ಉಳ್ಳ ಹೀಲಿಯಂ ಪರಮಾಣು ಏರ್ಪಡುತ್ತದೆ. ಪರೀಕ್ಷೆಗೆ ಸಿದ್ಧಪಡಿಸಿರುವ ಕೊಳವಿಯಲ್ಲಿ ಮುಂಚಿತವಾಗಿಯೇ ಸಿದ್ಧಪಡಿಸಿಕೊಂಡಿರುವ ಈ ಡ್ಯುಟೆರಾನ್ ಅಣುಗಳನ್ನು ತುಂಬಿ ಅದರ ಒತ್ತಡವು ತೀರಕಡಮೆ ಇರುವಂತೆ (ಸುಮಾರು ೧/೧೦೦೦ mm of Hg.) ಪಂಪುಗಳಿಂದ, ಅನಾವಶ್ಯಕವಾದ ಗಾಳಿಯನ್ನು ಹೊರಕ್ಕೆ ತೆಗೆದು ಹಾಕುತ್ತಾರೆ. ಈ ಕೊಳವಿಯನ್ನು ಗುಂಡಗೆ ಚಕ್ರಾಕಾರದಲ್ಲಿ ಬಗ್ಗಿಸಿ ಕೊನೆಗಳನ್ನು ಸೇರಿಸಿ ಕೋಡಬಳೆಯ ಆಕಾರದಲ್ಲಿ ಮಾಡಿದ್ದಾರೆ. ಸುಮಾರು ೧ ಅಂಗುಲ ದಪ್ಪದ ಅಲ್ಯುಮೀನಿಯಂ ತಗಡಿನಿಂದ ಮಾಡಿರುವ ಈ ಕೊಳವಿಯ ಒಳ ಭಾಗದ ವ್ಯಾಸ ಸುಮಾರು ೩೯ ಅಂಗುಲಗಳು. ಒಳ್ಳೆಯ ರೂಪದಲ್ಲಿರುವ ಇದರ ಸರಾಸರಿ ವ್ಯಾಸ ಸುಮಾರು ೧೦ ಅಡಿಗಳು. ಇದರಲ್ಲಿನ ಡ್ಯೂಟೆರಾನ್ ಅನಿಲದಲ್ಲಿ ವಿದ್ಯುತ್ಪ್ರವಾಹವೇರ್ಪಡುವಂತೆ ಮಾಡಲು ಟ್ರಾನ್ಸ್‌ಫಾರ್ಮರ್‌ಗಳೆಂಬ ವಿದ್ಯುತ್ಪ್ರವಾಹವನ್ನು ಪ್ರೇರೇಪಿಸುವ ಅಗಾಧವಾದ ಯಂತ್ರಗಳನ್ನು ಬಳೆಯ ಆಕಾರದ ಕೊಳವಿಗೆ ಹೊಂದಿಕೊಂಡಿರುವಂತೆ ನಿರ್ಮಿಸಿದ್ದಾರೆ. ಈ ಟ್ರಾನ್ಸ್‌ಫಾರ್ಮರ್ ತೂಕ ಸುಮಾರು ೪ ಟನ್‌ಗಳಂತೆ ಅದರ ಅದ್ಭುತಗಾತ್ರವನ್ನು ಸ್ವಲ್ಪ ಮಟ್ಟಿಗಾದರೂ ಊಹಿಸಬಹುದು. ಈ ಯಂತ್ರದಲ್ಲಿ ವಿದ್ಯುತ್ಪ್ರವಾಹವನ್ನು ಕೌಶಲದಿಂದ ಏರ್ಪಡಿಸಿದಾಗ ಕೋಡಬಳೆಯ ಆಕಾರದ ಕೊಳವಿಯಲ್ಲಿ ಅನೇಕ ಸಾವಿರ ಅಂಪೇರ್ ವಿದ್ಯುತ್ಪ್ರವಾಹ ಉಂಟಾಗಿ ಪರಮಾಣುಗಳೆಲ್ಲಾ ಅತ್ಯಂತ ತೀಕ್ಷ್ಣವಾದ ಕಾವಿನ ಮಟ್ಟಕ್ಕೆ ಏರುತ್ತವೆ. ಹೀಗೆ ಬಿಸಿ ಏರಿದ ಅಣು ಪರಮಾಣುಗಳು ಬಳೆಯ ಗೋಡೆಗೆ ತಗುಲಿದಾಗ ತಮ್ಮ ಶಕ್ತಿಯನ್ನು ಕಳೆದುಕೊಳ್ಳುವುದೊಂದೇ ಅಲ್ಲದೆ ಕೊಳವಿ ಕರಗಿ ಆವಿಯಾಗಿ ಹೋಗುತ್ತದೆ.

ಈ ಗಂಡಾಂತರವನ್ನು ವಿಜ್ಞಾನಿಗಳು ಚಮತ್ಕಾರವಾಗಿ ತಪ್ಪಿಸಿದ್ದಾರೆ. ಅನಿಲದಲ್ಲಿನ ವಿದ್ಯುತ್ಪ್ರವಾಹದ ಪರಿಣಾಮವಾಗಿ ಅಯಸ್ಕಾಂತ ಕ್ಷೇತ್ರವೇರ್ಪಡುತ್ತದೆ. ಇದು ವಿದ್ಯುತ್ಪ್ರವಾಹದ ಸುತ್ತಲೂ ಸುರಳಿಯಂತಿರುವುದರಿಂದ, ಪ್ರವಾಹವನ್ನು ಅದುಮಿ, ಹಾಡಿ, ಕೊಳವಿಯ ಮಧ್ಯಭಾಗದಲ್ಲಿ ಮಾತ್ರ ಇರುವಂತೆ ಮಾಡುತ್ತದೆ. ಹೀಗಾಗಿ ಗೋಡೆಗಳು ಉಳಿದುಕೊಳ್ಳುತ್ತವೆ: ಅದುಮಿ ಹಿಂಡಿದುದರ ಫಲವಾಗಿ ಕೊಳವಿಯೊಳಗಿನ ಗಾಳಿಯ ಬಿಸಿ ಇನ್ನಷ್ಟು ಏರುತ್ತದೆ. ಆದರೂ ಆಗಿಂದಾಗ್ಯೆ ಈ ವಿದ್ಯುತ್ಪ್ರವಾಹವು ನೇರವಾಗಿರದೆ, ಹಾವಿನಂತೆ ನೆಳಲುವುದರಿಂದ ಗೋಡೆಗಳಿಗೆ ಅಪಾಯ ಸಂಪೂರ್ಣವಾಗಿ ತಪ್ಪಿಲ್ಲ. ಹೀಗಾಗದೆ ಒಂದು ಸ್ಥಿಮಿತವಾದ ರೀತಿಯಲ್ಲಿರುವಂತೆ ಮಾಡಲು ಇನ್ನೊಂದು ಅಯಸ್ಕಾಂತ ಕ್ಷೇತ್ರವನ್ನು ವಿದ್ಯುತ್ಪ್ರವಾಹದೊಂದಿಗೆ ಇರುವಂತೆ ಏರ್ಪಡಿಸಿ ಈ ತೊಂದರೆಯನ್ನು ಬಹುಮಟ್ಟಿಗೆ ನಿವಾರಿಸಿದ್ದಾರೆ.

ಈ ಹಲವು ಬಗೆಯ ಕೌಶಲಗಳಿಂದ ಕೊಳವಿಯಲ್ಲಿನ ಅಣುಗಳು ಸುಮಾರು ೫ ಮಿಲಿಯನ್ (೫೦ ಲಕ್ಷ) ಡಿಗ್ರಿಗಳಷ್ಟು ಬಿಸಿಯಾಗಿವೆ ಎಂದು ನಿರ್ಧರಿಸಲು ಅನೇಕ ರುಜುವಾತುಗಳು ದೊರೆತಿವೆ. ವಿದ್ಯುತ್ಪ್ರವಾಹ ಸಂತತವಾಗಿರದೆ ಅತ್ಯಂತ ಕ್ಷಣಿಕವಾಗಿದೆ. ಒಂದು ಸೆಕಂಡನ್ನು ಹತ್ತು ಲಕ್ಷ ಪಾಲಾಗಿ ವಿಂಗಡಿಸಿದರೆ ದೊರೆಯುವ ಒಂದು ಅಂಶಕ್ಕೆ ಮೈಕ್ರೊಸೆಕೆಂಡ್ ಎಂದು ಹೆಸರು. ಈ ಪ್ರವಾಹ ಒಂದೊಂದು ಸಲವೂ ಕೇವಲ ೭-೮ ಮೈಕ್ರೊಸೆಕೆಂಡುಗಳ ಪರ್ಯಂತ ಮಾತ್ರ. ಪರೀಕ್ಷೆ ನಡೆಸುವಾಗ ಪ್ರತಿ ಹತ್ತು ಸೆಕೆಂಡುಗಳಿಗೊಂದು ಸಲದಂತೆ ಈ ವಿದ್ಯುತ್ಪ್ರವಾಹ— discharge— ಏರ್ಪಡಿಸಿ, ವಿವಿಧ ಅಂಶಗಳನ್ನು ಅಳೆಯುತ್ತಾರೆ.

ಈಗ ನಡೆಸಿರುವ ಪರೀಕ್ಷೆಗಳಲ್ಲಿ ಡ್ಯೂಟೆರಾನ್ ಅಣುಗಳು ಬೆಸೆದು ಹೀಲಿಯಂ ಪರಮಾಣುಗಳು ಏರ್ಪಟ್ಟಿವೆ ಎಂದು ನಿರ್ಧರಿಸಲು ಸಾಕಾದಷ್ಟು ಆಧಾರಗಳಿವೆ. ಅಲ್ಲಿನ ಬಿಸಿಯ ಮಟ್ಟ ಸುಮಾರು ೫೦ ಲಕ್ಷ ಡಿಗ್ರಿಗಳೆಂದು ವಿಶೇಷ ಬಗೆಯ ಅಳತೆಗಳಿಂದ ನಿರ್ಧರಿಸಿದ್ದಾರೆ. ಭೂಮಿಯ ಮೇಲೆ ಈ ತೀಕ್ಷ್ಣತಮವಾದ ಬಿಸಿಯನ್ನು ಸಾಧಿಸಿರುವುದು ಇದೇ ಮೊದಲನೆಯ ಸಲ.

ಈ ಪ್ರಯೋಗಗಳನ್ನು ಮುಂದುವರಿಸಿ, ಬಿಸಿಯನ್ನು ೫ ಕೋಟಿ ಡಿಗ್ರಿಗಳಿಗೇರಿಸಿದರೆ, ಹಗುರವಾದ ಡ್ಯುಟೆರಾನ್ ಪರಮಾಣುಗಳ ಸಂಯೋಗ ರಭಸದಿಂದ ನಡೆಯುತ್ತದೆ. ಈಗಿನ ಸ್ಥಿತಿಯಲ್ಲಿ ನಾವು ವೆಚ್ಚಮಾಡುವ ಶಕ್ತಿಗೂ

ಉತ್ಪನ್ನವಾದ, ಪರಮಾಣು ವಸ್ತುವಿನಿಂದ ಹೊರಕ್ಕೆ ಎಳೆಯಲ್ಪಟ್ಟ ಶಕ್ತಿಗೂ ಹೋಲಿಸಿದರೆ ಒಂದು 'ಶೂನ್ಯ'ದ ಸಂಪಾದನೆಯಾಯಿತು ಎನ್ನಬೇಕು; ಅಷ್ಟು ಅಲ್ಪ ಪ್ರಮಾಣದಲ್ಲಿದೆ. ಆದರೆ ತಂತ್ರ ಕೌಶಲವು ಅಭಿವೃದ್ಧಿಯಾಗಿ ಹೆಚ್ಚಿನ ಕಾವು ಸಾಧ್ಯವಾದಾಗ ನಾವು ಲಾಭದಾಯಕವಾದ ಪ್ರತಿಫಲವನ್ನು ನಿರೀಕ್ಷಿಸಬಹುದು. ನೀರಿನಿಂದ ಹೈಡ್ರಜನ್ ಗಾಳಿಯನ್ನು ತೆಗೆದು ಅದರಲ್ಲಿರುವ ಡ್ಯೂಟೆರಾನ್‌ಗಳನ್ನು ಬೇರ್ಪಡಿಸಿ ಸುಮಾರು ೧ ಗ್ರ್ಯಾಂನಷ್ಟು ಸಿದ್ಧಪಡಿಸಬೇಕಾದರೆ ೮೦೦ kwh. ಶಕ್ತಿ ಖರ್ಚು ಮಾಡಬೇಕು. ಆದರೆ ಹೀಗೆ ತಯಾರಿಸಿದ ಡ್ಯೂಟೆರಾನನ್ನು ಉರಿವಲಾಗಿ ಬಳಸಿದರೆ ೨೪೦೦೦ kwh. ಶಕ್ತಿಯನ್ನು ಪಡೆಯಬಹುದು. ವಿಜ್ಞಾನಿಗಳು ಈ ಪರಿಶೋಧನೆಗಳಲ್ಲಿ ತೋರುತ್ತಿರುವ ತೀವ್ರವಾದ ಆಸಕ್ತಿಯ ಮರ್ಮ ಇದು. ಕಲ್ಲಿದ್ದಲು, ಪೆಟ್ರೋಲ್ ಮುಂತಾದ ಉರಿವಲುಗಳೆಲ್ಲಾ ಇಂದಿನ ಯಂತ್ರ ಯುಗದಲ್ಲಿ ಬೇಗ ಬೇಗ ವೆಚ್ಚವಾಗಿ ಹೋಗಿ ಕೆಲವು ವರ್ಷಗಳಲ್ಲಿ ಕ್ಷಾಮವೇರ್ಪಡುವುದಲ್ಲಾ ಎಂದು ಕಾತರಪಡುತ್ತಿದ್ದ ಕಾಲದಲ್ಲಿ ಅಪಾರವಾದ ಶಕ್ತಿಯನ್ನು ಒದಗಿಸುವ ಈ ಹೊಸ ಕ್ರಮದ ಕಡೆ ಎಲ್ಲ ವಿಜ್ಞಾನಿಗಳ ದೃಷ್ಟಿವಾಲಿರುವುದು ಸಹಜವಾಗಿಯೇ ಇದೆ.

ಈಗ ಆರಂಭವಾಗಿರುವ ಸಂಶೋಧನೆಗಳು ಸುಮುಖವಾಗಿ ಮುಂದುವರಿದು, ಎಡರು ತೊಡರುಗಳನ್ನು ದಾಟಿದರೆ ಸುಮಾರು ೨೫–೩೦ ವರ್ಷಗಳ ವೇಳೆಗೆ ಈಗ ಕನಸಾಗಿ ಕಾಣುತ್ತಿರುವುದು ಕಾರ್ಯರೂಪಕ್ಕೆ ಇಳಿಯಬಹುದು. ಸಪ್ತ ಸಾಗರಗಳಲ್ಲಿರುವ ನೀರನ್ನೆಲ್ಲಾ ಬಳಸಿ ಈಗ ಇರುವುದಕ್ಕಿಂತ ಸಾವಿರಪಾಲಿನಷ್ಟು ಹೆಚ್ಚಿನ ಪ್ರಮಾಣದಲ್ಲಿ ಬಳಸಿದರೂ ಹತ್ತಾರು ಸಾವಿರ ವರ್ಷಕಾಲ ನಿಶ್ಶಂಕೆಯಿಂದ ಶಕ್ತಿಯನ್ನು ಪಡೆಯುವಂತೆ ಏರ್ಪಡಿಸಬಹುದು. ಇಂದು Zero Energy Thermometer Assembly ರೂಪದಲ್ಲಿ ಆರಂಭವಾದದ್ದು ಆಗ ಪ್ರಪಂಚದಲ್ಲೆಲ್ಲಾ ಸರ್ವೋತ್ಕೃಷ್ಟವಾದ ಶಕ್ತಿದಾಯಕ ಸಂವಿಧಾನ ಎಂದು ಹೆಸರುಪಡೆಯುತ್ತದೆ ಎಂಬ ನಿರೀಕ್ಷೆ ಇದೆ.*

---

* ಆಕಾಶವಾಣಿಯವರ ವಿಶ್ವಾಸದಿಂದ.

ಪರಿವರ್ತನೆ

ಶ್ರೀ ಸಿ. ಪಿ. ಕೆ. ಗೌಡ

ಸೂರ್ಯೋದಯದ ಮುನ್ನ ಈ ಚರಂಡಿಯ ನೀರು
ಕಪ್ಪು ಕೊಳಕೆನ್ನಿಸಿತ್ತು
ಅಸ್ತಮದ ನಂತರವು ಇಂತೆಯೆ ಅಸಹ್ಯವಿದು
ಈ ಹೊಲಸ ನೋಡಲೆಂತು ?

ಆದಿತ್ಯ ಹತ್ತಿದನು, ಬಾನ ನಡು ನೆತ್ತಿಯನು –
ಇದರಲ್ಲಿ ಬಿಂಬ.
ಕೊಳೆಯೆಲ್ಲಿ? ಈ ಚರಂಡಿಗು ಬಂದಿಹುದು ಹೊಳಪು,
ಬಣ್ಣಗಳ ಆಟ ತುಂಬ !

ಇದರೊಳಗು ಬೆಳಗುವನು ಭಾನು, ಕಣ್ಣನು ಪ್ರಭೆಯು
ಕುಕ್ಕುತಿದೆ ನೋಡದಂತೆ ;
ಕಲ್ಮಶವ ಕಾಣದಂತೆ !

ನಮ್ಮ ನುಡಿ

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್

(ಮುಂದುವರಿದುದು)

೧೯

೫೩. ಸಂಸ್ಕೃತದಲ್ಲಿ ಪ್ರಾಯಶಃ ಎಲ್ಲ ನಾಮವಾಚಕಗಳನ್ನೂ ಒಂದಲ್ಲ ಒಂದು ಧಾತುವಿನಿಂದ ಬಂದಿರುವುದಾಗಿ ತೋರಿಸಬಹುದಂತೆ. ದ್ರಾವಿಡ ಭಾಷೆಗಳಲ್ಲಿ ನಾಮಪದಗಳು ಅನೇಕ ಸ್ವತಂತ್ರವಾದ ಬೇರುಗಳಿಂದ ಬಂದಿವೆ. ಹಲವು ವೇಳೆ ಒಂದೇ ಬೇರು, ಇತ್ತ ಕ್ರಿಯಾಪದ, ಅತ್ತ ನಾಮಪದ ಆಗುತ್ತದೆ.

ಸ್ವತಂತ್ರವಾದ ಬೇರುಗಳ ನಾಮಪದಗಳು:

ಅಂದ, ಇಂಪು, ಪೆಂಡೆ, ಹೆಂಟೆ, ಕಂಪು, ಕುಂಟೆ, ಗುಣೆ, ತನಿ, ನಂಬಿ, ಪನಿ, ಹಿಂದು, ಮುಂದು, ತುಂಡು, ಅಯ್ಯ, ತಾಯ್, ಉದ್ದ, ದಡಿ, ದಿಂಡು, ಗಂಟು, ಪಟ್ಟಿ.

ಒಂದೇ ಬೇರಿನಿಂದ ಇತ್ತ ನಾಮಪದ ಇತ್ತ ಕ್ರಿಯಾಪದ ಅಗುವುದಕ್ಕೆ ಉದಾಹರಣೆ:

ನುಡಿ, ಮರೆ, ಸೊಲ್ಲು, ಹೊಡೆ, ಅಣೆ, ಬೆಳೆ.

ಶಬ್ದದಲ್ಲಿ ಸ್ವಲ್ಪ ಮಾರ್ಪಾಡು ಆಗಿ ಒಂದು ನಾಮಪದ ಒಂದು ಕ್ರಿಯಾಪದ ಆಗುವುದುಂಟು:

ಬೆಳಕು, ಬೆಳಗು;
ಗುಱಿ, ಕುಱಿ;
ಕೈ, ಗೆಯ್;
ಗೂಡು, ಕೂಡು;
ಗೆರೆ, ಕೆರೆ;
ಗೀಱು, ಕೀಱು,
ಮೂಗು, ಮೂಸು.

೫೪. ಬೇರೇ ಪದವಾಗಿ ನಿಂತಾಗ ಅದು ನಾಮ, ಗುಣ, ಸಂಖ್ಯಾ ಅಥವಾ ಕ್ರಿಯಾ, ಇವು ಯಾವುದೋ ಒಂದು ವಾಚಕವಾಗಿ ಇರಬಹುದು.

ಗುಣ: ಅಂ. ಒಳಗು ಅಥವಾ ಚೆನ್ನ.
ಇಂ. ಸವಿ ಆದ ರುಚಿಯಾದ.
ಪೆಸ್. ಹಿರಿದು.
ಕಂ. ಸುವಾಸನೆ ಉಳ್ಳ.
ಕುಣ್, ಗುಣ್. ಆಳವಾದ.
ತನ್. ತಂಪಾದ.
ನಣ್. ವಿಶ್ವಾಸವಂತ.

ಸಂಖ್ಯಾ: ಒರ್, ಇರ್, ಮೂಱ್, ನಾಲ್, ಐ, ಆಱ್.

ಕ್ರಿಯಾ: ಪೇಳ್, ಕೊಳ್, ಕಳ್, ತಿನ್, ಮಿನ್, ತೀರ್.

೫೫. ಕ್ರಿಯಾ ವಾಚಕಗಳ ಬೇರುಗಳಿಂದ ನಾಮಪದಗಳನ್ನು ಮಾಡುವ ಪ್ರತ್ಯಯು ಹಲವಿವೆ:

ಅ ಗೆಲ್ಲ, ಸೋಲ.
ಅಲು ಮೂಡಲು, ಪಡವಲು, ಹೊಗಲು (ಪ್ರವೇಶ) ಹುಯ್ಯಲು.
ಅವಿ ಅಳವಿ, ಬಳವಿ.
ಅವು ಒಲವು, ಕಳವು, ಬರವು.
ಕೆ ತಾಳ್ಕೆ, ತೋಱ್ಕೆ.
ಇಕೆ ಅಂಜಿಕೆ, ತೋಱಿಕೆ.
ಇಸು ಉಣಿಸು, ತಿನಿಸು.
ಕುಳಿ ಅಂಜುಕುಳಿ.
ಗುಳ್ ಬಯ್ಗುಳ್.
ಗೆ ಉಡುಗೆ, ಏೞ್ಗೆ, ನಂಬುಗೆ.
ಟ ಆ (ಡು) ಟ.
ತ ಇರಿತ.
ತೆ ನೆಗೞ್ತೆ.
ಪ (ಹ) ಬರೆಪ (ಬರಹ)
ಪಿ ಕಲ್ಪಿ, ನೋಂಪಿ.
ಪು, ವು ಕಾಪು, ಮೇವು.
ಮೆ ಕೂರ್ಮೆ, ನಲ್ಮೆ.
ಲು ಕೊಯ್ಲು, ಹುಯ್ಲು.
ವಳಿ ನಡವಳಿ
ಸು ಮುನಿಸು, ಮುಳಿಸು.

೫೬. ನಾಮಪದಗಳಿಂದಲೇ ಬೇರೆಯ ನಾಮಪದಗಳನ್ನು ಮಾಡುವ ಪ್ರತ್ಯಯಗಳು ಹಲವು, ಇವೆ. ಒಂದೊಂದರಿಂದ ಒಂದೊಂದು ಅರ್ಥ ಮೂಡುತ್ತದೆ.

ಅಡಿಗ	ಹೂವಡಿಗ, ಹಾವಡಿಗ	ಇವುಗಳಲ್ಲಿ ವ್ಯವಹರಿಸುವವರು.
ಆಯಿಲ ಆಯಿಲ ಆಯ್ಲ	ಗೋಳಿಯಿಲ ಗೋಳಾಯಿಲ	
ಆಳಿ	ಮಾತಾಳಿ	
ಇಗ	ಕಬ್ಬಿಗ	
ಇಗ	ಕನ್ನಡಿಗ	ಇದರವನು.
ಇಜ	ಅಲರಿಜ	ಅಲರಲ್ಲಿ ಹುಟ್ಟಿದವನು.
ಉಗ ಉಳಿಗ	ಹೆಣ್ಣುಗ ಮಣ್ಣುಳಿಗ	ಇಲ್ಲಿ ವರ್ತಿಸುವವನು.
ಕ, ವಂತ,	ಹಣವಂತ, ಕಲಿಕ, ಬಿಳಿಕ.	ಇದುಳ್ಳವರು.
ಕಾರ, ಗಾರ, ಗ	ಪಗೆಕಾರ, ಬಳೆಗಾರ ಮಾತುಗ, ಸಟಿಗ	ವ್ಯವಹಾರ.
ದ	ಅಲ್ಲಿದ.	– ಇರುವ
ವಣಿಗ	ಸಾಲವಣಿಗ.	
ವಳ, ವಳ್ಳ	ಮುನಿವಳ, ಹಡೆವಳ್ಳ.	
ಇಕೆ	ಗರುಪಿಕೆ.	
ತನ	ಬಲ್ಲತನ.	
ಪುರುಕ	ಆ ಸ್ವಭಾವದವನು, ಅಂಜುಬುರುಕ, ಅಳುಬುರುಕ; ಪಿರಿಕೆ ಇದರ ಇನ್ನೊಂದು ರೂಪ. ಪುಕ್ಕಲು = ಪುರುಕಲು : ಭಾವ.	

೨೦

೫೭. ಕನ್ನಡದ ನಾಮಪದಗಳು, ವಚನ ವಿಭಕ್ತಿಗಳನ್ನು ತೋರಲು ಪ್ರಕೃತಿಗೆ ಪ್ರತ್ಯಯಗಳನ್ನು ಸೇರಿಸುತ್ತವೆ. ಲಿಂಗ ವಸ್ತುವನ್ನು ಅನುಸರಿಸುತ್ತದೆ: ಸಂಸ್ಕೃತದಂತೆ ಶಬ್ದ ಶಬ್ದಕ್ಕೆ ಸಂಕೇತದಿಂದ ಪ್ರಾಪ್ತವಾಗುವುದಿಲ್ಲ. ಗಂಡಸರನ್ನು ಕುರಿತ ಶಬ್ದಗಳು ಪುಲ್ಲಿಂಗ. ಹೆಂಗಸರನ್ನು ಕುರಿತವು ಸ್ತ್ರೀಲಿಂಗ. ಉಳಿದವೆಲ್ಲ ನಪುಂಸಕಲಿಂಗ. ವಚನ ಎರಡು : ಏಕ, ಬಹು. ಸಂಸ್ಕೃತದಂತೆ ದ್ವಿವಚನ ಇಲ್ಲ.

ಲಿಂಗಭೇದ ಈ ಪ್ರತ್ಯಯಗಳಿಂದ ಕಾಣುತ್ತದೆ.

ಪುಂ	ಸ್ತ್ರೀ		
ಅ (ನ್)	ಅಳ್	ಹಿರಿಯನ್	ಹಿರಿಯಳ್
ಅ	ಇತಿ, ಗಿತಿ, ಗಿತ್ತಿ,	ಅಗಸ	ಅಗಸಿತಿ ಅಗಸಗಿತಿ ಅಗಸಗಿತ್ತಿ
ಅ	ತಿ	ಬೇಡ	ಬೇಡತಿ
ಅ	ಇ	ಹುಡುಗ	ಹುಡುಗಿ
	ಸಾನಿ	ದೊರೆ	ದೊರೆಸಾನಿ

ನಪುಂಸಕ ಲಿಂಗಕ್ಕೆ ತ್, ದು, ಅದು ಎಂಬವು ಪ್ರತ್ಯಯಗಳು.

ನಪುಂಸಕ ಲಿಂಗದ ಪದಗಳು ಬಹುವಚನಕ್ಕೆ ಬಹು ಪಾಲು ಪ್ರತ್ಯಯವನ್ನು ಪಡೆಯುವುದಿಲ್ಲ: ಒಂದು ಕುದುರೆ ಬಂದಿತು; ಹತ್ತು ಕುದುರೆ ಬಂದುವು.

ಬಹುವಚನ ಅರ್, ಕಳ್, ಗಳ್, ವರ್, ದಿರ್, ವಿರ್, ಪ್ರತ್ಯಯಗಳಿಂದ ಕಾಣುತ್ತದೆ. ಅರಸರ್, ಮಕ್ಕಳ್, ಗುರುಗಳ್, ಮೂವರ್, ಮಗಳುದಿರ್, ತಾಯ್ವಿರ್.

ಮರ್ಯಾದೆಯಲ್ಲಿ ಅರು, ಗಳು ಎರಡೂ ಬರಬಹುದು: ರಾಜರುಗಳು. ಮರ್ಯಾದೆಯನ್ನು ತೋರಿಸುವ ಬಹುವಚನದ ಇನ್ನೊಂದು ರೂಪ, ಶಬ್ದವನ್ನು ತೆಗೆದುಕೊಂಡು ಅದಕ್ಕೆ ಅವರು ಎಂಬ ಬಹುವಚನದ ಸರ್ವನಾಮವನ್ನು ಸೇರಿಸುವುದು. ಅಯ್ಯನ್ ಅವರು; ಅಯ್ಯನವರು. ಇದರಿಂದ ತಮಿಳಿನಲ್ಲಿ ಅಯ್ಯನ್ ಪದಕ್ಕೆ ಬಹುವಚನ ಅಯ್ಯರ್, ಅಯ್ಯನವರ್, ಅಯ್ಯನಾರ್, ಅಯ್ಯಂಗಾರ್, ಅಯ್ಯರವರ್, ಅಯ್ಯರವರ್‌ಗಳ್, ಎಂಬ ರೂಪಗಳನ್ನು ಪಡೆಯುತ್ತದೆ. ಅವರ್ ತೆಲುಗಿನಲ್ಲಿ ಗಾರು ರೂಪದಲ್ಲಿ ಇದೆಯಷ್ಟೆ. ಅಯ್ಯನವರ್ ಆ ಭಾಷೆಯಂತೆ ಅಯ್ಯನ್‌ಗಾರ್ ಆಗುತ್ತದೆ ಈ ರೂಪ ಎಂದೋ ಬಳಕೆಗೆ ಬಂದು ಈಗಲೂ ತಮಿಳಿನಲ್ಲಿ ಕನ್ನಡದಲ್ಲಿ ಒಂದು ಗುಂಪಿನ ಜನರ ಅಂಕಿತನಾಮದೊಡನೆ ಸೇರಿ ವ್ಯವಹಾರದಲ್ಲಿದೆ.

೫೮. ವಿಭಕ್ತಿ ಪ್ರತ್ಯಯಗಳನ್ನು ಈ ಮೊದಲೆ ಗುರುತಿಸಿದೆ: ಪದ ಇರುವಂತೆ ಪ್ರಥಮಾ ವಿಭಕ್ತಿಯಾಗಿ ಬಳಕೆಯಾಗುತ್ತದೆ. ಅದಕ್ಕೆ ಅಂ, ಇಂ, ಗೆ, ಅಥವಾ ಕೆ, ಅ, ಒಳ್ ಸೇರಿ ದ್ವಿತೀಯಾ, ತೃತೀಯಾ, ಮತ್ತು ಪಂಚಮಿ, ಚತುರ್ಥಿ, ಷಷ್ಠಿ, ಸಪ್ತಮಿ ವಿಭಕ್ತಿ ರೂಪಗಳಾಗುತ್ತವೆ.

ಹೀಗೆ ಹೇಳುವಲ್ಲಿ ಈ ಮೂಲರೂಪ ಯಾವುದೆಂದು, ಪ್ರತ್ಯಯ ಯಾವುದಕ್ಕೆ ಸೇರುತ್ತವೆ, ಎಂದು ಸ್ಪಷ್ಟಮಾಡಿಕೊಳ್ಳಬೇಕು. ರಾಮ ಶಬ್ದವನ್ನು ತೆಗೆದುಕೊಳ್ಳೋಣ. ರಾಮ ಹೊಸಗನ್ನಡದಲ್ಲಿ ರಾಮ ಎಂದಷ್ಟೆ ಇದೆ. ಹಳಗನ್ನಡದ ಬರಹದಲ್ಲಿ ರಾಮಂ ಎಂದು ದೊರೆಯುತ್ತದೆ. ಬರಹದಲ್ಲಿ ಮಾತ್ರ ದೊರೆಯುವ ಈ ಮಾತು ಅನುಸ್ವಾರ ಸಮೇತ ಕಾಣುವುದರಿಂದ ನಾವು ಇದನ್ನು ರಾಮಮ್ ಎಂದು ಮ ಕಾರದ

ಅರ್ಧಾಕ್ಷರವವನ್ನು ಬಳಸಿ ಉಚ್ಚರಿಸುತ್ತೇವೆ. ಇದು ನಿಜವಾಗಿ ಮ ಕಾರದ ಅಕ್ಷರವೇ ಆಗಿದ್ದರೆ ರಾಮಂ ಶಬ್ದಕ್ಕೆ ಅಂ ಸೇರಿದಾಗ ರಾಮುಮಂ ಎಂದಾಗಬೇಕು. ಹಳಗನ್ನಡದಲ್ಲಿ ರಾಮ ಶಬ್ದದ ದ್ವಿತೀಯಾ ವಿಭಕ್ತಿ ರಾಮನಂ ಎಂದಿದೆ. ಎಂದರೆ ಪ್ರಥಮಾ ರೂಪ ರಾಮುಮ್ ಅಲ್ಲ, ರಾರ್ಮ್ ಎಂದು ತೋರುತ್ತದೆ.

೫೯. ಕನ್ನಡದ ಬರಹದಲ್ಲಿ ರಾರ್ಮ್ ರೂಪ ಕಾಣಲಿಲ್ಲವಾದದ್ದರಿಂದ ನಮ್ಮ ವ್ಯಾಕರಣಗಳಲ್ಲಿ ಇಲ್ಲಿ ಮಕಾರಕ್ಕೆ ನಕಾರ ಆದೇಶವಾಗಿ ಬಂದಿದೆ ಎಂದು ಹೇಳುವುದು ವಾಡಿಕೆಯಾಯಿತು. ಇತ್ತೀಚೆಗೆ ಭಾಷಾ ಶಾಸ್ತ್ರಜ್ಞರು ಇಲ್ಲಿ ಆದೇಶದ ಪ್ರಮೇಯವೇನೂ ಇಲ್ಲ, ಮೂಲದಲ್ಲಿ ನಕಾರವೇ ಇದ್ದಿತು, ಎಂದು ಪ್ರತಿಪಾದಿಸಿದರು. ಕನ್ನಡ ರಾರ್ಮ್ ರೂಪವನ್ನು ಬಳಸಿತು ಎಂದು ಇವರು ಹೇಳಲು, ಕನ್ನಡ ತಮಿಳ ರೂಪವನ್ನು ಬಳಸಿತು ಎಂದು ಇವರು ಎನ್ನುತ್ತಾರೆ, ಇದು ತಪ್ಪು, ಎಂದು ಪ್ರತಿಪಕ್ಷ ಒಂದು ಎದ್ದಿತು. ನಿಜದಲ್ಲಿ ರಾಮನ್ ತಮಿಳಿನ ಸ್ವಂತದ ರೂಪವೇನೂ ಅಲ್ಲ. ಅದು ಕನ್ನಡ ತಮಿಳು ಎರಡು ಭಾಷೆಗಳಿಗೂ ಸಮಾನ ರೂಪ. ಕನ್ನಡ ಅದನ್ನು ಬಳಸಿದರೆ ತಮಿಳಿನ ರೂಪವನ್ನು ತೆಗೆದು ಕೊಂಡಂತೆ ಅಲ್ಲ. ರಾರ್ಮ್ ಎನ್ನುವುದು ಕನ್ನಡದಲ್ಲಿ ಈ ಶಬ್ದದ ಸರಿಯಾದ ರೂಪ. ಈ ಮಾತು ಇಲ್ಲಿಗೆ ನಿಂತಿದೆ.

೬೦. ಇದಕ್ಕೆ ಸಣ್ಣ ಒಂದು ತಿದ್ದುಪಡಿ ಅವಶ್ಯಕ ಎಂದು ಕಾಣುತ್ತದೆ. ಈ ನ್ ಆದರೂ ನ ಕಾರದ ಅರ್ಧಾಕ್ಷರದ ಸ್ಪಷ್ಟವಾದ ಉಚ್ಚಾರಣೆ ಅಲ್ಲ. ತಮಿಳ ಜನ ಮಾತನಾಡುವಾಗ ರಾಮ ಶಬ್ದವನ್ನು ಕೆಲವು ವೇಳೆ ಅರ್ಧ ನ ಕಾರದೊಡನೆ ಉಚ್ಚರಿಸುವಂತೆ ಇನ್ನು ಕೆಲವು ವೇಳೆ ಆ ಅರ್ಧದ ಒಂದರ್ಧದೊಡನೆ ಉಚ್ಚರಿಸುತ್ತಾರೆ. ಕನ್ನಡದಲ್ಲಿಯೂ ಇದು ಕೆಲವು ವೇಳೆ ಕೇಳಿಸುತ್ತದೆ. ನ ಕಾರವನ್ನು ಉಚ್ಚರಿಸುವುದಕ್ಕೆ ತುದಿ ನಾಲಿಗೆ ಹಲ್ಲಿನ ಮೇಲ್ಭಾಗದ ಒಸಡನ್ನು ಮುಟ್ಟಬೇಕು. ಅದು ತೀರಾ ಮುಟ್ಟದೆ ಇದ್ದರೆ ನ ಕಾರದ ಒಂದು ಅರ್ಧಾನುಸ್ವಾರವೆಂದು ಕಾಣುತ್ತದೆ. ಅದು ಬರವಣಿಗೆಯಲ್ಲಿ ಪೂರ್ಣಾನುಸ್ವಾರ ಆಗಿ ಮಾತಿನಲ್ಲೂ ಬಳಕೆಗೆ ಬಂದಿರಬೇಕು. ವಿಭಕ್ತಿ ಪ್ರತ್ಯಯಗಳು ಸೇರಿದಾಗಲಂತೂ ಅದು ವಿಧಿ ಇಲ್ಲದೆ ಪೂರ್ಣಾನುಸ್ವಾರ ಆಗಲೇ ಬೇಕಾಯಿತು.

ಅರ್ಧಾನುಸ್ವಾರ ಒಂಡು ದ್ರಾವಿಡ ಭಾಷೆಗಳಲ್ಲಿ ಇದ್ದಿತೆನ್ನುವುದಕ್ಕೆ ತೆಲುಗಿನಲ್ಲಿ ನಿದರ್ಶನವಿದೆ. ಈಗಲೂ ಅಲ್ಲಿ ಈ ಅನುನಾಸಿಕ ಬಳಕೆಯಲ್ಲಿದೆ.

ಉಚ್ಚಾರಣೆಯ ಸೌಲಭ್ಯಕ್ಕಾಗಿ ನ ಆಗಮವಾಗಿದೆಯೆಂದು ಕೆಲವು ಸಂದರ್ಭಗಳಲ್ಲಿ ವ್ಯಾಕರಣದಲ್ಲಿ ಹೇಳುವುದುಂಟು. ಇಂಥವೇಳೆ ನಿಜವಾಗಿ ಆಗಮವೇನೂ ಇರುವುದಿಲ್ಲ. ಅರೆಮರೆಯಾಗಿ ಉಚ್ಚಾರವಾಗುತ್ತಿದ್ದ ಅರ್ಧಾನುಸ್ವಾರ ಅಥವಾ ಅರ್ಧಾನುನಾಸಿಕದ ನ ಸ್ಪಷ್ಟವಾಗಿ ಆವಿಷ್ಕಾರವಾಗುತ್ತದೆ ಅಷ್ಟೆ.

೬೧. ಹೀಗೆಯೇ ತೃತೀಯಾ ಪಂಚಮೀ ವಿಭಕ್ತಿಗಳು ರಾಮನಿಂ, ಚತುರ್ಥಿ ರಾಮನ್ಗೆ, ಷಷ್ಠೀ ರಾಮನ, ಸಪ್ತಮಿ ರಾಮನೊಳ್ ಎಂದು ಆಗುತ್ತವೆ.

ಕನ್ನಡದಲ್ಲಿ ಪಂಚಮೀ ವಿಭಕ್ತಿ ಇಲ್ಲವೆಂದು ಹೇಳುವುದುಂಟು ಅಥವಾ ಪಂಚಮಿಗೆ ರಾಮನ ದೆಸೆಯಿಂದ ಎಂಬುದು ರೂಪ ಎನ್ನುವುದುಂಟು. ಪ್ರಾಯಶಃ ಈ ಎರಡೂ ಉಕ್ತಿ ವಸ್ತುಸ್ಥಿತಿಯನ್ನು ವರ್ಣಿಸುವುದಿಲ್ಲ. ರಾಮನ ದೆಸೆಯಿಂದ ಎಂದು ಹೇಳುವುದರಿಂದ ಈ ಅರ್ಥ ಕನ್ನಡದಲ್ಲಿ ಉಂಟು ಎನ್ನುವುದು ಸಿದ್ಧವಾಗುತ್ತದೆ. ಅರ್ಥವಿದ್ದ ಮೇಲೆ ವಿಭಕ್ತಿ ರೂಪ ಇಲ್ಲದೆ ಹೋಗುವುದಿಲ್ಲ. ಅದೊಂದು ಇರಬೇಕು. ವಿಭಕ್ತಿ ರೂಪ ಇದ್ದಮೇಲೆ ಅದಕ್ಕೆ ಸಂಬಂಧಿಸಿದ ಪ್ರತ್ಯಯ ಇರಬೇಕು. –"ಅ ದೆಸೆಯಿಂದ" ವಿಭಕ್ತಿ ಪ್ರತ್ಯಯವಲ್ಲ. "ಅ" ಷಷ್ಠೀ ವಿಭಕ್ತಿಯ ಪ್ರತ್ಯಯ; ದೆಸೆಯಿಂದ ಬೇರೆ ಒಂದು ಪದ. ಹಾಗಾದರೆ ಈ ಅರ್ಥಕ್ಕೆ ಕನ್ನಡದಲ್ಲಿ ಬಳಸುವ ಒಂದು ಪದ ಯಾವುದು? ರಾಮನಿಂದ. ಆದ್ದರಿಂದ ಇಂ ತೃತೀಯಾ ವಿಭಕ್ತಿಯ ಹಾಗೆ ಪಂಚಮೀ ವಿಭಕ್ತಿಯನ್ನೂ ಸೂಚಿಸತಕ್ಕ ಪ್ರತ್ಯಯ.

ಆದ್ದರಿಂದಲೇ ಮೇಲೆ ತೃತೀಯ ಪಂಚಮೀ ವಿಭಕ್ತಿಗಳಿಗೆ ಇಂ ಪ್ರತ್ಯಯ ಎಂದು ಹೇಳಿದೆ.

೬೨. ರಾಮ ಅ ಕಾರಾಂತ ಪುಲ್ಲಿಂಗ. ದ್ವಿತೀಯಾ ತೃತೀಯಾ ವಿಭಕ್ತಿಗಳಲ್ಲಿ ಇದರಲ್ಲಿ ನ ಬರುವಂತೆ ಯಾವುದೇ ಲಿಂಗವಾಗಲಿ ಇ ಎ ಅಂತವಾದ ಶಬ್ದಗಳಲ್ಲಿ ಯ ಬಂದು, ಉ ಒ ಅಂತವಾದ ಶಬ್ದಗಳಲ್ಲಿ ವ ಬಂದು, ಪ್ರತ್ಯಯಗಳು ಸೇರುತ್ತವೆ.

ಪು. ದೊರೆಯಂ, ಮನುವಂ, ಶೌರಿಯಂ.

ಸ್ತ್ರೀ. ಸೀತೆಯಂ, ದೇವಿಯಿಂ.

ನ. ಮನೆಯಂ, ತನುವಂ, ಕುರಿಯಂ.

ಅಕಾರಾಂತವಾದ ನಪುಂಸಕ ಲಿಂಗ ಶಬ್ದದಲ್ಲಿ ದ್

ಆಗಮವಾಗುತ್ತದೆ. ಚತುರ್ಥೀ ವಿಭಕ್ತಿ ಪ್ರತ್ಯಯ ಅ ಕಾರಾಂತ ನಪುಂಸಕ ಲಿಂಗದಲ್ಲಿ ಕೆ; ಉಳಿದಂತೆಲ್ಲ ಗೆ: ಷಷ್ಠೀ ವಿಭಕ್ತಿಯಲ್ಲಿ ಎಲ್ಲ ವೇಳೆಯೂ ಅ, ಅತು, ಅತ್ತು: ಸಪ್ತಮಿಯಲ್ಲಿ ಒಳ್: ಪ್ರತ್ಯಯಗಳು.

ಸಂಬೋಧನೆಯಲ್ಲಿ ಏಕವಚನದಲ್ಲಿ ಶಬ್ದವನ್ನು ಹಾಗೆಯೇ ಉಪಯೋಗಿಸಬಹುದು, ಅಥವಾ ಪುಲ್ಲಿಂಗದಲ್ಲಿ ದೀರ್ಘ, ಎಲ್ಲಿಲ್ಲಿಯೂ ಏ ಸೇರಿಸಿ ಹೇಳಬಹುದು. ಎಂಬರೆ ಅಂತ್ಯ ಸ್ವರವನ್ನು ದೀರ್ಘ ಮಾಡಿ ಬಳಸಬಹುದು, ಅಥವಾ ಏ ಪ್ರತ್ಯಯವನ್ನು ಸೇರಿಸಿ ಬಳಸಬಹುದು.

ರಾಮ, ರಾಮಾ, ರಾಮನೇ
ಶೌರಿ, ಶೌರೀ, ಶೌರಿಯೇ
ಶಂಭು, ಶಂಭೂ, ಶಂಭುವೇ
ದೊರೆ, ದೊರೇ, ದೊರೆಯೇ

ಬಹು ವಚನದಲ್ಲಿ ಆಯಾ ರೂಪದ ಮೇಲೆ ಆ ಏ ಪ್ರತ್ಯಯಗಳು ಬರುತ್ತವೆ.

ದೊರೆಗಳೇ ದೊರೆಗಳಿರಾ ದೊರೆಗಳಿರೇ.

೬೩. ಕನ್ನಡ ಸರ್ವನಾಮಗಳು ಇವು.

ಅರ್ವ, ಅವಳ್, ಅವರ್, ಅರ್ವದಿರ್, ಅವಳ್ದಿರ್
ಇರ್ವ, ಇವಳ್, ಇವರ್, ಇರ್ವದಿರ್, ಇವಳ್‌ದಿರ್
ಯಾರ್ವ, ಯಾವಳ್, ಯಾರ್
ಅದು, ಅವು, ಇದು, ಇವು.
ಆವುದು, ಆವುವು
ಯಾವುದು ಯಾವುವು
ತಾಂ ತಾಂ.

ವಿಭಕ್ತಿ ಪ್ರತ್ಯಯಗಳು ಸೇರಿದರೆ ಇವು ಹೀಗಾಗುತ್ತವೆ.

ಅವನಂ, ಇವನಂ, ಅವರ್‌ಗೆ, ಅವರ, ಅವರತು, ಅವನೊಳ್ ಇತ್ಯಾದಿ.

ಅದಂ, ಆದರಿಂ, ಅದರ್‌ಕೆ, ಅದರ, ಅದರೊಳ್ ಇತ್ಯಾದಿ. ಅವು ಅವಂ, ಅವಱಿಂ, ಅವರ್‌ಗೆ, ಅವರ, ಅವರೊಳ್. "ಆವುದು," "ಯಾವುದು," ಅದು ಅಂತೆ, "ಆವುವು," "ಯಾವುವು," ಅವು ಅಂತೆ ನಿಷ್ಪನ್ನವಾಗುತ್ತವೆ. ತಾಂ, ತನ್ನಂ, ತನ್ನಿಂ, ತನಗೆ, ತನ್ನ ತನತು, ತನತ್ತು, ತನ್ನೊಳ್, ತಾಂ, ತಮ್ಮಂ, ತಮ್ಮಿಂ, ತಮಗೆ, ತಮ್ಮ, ತಮತು, ತಮತ್ತು, ತಮ್ಮೊಳ್.

ತಮಿಳಿನಲ್ಲಿ ಆರ್, ನಾನ್ ಎಂದು ಇದ್ದ ಶಬ್ದ ತೆಲುಗಿನಲ್ಲಿ ಏನು, ನೇನು ಎಂದಾಯಿತು ಎಂದು ಹೇಳುವುದು ವಾಡಿಕೆ. ಇವೆರಡಕ್ಕೂ ಮೂಲದಲ್ಲಿ ಒಂದು ಮಧ್ಯಸ್ಥವಾದ ಸ್ವರ ಇದ್ದಿರಬೇಕು. ಅದು [illegible] ಭಾಷೆಗೆ ಆ ಎಂದು ಇನ್ನೊಂದಕ್ಕೆ ಏ ಎಂದು ಇಳಿಯಿತು ಎಂದು ಹೇಳುವುದು ಇನ್ನು ಸ್ವಲ್ಪ ಸರಿಯಾಗಬಹುದು.

ಮರ್ಯಾದೆಯಲ್ಲಿ ನೀಂಗಳ್, ಅವರ್‌ಗಳ್ ಮುಂತಾಗಿ ಗಳ್ ಹೆಚ್ಚಾಗಿ ಸೇರುವುದುಂಟು. ಈ ಪದಗಳ ಹೋಲಿಕೆಯ ಮೇಲೆ ನಾಂಗಳ್ ಎಂದೂ ಪದ ಆಗುತ್ತದೆ. ತಮಿಳು, ತೆಲುಗು, ಮಲೆಯಾಳ ಭಾಷೆಗಳಲ್ಲಿ ಪ್ರಥಮ ಪುರುಷದ ಸರ್ವನಾಮದ ಬಹುವಚನದಲ್ಲಿ ಎರಡು ರೂಪಗಳಿವೆಯೆಂದೂ ಅವುಗಳಲ್ಲಿ ಒಂದು, ನೀವೂ ಸೇರಿ ನಾವು, ಎಂಬ ಅರ್ಥವನ್ನೂ ಇನ್ನೊಂದು, ನಿಮ್ಮನ್ನು ಬಿಟ್ಟು ನಾವು, ಎಂಬ ಅರ್ಥವನ್ನೂ ಕೊಡುತ್ತದೆಂದೂ ತಿಳಿಯುತ್ತದೆ. ಕನ್ನಡದಲ್ಲಿ ಈ ಭೇದ ಕಾಣುವುದಿಲ್ಲ.

೬೪. ಯಾರು ಯಾವುದು ಯಾವಾಗ ಎನ್ನುವುದಕ್ಕೆ ಕೆಲವು ಜನ ದಾರು, ದಾವುದು, ದಾವಾಗ ಎನ್ನುತ್ತಾರೆ. ಹೀಗೆನ್ನುವವರು ಪ್ರಾಯಶಃ ಬೇರೆ ಭಾಷೆಯ ಪ್ರಾಂತ್ಯಗಳಲ್ಲಿ ವಾಸಿಸುವ ಕನ್ನಡಿಗರು.

ಇಂಥ ಪದಗಳಲ್ಲಿ ಯ ದ ಆಗಿದೆಯೆಂದು ಕಾಲ್ಡ್‌ವೆಲ್ ಮಹಾಶಯರು ಹೇಳಿದಾರೆ.

ಇವು ಯ ದ ಆದ ಸಂದರ್ಭ ಅಲ್ಲ ಎಂದು ಕಾಣುತ್ತದೆ. ಯಾರು, ಯಾವುದು ಪೂರ್ವದಲ್ಲಿ ಆರು ಆವುದು ಎಂದೂ ಇದ್ದವಷ್ಟೆ. ಜನ ಆ ಉಚ್ಚಾರಣೆ ಸುಲಭವಾಗುವುದಕ್ಕೆ ಅದು ಪದವನ್ನು ಸೇರಿಸಿಕೊಂಡು ಅದಾರು, ಅದಾವುದು ಎಂದು ಹೇಳಿರಬೇಕು. ಈ ರೂಪಗಳಿಂದ ಅ ಉದುರಿ ಹೋಗಿ ದಾರು, ದಾವುದು, ಆಗಿವೆ. ಇವುಗಳ ಸಾದೃಶ್ಯದ ಮೇಲೆ ದಾವಾಗ ಬಂದಿದೆ.

ಯಾರು ಪ್ರಾಯಶಃ ಬಹುವಚನ. ಆದರೆ ಯಾವನು ಯಾವಳು ಎನ್ನುವುದು ಉದ್ದ ಹೆಚ್ಚು ಎಂಬ ಕಾರಣದಿಂದಲೊ ದುರ್ಲಕ್ಷ್ಯದ ಪ್ರತೀತಿ ಮೂಡುವ ಕಾರಣದಿಂದಲೋ ಇದು ಏಕವಚನದಂತೆ ಪ್ರಯೋಗಕ್ಕೆ ಬಂದಿದೆ. ಅವನು (ಅವಳು), "ಯಾರು ಬಂದದ್ದು ?"

೨೧

೬೫. ಕನ್ನಡದಲ್ಲಿ ಶುದ್ಧ ಗುಣವಾಚಕಗಳಿಲ್ಲವೆಂದು ಒಂದು ಅಭಿಪ್ರಾಯ ಇರುವಂತೆ ಕಾಣುತ್ತದೆ. ಇದು ಸರಿಯಿರಲಾರದು. ಬೆಳ್, ಒಳ್, ನಲ್, ಇವು ಗುಣವಾಚಕಗಳು. ಇಂಥ ಇತರ ಶಬ್ದಗಳು ಕನ್ನಡದಲ್ಲಿ ಇವೆ.

ಕನ್ನಡದ ಗುಣವಾಚಕಗಳಿಗೆ ಸಂಸ್ಕೃತದ ಗುಣವಾಚಕಗಳಿಗಿರುವಂತೆ, ಒಂದಕ್ಕಿಂತ ಒಂದು ಹೆಚ್ಚು (ತರ). ಎಲ್ಲಕ್ಕಿಂತ ಹೆಚ್ಚು (ತಮ), ಭಾವಗಳನ್ನು ಸೂಚಿಸುವುದಕ್ಕೆ ರೂಪಗಳಿಲ್ಲ.

ಕೆಲವು ಗುಣವಾಚಕಗಳು ಸಮಾಸ ಪದಗಳಲ್ಲಿ ಮೊದಲ ಸ್ವರಗಳನ್ನು ದೀರ್ಘ ಮಾಡಿಕೊಳ್ಳುತ್ತವೆ. ಪೆರ್, ಅಡವಿ, ಪೇರಡವಿ.

ಕೆಲವು ಅ ಎಂಬ ತುಣುಕನ್ನು ಸೇರಿಸಿಕೊಂಡು ಇನ್ನೊಂದು ರೂಪದಲ್ಲಿ ಬಳಕೆಯಾಗುತ್ತವೆ.

ಪಿರಿ, ಪಿರಿಯ.

ಪಸು ಎಂಬ ಪದ ಪಂ ಎಂದು ಆಗುತ್ತದೆಂದು ಹೇಳುವುದುಂಟು. ಇದು ಇಲ್ಲಿ ಉಕ್ತವಾಗಬೇಕಾದ ವಿಷಯವಲ್ಲ. ಆದರೂ ಇದನ್ನು ಇಲ್ಲಿ ಮುಗಿಸಬಹುದು. ಬೇರು ಪಸ್ ಪಚ್. ಪದಪಸುಂ ಸ ಯ ಆಗುವುದು ವಾಡಿಕೆ; ಈ ಯ ಉಚ್ಚಾರವಾಗದೆ ಪಸುಂ, ಹೋಗಿ ಪಂ ಆಗುತ್ತದೆ.

೨೨

೬೬. ಕನ್ನಡದ ಸಂಖ್ಯಾವಾಚಕಗಳು ಒಂದು, ಎರಡು, ಮೂಱು, ನಾಲ್ಕು, ಐದು, ಆಱು, ಏೞು, ಎಂಟು, ಒಂಬತ್ತು, ಪತ್ತು, ಪನ್ನೊಂದು, ಪನ್ನೆರಡು, ಪದಿಮೂರು, ಪದಿನಾಲ್ಕು, ಪದಿನೈದು, ಪದಿನಾಱು, ಪದಿನೇೞು, ಪದಿನೆಂಟು, ಪತ್ತೊಂಬತ್ತು, ಇಪ್ಪತ್ತು, ಇತ್ಯಾದಿ, ತೊಂಬತ್ತು, ನೂರು, ಸಾವಿರ.

ಒರ್ ಒನ್ರ್ ಎಂಬ ರೂಪವನ್ನು ಪಡೆದು ಅದರಿಂದ ಒಂದು ಬಂದಿದೆ. ಆದಕಾರಣ ಈಗ ಬೇರೆ ಸಂದರ್ಭಗಳಲ್ಲಿ ಒರ್ ರೂಪ ಇದೆ.

ಒಮ್ಮೆ – ಒರ್‌ಮೆ.

ಒಬ್ಬ – ಒರ್‌ವ.

ಎರಡು ಪೂರ್ವದ ಇರ್ ಬೇರಿನ ಇ ಎ ಆಗಿ ಬಂದಿದೆ. ಎಂಟು ಪದದಲ್ಲಿ ಣ್ ಆಗಮ. ಎಟ್ಟು ಎಂಟು

ಒಂಬತ್ತು ಶಬ್ದವನ್ನು ಕುರಿತು ಚರ್ಚೆ ನಡೆದಿದೆ. ಒಂದು ಸೇರಿದರೆ ಹತ್ತು ಆಗತಕ್ಕ ಸಂಖ್ಯೆ ಎಂದು ಇದರ ಅರ್ಥ ಇರಬಹುದು.

ಪತ್.ತು ಹತ್ತು. ಪತ್ ಮೂಲ. ಇದರ ಇನ್ನೊಂದು ರೂಪ ಪೞ. ಮುಂದಿನ ಸಂಖ್ಯೆಗಳಲ್ಲಿ ಈ ಎರಡು ರೂಪಗಳೂ ಕಾಣುತ್ತವೆ. ಪೞ ಒಂದು, ಪೞ ಎರಡು, ಪತ್. ಇೞ. ಮೂರು ಇತ್ಯಾದಿ. ಪತ್ತೊಂಬತ್ತು ಎಂಬಲ್ಲಿ ಇೞ ಬಂದಿಲ್ಲ. ಒಂಬತ್ತು ಪತ್ ಮೂಲದ ಕೂಡ ಸೇರವಾಗಿ ಸೇರಿದೆ.

ಇರ್. ಪತ್ತು ಇಪ್ಪತ್ತು } ರ್ ಱ್ ಲೋಪ.
ಮೂಱ್. ಪತ್ತು ಮೂವತ್ತು }
ಏೞ್. ಪತ್ತು ಎಪ್ಪತ್ತು ೞ್ ಲೋಪ.
ಎಟ್. ಪತ್ತು ಎಣ್‌ಬತ್ತು.

ಪತ್ ಪೞ ಎಂಬಲ್ಲಿ ಹೇಗೊಹಾಗೆ ಎಟ್ ಎಣ್ ಎಂಬಲ್ಲಿ ಟ ಕಾರಕ್ಕೆ ಆವರ್ಗದ ಅನುನಾಸಿಕ ಆದೇಶವಾಗುತ್ತದೆ. ತೊಂಬತ್ತು ಎಂಬ ಪದ ನೂರಕ್ಕೆ ಹತ್ತು ಕಡಮೆ ಎಂಬ ಅರ್ಥಕ್ಕೆ ಹೇಗೆ ಅನ್ವಯವಾಯಿತು ಹೇಳುವಂತಿಲ್ಲ. ತಮಿಳಿನಲ್ಲಿ ಇದಕ್ಕೆ ತೊಣ್ಣೂರ್ ತೊಲ್ - ನೂರ್ ಎಂದರೆ ಮೊದಲು ನೂರು ಎಂಬ ಪದ ಇದೆ. ಕನ್ನಡದ ಪದದ ತೊಂ ತೊಲ್ ಎಂಬದರಿಂದ ಬಂದಿರಬಹುದು. ಹಾಗಾದರೆ ತೊಲ್, ಹತ್ತು ಎಂದು ಇದರ ರಚನೆ. ಹೀಗೆಂದರೆ ಒಂಬತ್ತು ಎಂದರ್ಥವಾಗಬೇಕು. ತೆಲುಗಿನ ಈ ರಚನೆಯ ಪದ "ತೊಮ್ಮಿದಿ". ಇದಕ್ಕೆ ಒಂಬತ್ತು ಎಂದೇ ಅರ್ಥ.

ಸಾವಿರ ಸಹಸ್ರದಿಂದ ಬಂದಿದೆ. ಇದು ಬಂದಿರುವ ರೀತಿ ಹೀಗೆ ಇರಬೇಕು. ಸಹಸ್ರ > ಸಾಸ್ರ > ಸಾಸರ > ಸಾಸಿರ > ಸಾವಿರ.

ಒಂಬತ್ತು ನೂರು ಕನ್ನಡದಲ್ಲಿ ಒಂಬಯಿ (ಒನ್. ಪದಿ.) ನೂರುಎಂದಿದೆ. ಇಲ್ಲಿ ಒಂಬತ್ ಎಂಬ ಪದದ ತ್ ಯ್ ಆಗಿದೆ. (ತ > ಚ > ಯ) ತೆಲುಗಿನ ಇರುವೈ, ಮುಪ್ಪೈ, ನಲವೈ, ಯಾಬೈ, ಅರುವೈ ಮುಂತಾದ ಪದಗಳೆಲ್ಲ ಇದೇ ಮಾರ್ಪಾಡನ್ನು ತೋರುತ್ತವೆ.

೬೭. ಪತ್, ಹತ್ತು, ಪದೆ ಸಂಸ್ಕೃತದ ಪಂಕ್ತಿಯಿಂದ ಬಂದಿದೆಯೆಂದು ಒಬ್ಬ ಪಾಶ್ಚಾತ್ಯ ಪಂಡಿತರ ಅಭಿಪ್ರಾಯ. ಪಂಕ್ತಿ ಗಂದಿ ಆಗಿ ಪಂದಿ ಪಂದು ಆಗಿ ಪಂದು ಪದು, ಪದಿ, ಪಯಿ ರೂಪವನ್ನು ಪಡೆದಿದೆಯೆಂದೂ ತು ಸೇರಿ ಇದು ಮತ್ತೆ ಪತ್, ಆಗಿದೆಯೆಂದೂ ಇವರ ಸೂಚನೆ. ಸಂಸ್ಕೃತ ಪಂಕ್ತಿ ತಮಿಳಲ್ಲಿ ಪಂದಿ ಆಗುವುದು ನಿಜ. ಆದರೆ ದಿ ತೀರ ಮಾಯವಾಗಿ ಪೞ ಪತ್ ಮಾತ್ರ ನಿಲ್ಲುವುದು ಬೇರೆ ಎಲ್ಲಿಯೂ ಕಾಣದ ಮಾರ್ಪಾಡು. ಪಂದಿ ರೂಪ ಮಲೆಯಾಳದಲ್ಲಿ ಪಂದಿರಂದು (= ಹನ್ನೆರಡು) ಪದದಲ್ಲಿದೆ. ಆದರೆ ತಮಿಳಿನಲ್ಲಿ ಇದು ಪನ್ನಿರಂಡ್. ಕನ್ನಡದಲ್ಲಿ ಹನ್ನೆರಡು. "ದ" ಮಲೆಯಾಳದಲ್ಲಿ ಆಗಮವಾಗಿದೆ ಹೊರತು ತಮಿಳು

ಕನ್ನಡದಲ್ಲಿ ಲೋಪವಾಗಿಲ್ಲ. ದ್ರಾವಿಡರು ಹತ್ತು ಎನ್ನುವುದಕ್ಕೆ ಆರ್ಯರಿಂದ ಪದವನ್ನು ತೆಗೆದುಕೊಳ್ಳ ಬೇಕಾಗಿರಲಿಲ್ಲ. ನೂರು ಎನ್ನುವುದಕ್ಕೆ ಕೂಡಾ ಇವರು ಸ್ವಂತ ಪದವನ್ನು ಪಡೆದಿದ್ದರು ಎಂದು ಕಾಲ್‌ಡ್‌ವೆಲ್ ಮಹಾಶಯರು ಹೇಳಿದಾರೆ. ಇದು ಸರಿಯೆಂದು ಕಾಣು ತ್ತದೆ.

೬೮. ಒಂದು ದಿನ ಎಂಬಲ್ಲಿ ಒಂದು ಸಂಖ್ಯಾವಾಚಿ ಯಲ್ಲ. ಅದಕ್ಕೆ ಅಷ್ಟಾಗಿ ಅರ್ಥವಿಲ್ಲ. ಒಂದಾನೊಂದು ಎಂದರೆ ಇಂಥ ಎಂದು ನಿರ್ದಿಷ್ಟವಾಗದೆ ಇದ್ದ ಒಂದು ಎಂದು ಅರ್ಥ. ಇಲ್ಲಿಯು ಆನ್ ಪೂರ್ವದ ಕನ್ನಡದ್ದು. ತಮಿಳಲ್ಲಿ ಈಗಲೂ ಆನ ಎಂದೇ ಇದೆ. ಅರ್ಥ ಅದೆ.

೬೯. ಸು, ಟು, ಪರಿಮಾಣ ಸೂಚಕವಾದ ತುಣುಕು ಗಳಿರಬೇಕು. ಆಸು, ಈಸು, ಏಸು ಹಿಂದಿನ ಕನ್ನಡ ದಲ್ಲಿವೆ. ಈಗಲೂ ಜನರಲ್ಲಿ ಬಳಕೆಯಲ್ಲಿವೆ. ಆಟು, ಈಟು, ಓಟು (ಅದಷ್ಟೂ, ಎಲ್ಲವೂ) ಈಗಲೂ ಜನ ರಲ್ಲುಂಟು. ಯಾವಾಗಲೋ ಆಸು, ಟು, ಮುಂತಾಗಿ ರೂಪ ಒಂದು ಆಸುಟು, ಅಷ್ಟು ಮುಂತಾದ ಪದಗ ಳಾದವು. ಈಗ ಇವೇ ಅಷ್ಟು, ಇಷ್ಟು ಎಷ್ಟು ಎಂದು ಉಪಯೋಗದಲ್ಲಿವೆ. ಒಷ್ಟೂ (ಅವಷ್ಟೂ, ಅವೆಲ್ಲ) ಗ್ರಾಮ್ಯ. ರವಷ್ಟು, ರವೆಯಷ್ಟು. ಇದೂ ಗ್ರಾಮ್ಯ.

೨೩

೭೦. ಒಂದೇ ಶಬ್ದ ನಾಮವಾಚಕ ಕ್ರಿಯಾವಾಚಕ ಎರಡೂ ಆಗುವುದು ಕನ್ನಡದಲ್ಲಿ ಬಹು ಸಾಮಾನ್ಯ. ಇದು ದ್ರಾವಿಡದ ಇತರ ಭಾಷೆಗಳಲ್ಲಿಯೂ ಕಾಣುತ್ತದೆ.

ಕೆಲವುವೇಳೆ ಒಂದಲ್ಲ ಒಂದು ತುಣುಕು ಸೇರಿ ಇಂಥ ಪದವಾಗುತ್ತದೆ.

ಸಕರ್ಮಕ ಕ್ರಿಯಾಪದವಾದರೆ ಅದನ್ನು ಏಕವಚ ನದ ವಿಧಿರೂಪವಾಗಿ ಬಳಸುತ್ತದೆ.

ಅಕರ್ಮಕ ಕ್ರಿಯಾಪದಕ್ಕೆ ಇಸು ಪ್ರತ್ಯಯವನ್ನು ಸೇರಿಸಿದರೆ ಅದು ಸಕರ್ಮಕವಾಗುತ್ತದೆ. ಕನ್ನಡದ ಈ ಪ್ರತ್ಯಯ ತಮಿಳಿನಲ್ಲಿ ತು ವಿ ಮುಂತಾದ ಬೇರೆ ರೂಪ ದಲ್ಲಿ ಕಾಣುತ್ತದೆ.

ಅನುಕರಣ ಕ್ರಿಯಾಪದಗಳು ಕುಟ್ಟು ಪ್ರತ್ಯಯ ಸೇರಿ ಆಗುತ್ತವೆ. ಗೊಣಗುಟ್ಟು, ಕಿರುಗುಟ್ಟು.

"ಬಿಡು" ಸೇರಿದರೆ ಕ್ರಿಯೆಯ ಅರ್ಥಕ್ಕೆ ಹೆಚ್ಚು ಎಂಬ ಅರ್ಥ ಬರುತ್ತದೆ. ಹೊಡೆದುಬಿಡು.

ಕನ್ನಡದಲ್ಲಿ ಕರ್ಮಣಿ ಪ್ರಯೋಗ ಬಳಕೆಯಲ್ಲಿಲ್ಲ.

ಕೊಳ್ ಸೇರಿದರೆ ತನ್ಮನ್ನೆ ಎಂಬ, ತನ್ನಲ್ಲಿ ಎಂಬ, ಅರ್ಥ ಬರುತ್ತದೆ. ಹೊಡೆದು ಕೊಳ್ಳು, ಆಡಿ ಕೊಳ್ಳು. ಕ್ರಿಯಾಪದ ಪಡೆಯುವ ರೂಪಗಳಲ್ಲಿ ಬೇರೆ ಬೇರೆ ಪುರುಷವನ್ನು ಸೂಚಿಸುವುದಕ್ಕೆ ಸರ್ವನಾಮಗಳೇ ತುಣುಕುಗಳಾಗುತ್ತವೆ.

ಏನ್.	ಏ.		ಏವ್. ಏ.
ಈ.	ಏ.		ಈರ್. ಇ.
ಅನ್.	ಏ.	}	ಅರ್. ಏ.
ಅಳ್.	ಏ.	}	
ಅದ್.	ಏ.	}	
ಎನ್.			ಎವ್.
ಎ			ಇರ್.

ಕ್ರಿಯಾಪದದ ಬೇರಿನ ಮೇಲೆ ಕಾಲಸೂಚಕವಾದ ತುಣುಕುಗಳು ಸೇರಿ ಅವುಗಳ ಮೇಲೆ ಈ ಪ್ರತ್ಯಯಗಳು ಬರುತ್ತವೆ.

ಮಾಡು. ಇದ್. ಎನ್. ಉ : ಮಾಡಿದೆನು.

ಕುಂ, ಗುಂ, ಎಂಬ ಪ್ರತ್ಯಯ ವರ್ತಮಾನ ಭವಿಷ್ಯ ಎರಡು ಕಾಲದಲ್ಲೂ ಉಪಯೋಗವಾಗುತ್ತದೆ.

ಮಾಡಿ, ಹೇಳಿ ಎಂಬ ರೂಪಗಳು ಮಾಡಿ (ದು) ಹೇಳಿ (ದು) ಎಂಬ ರೂಪಗಳಿಂದ ದು ಉದುರಿ ಆಗಿರುವವು.

ಕೆಲವು ಕ್ರಿಯಾಪದಗಳು ನಿಷ್ಪನ್ನವಾಗುವ ರೀತಿ ಯಿಂದ ಅವುಗಳ ಬೇರು ಯಾವುದು ಎಂಬ ಸಂದೇಹ ಹುಟ್ಟುತ್ತದೆ.

ಬಾ	ಬರ್	ಬಂದು
ತಾ	ತರ್	ತಂದು
ಸೋ		ಸೊಂದು
ಬೇ		ಬೆಂದು

ಈ ಶಬ್ದಗಳನ್ನು ನೋಡಿದರೆ ಮೊದಲ ಎರಡರ ಬೇರು ಬಾ, ತಾ, ಎಂದು ಇರಬೇಕೆಂದು ತೋರುತ್ತದೆ. ಆದರೆ ಬರುತ್ತಾನೆ, ತರುತ್ತಾನೆ, ಬರುವನು, ತರು ವನು, ಬರಲಿಲ್ಲ, ಈ ರೂಪಗಳು ಬೇರು ಬರ್ ಎಂದು ಇರಬೇಕು ಎಂದೂ ಸೂಚಿಸುತ್ತವೆ.

ಪ್ರಾಯಶಃ ಬಾರ್ ತಾರ್ ಮೊದಲು ಬೇರುಗಳಾ ಗಿದ್ದು ಬರ್, ತರ್, ಆಗಿವೆ

ಎನ್ ತುಣುಕು ನಾಮಪದಕ್ಕೆ ಸೇರಿ ಅದನ್ನು ಕ್ರಿಯೆಗೆ ಸಮನಾಗಿ ಮಾಡುತ್ತದೆ. ಕವಿ ಕೇಶವನೆನ್, ಕವಿ ಕೇಶವನು ನಾನು.

ಅಲ್, ಇಲ್ ನಿಷೇಧ ಸೂಚಕಗಳ ಬೇರುಗಳೂ ಆಗುತ್ತವೆ. ಪ್ರತ್ಯಯಗಳೂ ಆಗುತ್ತವೆ.

ಒಂದೇ ತುಣುಕು ಹಲವು ಕೆಲಸದಲ್ಲಿ ಬಳಕೆಯಾಗುತ್ತದೆ. ಉತ್ ಮಾಡುತ್ತಾನೆ ಮಾಡುತ್ತ ಮಾಡುವುದು ಈ ಮೂರು ರೂಪಗಳಲ್ಲಿಯೂ ಬರುತ್ತದೆ.

ಪ್ರಥಮ ಪುರುಷದ ವರ್ತಮಾನ ಕ್ರಿಯೆಯಲ್ಲಿ ಸಾಮಾನ್ಯವಾಗಿ ಎನೆ ಪ್ರತ್ಯಯ ಬರುತ್ತದೆ. ಕೆಲವು ಜನರಲ್ಲಿ ಎ ಉ ಆಗಿರುವುದುಂಟು: ಬರುತ್ತೇನು ಇತ್ಯಾದಿ.

ಇ ಮಧ್ಯಮ ಪುರುಷದ ಕ್ರಿಯೆಯ ವಿಧಿರೂಪದಲ್ಲಿ ಬಹುವಚನದ ಗುರುತಾಗುತ್ತದೆ. ಹೋಗು ಹೋಗಿ ಇತ್ಯಾದಿ. ಬಾ ಬರ್ರಿ ಎಂಬಲ್ಲಿ ಬರ್ರಿ ಇದಕ್ಕೆ ಒಂದು ಉದಾಹರಣೆ.

ನಮ್ಮ ಹಾಡು

ಶ್ರೀ ಶ್ರೀನಿವಾಸ್ ಶೇಟ್

ಸ್ವರ್ಣದೀಪ ಅರಸೆ ಬಾಳ
ದೋಣಿ ಬಿಟ್ಟವಿ
ಭವ-ವಾರಿಧಿಗಿಳಿಸಿ ಅದನು
ಮುಂದೆ ನಡೆಸಿವಿ.
ದ್ವೀಪ ಕಾಂಬ ಹಂಬಲಕೀ
ದೋಣಿ ಸಾಗಿದೆ.
ಈಗ, . . ಇನ್ನು . . ಮುಂದೆ – ಎಂಬ
ಆಶೆಗಂಟಿದೆ.
ಹುಟ್ಟು ಹಾಕಿ ಹಾಕಿ ಹಾಕಿ
ಕೈಯೆ ಸೋತುವೊ
ದ್ವೀಪವರಸಿ ಅರಸಿ ಅರಸಿ
ಕಣ್ಣೆ ನೋಯ್ದುವೊ.
ಕುಪಿತ ಭೂತ ತೆರೆಗಳೆದ್ದು
'ಬಿಡದೆ ಬಡಿದವೊ
ಘರ್ಜಿಸುತ್ತ ಭೋರೆಂದು
ನುಂಗೆವೆಂದುವೊ.
ಹಸಿದ ಪ್ರೇತ ಬುಸುಗುಡುವೊಲು
ಗಾಳಿ ಬೀಸಿತೊ
ಗಿರಗಿರನೇ ದೋಣಿ ತಿರುಗಿ
ಮುಳುಗಿ ಎದ್ದಿತೊ.
ದಿಕ್ಕುದೆಸೆಯನರಿಯದ ವೊಲು
ದೋಣಿ ಸಾಗಿದೆ
ನೊಣವು ನಾಸಿಕದೊಳು ಸೇರ್ದ
ಹಸುವೊಲಾಗಿದೆ.
ಭೀಕರವಹ ಜಲಚರಗಳ
ಭಯವು ಚಣಚಣ
ಕಾಡಿ, ಎಮ್ಮ ಮನಮಲರಿಗೆ
ಬಿಸಿಲು – ದಿಗಿಲಿನ.

* * *

ಮೂಡಣದಲಿ ನೂರು ಬಾರಿ
ಸೂರ್ಯನುದಯುವ
ಕಂಡೆವಾವು ; – ಯೇಸೊ ಸಲಾ
ಚಂದ್ರನಸ್ತವ.
ಹುಟ್ಟು ಹಾಕಿ ಹಾಕಿ ಹಾಕಿ
ಕೈಯು ಸೋತುವೊ
ಬಿಸಿಲುಗುದುರೆ ದ್ವೀಪವೆಂಬ
ಶಂಕೆ ಮೂಡಿತೊ
ಶಂಕೆ ಮೂಡಿ ಮನವು ಬಾಡಿ
ತಣ್ಣಗಾಗಿದೆ.
ದ್ವೀಪಕಾಂಬ ಹುಚ್ಚು ಗಿಚ್ಚು
ಇಲ್ಲದಾಗಿದೆ
'ಬದುಕಿ ಉಳಿಯಲನಿತೆ ಸಾಕು' –
ಜೀವ ನುಡಿದಿದೆ.
ಆದರೂನು . . . ಸ್ವರ್ಣದ್ವೀಪ
ಕರೆದೆ ಕರೆದಿದೆ
ಅದರ ನೆನಕೆ ಮಾತ್ರ ಕಷ್ಟೆ
ಮನವು ಅರಳಿದೆ.
ಸ್ವರ್ಣದ್ವೀಪ ! ಸ್ವಪ್ನ ಮಧುರ
ಅಹಹ ಕಲ್ಪನಾ
ಕಣ್ಣ ಮುಂದೆ ನೂರು ಕನಸ
ಸೊಗಸು ರಿಂಗಣ.
ಅರಳು ಮನದಿ, ದ್ವೀಪ ತಿಳಿಯೆ
ಪಣವ ತೊಟ್ಟೆವೊ.
ಅನಕಂತೆಯೆ ಹುಟ್ಟು ಹಾಕಿ
ಮುಂದೆ ನಡೆದೆವೊ.
ಸ್ವರ್ಣದ್ವೀಪ ಅರಸೆ ಬಾಳ
ದೋಣಿ ಬಿಟ್ಟವಿ.
ಇಂದಿಗಲ್ಲದಿರೆ ನಾಳೆಯೊ
ನಿಜಕು ಕಾಂಬೆವಿ.

ಸರ್ ಎಂ. ವಿಶ್ವೇಶ್ವರಯ್ಯನವರು

ಶ್ರೀ ಆರ್. ವೆಂಕಟೇಶಮೂರ್ತಿ

ಆಧುನಿಕ ಮೈಸೂರಿನ ನಿರ್ಮಾಪಕರಾದ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ನಾನು ಕೇಳಿದ್ದು ೧೯೨೦ರಲ್ಲಿ. ಆಗ ನನಗಿನ್ನೂ ಚಿಕ್ಕ ವಯಸ್ಸು. ಹೈಸ್ಕೂಲಿನ ತರಗತಿಗಳಲ್ಲಿ ಓದುತ್ತಿದ್ದೆ. ನಮ್ಮ ಮುಖ್ಯೋಪಾಧ್ಯಾಯರಾದ ದಿವಂಗತ ಶ್ರೀ ಕೆ. ರಾಮಚಂದ್ರರಾಯರು ಸರ್. ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತ 'ಸರ್ ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿ ಮುಂದರಿದೇ ಇದ್ದರೆ ಅವರು ಮೈಸೂರನ್ನು ಸಣ್ಣ ಇಂಗ್ಲೆಂಡಾಗಿ ಮಾಡಿಬಿಡುತ್ತಿದ್ದರು' ಎಂದರು. ಆಗ ನನಗೆ ಅವರಾಡಿದ ಕಹಿಮಾತಿಗೆ ಕಾರಣವಾಗಲಿ ಹೇಳಿಕೆಯ ಅರ್ಥವಾಗಲಿ ಆಗಲಿಲ್ಲ. ಅರ್ಥವಾಗಿದ್ದರೆ ಪೂಜ್ಯರಾದ ಮುಖ್ಯೋಪಾಧ್ಯಾಯರನ್ನು 'ಹಾಗೆ ಮಾಡಿದರೆ ಏನಂತೆ' ಎಂದು ಕೇಳಲು ಹಿಂಜರಿಯುತ್ತಿರಲಿಲ್ಲ. ಸರ್ ವಿಶ್ವೇಶ್ವರಯ್ಯನವರ 'ಸಣ್ಣ ಇಂಗ್ಲೆಂಡಿ'ನ ಕಲ್ಪನೆ ಮೈಸೂರನ್ನು ಈಗಿನದಕ್ಕಿಂತ ಚೆನ್ನಾದ ಮೈಸೂರನ್ನಾಗಿ ಖಂಡಿತ ನಿರ್ಮಿಸುತ್ತಿತ್ತು.

* * *

ನನ್ನ ಜೀವನದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಎರಡನೆಯ ಸಲ ರೂಪುಗೊಂಡದ್ದು ನಾನು 'ಕಾಮರ್ಸ್' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಸೇರಿಕೊಂಡ ಅನೇಕ ವರ್ಷಗಳ ಮೇಲೆ. ಶ್ರೀಯುತರು ನನ್ನನ್ನು ಒಂದು ಸಂಜೆ 'ಟೀ'ಗೆ ಆಹ್ವಾನಿಸಿದರು. ನಾನು ಆಹ್ವಾನವನ್ನು ಕುತೂಹಲದಿಂದ ಸ್ವೀಕರಿಸಿದೆ. ಆ ಆಹ್ವಾನ ನನ್ನನ್ನು ದೇಹಾದ್ಯಂತ ರೋಮಾಂಚನಗೊಳಿಸಿತು. ಮುಂಬರುವ ಸಂದರ್ಭವನ್ನು ಕುತೂಹಲದಿಂದ ಎದುರುನೋಡುತ್ತ ನಿಯಮಿತವಾದ ಗಂಟೆಯನ್ನು ಕಾಯುತ್ತ, ಈ ಮಹನೀಯರು ಇಂದಿನವರೆಗೂ ನಡಸಿಕೊಂಡು ಬಂದಿರುವ ಕಾಲದ ಶಿಸ್ತನ್ನು ಅರಿತುಕೊಂಡು ಕಾಲಕ್ಕೆ ಸರಿಯಾಗಿ ಅಲ್ಲಿಗೆ ಹೋದೆ. ಎಂದಿನಂತೆಯೇ ಸರ್ ಎಂ. ವಿಶ್ವೇಶ್ವರಯ್ಯನವರು ಸಜ್ಜಿತರಾಗಿ ನನ್ನನ್ನು ಸ್ವಾಗತಿಸಲು ಸಿದ್ಧವಾಗಿ ನಿಂತಿದ್ದರು. ಬಹುಬೇಗನೆ, ನಾನು ಸುಖಕರವಾಗಿ ಸಮಾಧಾನ ಮನಸ್ಸಿನಿಂದ ಇರಲು ಸಹಾಯ ಮಾಡಿದರು. ಮೈಸೂರಿನ ತರುಣರೊಬ್ಬರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮುಖ್ಯವಾದ 'ಕಾಮರ್ಸ್' ಅಂಥ ಪತ್ರಿಕೆಯೊಂದನ್ನು ಸಂಪಾದಿಸುತ್ತಿರುವುದಕ್ಕಾಗಿ ತಮ್ಮ ಆನಂದವನ್ನೂ ಸುಖವನ್ನೂ ವ್ಯಕ್ತಪಡಿಸಿದರು, ನನಗೆ ತುಂಬು ಯಶಸ್ಸನ್ನೂ ಕೋರಿದರು. 'ನೀವು ಇನ್ನೂ ಚೆನ್ನಾಗಿ ಪತ್ರಿಕೆ ನಡಸಬೇಕು' ಎಂದು ಪ್ರೋತ್ಸಾಹದಾಯಕ ನುಡಿಗಳನ್ನಾಡಿದರು. 'ನಿಮ್ಮ ಆಶೀರ್ವಾದದಿಂದ, ದೇವರ ಅನುಗ್ರಹದಿಂದ' ಎಂದು ನಾನು ಹೇಳುತ್ತಿರುವಾಗಲೇ ತಡೆದು, 'ಅಲ್ಲ, ನಿಮ್ಮ ಪ್ರಯತ್ನದಿಂದ' ಎಂದರು. 'ಪಸ್ಮಂ ಮನುಷ್ಯ ಪ್ರಯತ್ನಂ, ಸಪ್ತಮುಂ ದೈವ ಚಿಂತನಂ' ನಾನು ಅನೇಕಸಲ ಕೇಳಿದ ಅನುಭವದ ಮಾತಿಗಿಂತ ಇದು ಹೆಚ್ಚಿನ ಮಾತು.

* * *

೧೯೪೫ನೆಯ ಆಗಸ್ಟ್ ತಿಂಗಳ ಕೊನೆಯ ಭಾಗದಲ್ಲಿ, ನಾನು ಇಂಗ್ಲೆಂಡಿಗೆ ಹೊರಡುವುದಕ್ಕೆ ಮುಂಚೆ ತೆಗೆದುಕೊಂಡ ಸರ್ ಎಂ. ವಿ. ಅವರ ಭೇಟಿಯೊಂದು ಇನ್ನೂ ನನ್ನ ನೆನಪಿನಲ್ಲಿ ಉಳಿದಿದೆ. ನನ್ನ ಇಂಗ್ಲೆಂಡ್ ಪ್ರಯಾಣದ ಸುದ್ದಿಯನ್ನು ಕೇಳಿ, ತಮ್ಮ ಕಾರ್ಯದರ್ಶಿಯವರಿಗೆ ಹೇಳಿದರೆಂದು ಕಾಣಿಸುತ್ತದೆ. ನನಗೆ ಫೋನ್ ಮಾಡಿ ನಾನು ಅವರನ್ನು, ಹೊರಡುವುದಕ್ಕೆ ಮುಂಚೆ ಕಾಣಬೇಕಂತೆ ಎಂದು. ನಾನು ಇಂಥ ವೇಳೆ ಇಷ್ಟು ಗಂಟೆ ಒಳಗೆ ಎಂದು ಸಮಯವನ್ನು ಹೇಳಿದೆ. ನನ್ನ ಆವಸರದ ಪ್ರಯಾಣದ ಸಜ್ಜಿನಲ್ಲಿ ನನಗೆ ಯಾವಾಗ ಅವಕಾಶ ಸಿಕ್ಕುತ್ತದೆ ಎಂಬುದೇ ಖಚಿತವಾಗಿ ತಿಳಿದಿರಲಿಲ್ಲ. ಹಾಗೂ ಹೀಗೂ ಮಾಡಿ ರಾತ್ರಿ ೯–೩೦ರ ಸುಮಾರಿಗೆ ಅವರ ಸ್ಥಳಕ್ಕೆ ಹೋದೆ. ಹೋಗುವಾಗಲೆ ನಾನು ಅರ್ಧ ಅಪರಾಧಿಯಂತೆಯೇ ಇದ್ದೆ. ಸರ್ ಎಂ. ವಿ. ಯವರು ನನ್ನ ಅಪ್ರಿಯದಿಂದ ಅಸಂತೋಷವನ್ನೇನೂ ವ್ಯಕ್ತಪಡಿಸಲಿಲ್ಲ, ಆ ರೀತಿಯ ಸೂಚನೆಯೂ ಕಂಡುಬರಲಿಲ್ಲ. ಬದಲು ನನ್ನನ್ನು ಆ ಹೊತ್ತಿನಲ್ಲೂ ತಮ್ಮ ಕೊಠಡಿಗೆ ಆಹ್ವಾನಿಸಿದರು. 'ಕಾಮರ್ಸ್' ಪತ್ರಿಕೆಯ ಆಡಳಿತ ನನ್ನನ್ನು ಇಂಗ್ಲೆಂಡಿಗೆ ಕಳುಹಿಸಲು ಆಲೋಚಿಸಿದ್ದಕ್ಕಾಗಿ ಅವರಿಗೆ ತುಂಬಾ ಆನಂದವಾಗಿತ್ತು. ಅವರು ಆಗ ಹೇಳಿದ ಬುದ್ಧಿವಾದದ ಮಾತುಗಳೆಂದರೆ 'ನಿನ್ನ ಬಳಿ ಯಾವಾಗಲೂ ಒಂದು "ನೋಟುಬುಕ್ಕು" ಜೊತೆಗೆ

ಇರಲಿ. ನಿನಗೇನಾದರೂ ನಮ್ಮ ದೇಶಕ್ಕೆ ಮುಖ್ಯವೆಂದಾಗಲಿ ಉಪಯೋಗವಾದುದೆಂದಾಗಲಿ ಕಂಡುಬಂದರೆ ಅದನ್ನು ಗುರುತು ಮಾಡಿಕೊ. ನೀನು ಹಿಂತಿರುಗಿದಮೇಲೆ ಅವನ್ನು ಕುರಿತು ಬರೆ!' ಎಂಬುದು. ಮರೆಯಲಾಗದ ಅಮೂಲ್ಯವಾದ ಇಂಥ ತಿಳಿವಳಿಕೆಯನ್ನು ಕೊಡಲು ಕರೆಸಿದ ಸರ್ ಎಂ. ವಿ. ಯವರು ಎಂಥ ಹಿತೈಷಿಗಳು! ಎಷ್ಟು ಒಳ್ಳೆಯತನ! ಆ ಬುದ್ಧಿವಾದ ನನಗೆ ಮಾತ್ರವಲ್ಲ ಪರದೇಶಗಳಿಗೆ ಪ್ರವಾಸ ಬೆಳಸುವ ಯಾವ ಯುವಕನಿಗೂ ಯಾವ ಯುವತಿಗೂ ಸಲ್ಲತಕ್ಕದ್ದು. ಅವರ ಉಪದೇಶ, (ಸೂತ್ರ), ಸರ್ ಎಂ. ವಿ. ಅವರು ಮಾಡುವ ಕಾರ್ಯದ ಶಿಸ್ತಿನ ಒಂದಂಶದ ಪರಿಚಯ ಮಾಡಿಕೊಡುತ್ತದೆ.

ಮತ್ತೊಂದು ಭೇಟಿಯನ್ನು ಕುರಿತು ಇಲ್ಲಿ ಹೇಳಬೇಕಾಗಿದೆ. ನನ್ನನ್ನು ಹೊಗಳಿಸಿಕೊಳ್ಳುವುದರ ಬಗ್ಗೆ ಅಲ್ಲ. ಸರ್ ಎಂ. ವಿ. ಅವರು ತಮಗೆ ನಡೆದ ಒಂದು ಘಟನೆಯ ಬಗ್ಗೆ ಕೊಟ್ಟ ವಿವರದಲ್ಲಿ ಓದುಗರೂ ಭಾಗ ವಹಿಸಲಿ ಎಂದು. ನಮ್ಮಿಬ್ಬರಿಗೂ ಆಹ್ವಾನದಿಂದ ಒಂದು ಸಂತೋಷಕೂಟದಲ್ಲಿ ಭಾಗ ವಹಿಸುವ ಅವಕಾಶ ದೊರಕಿತು. ಈಗ ನಾನು ಅವರಲ್ಲಿ ಯೂರೋಪಿನ ಬಂಡವಾಳಗಾರರು ಬ್ರಿಟಿಷ್ ನೌಕರರಿಗೂ ಭಾರತೀಯ ನೌಕರರಿಗೂ ತೋರಿಸುವ ವ್ಯತ್ಯಾಸದ ಬಗ್ಗೆ ದೂರು ಹೇಳುತ್ತಿದ್ದೆ. ಅನೇಕ ಸಲ ಅವರ ಯೋಚನೆಯ ಮಾರ್ಗವೇ ಒಂದು ರೀತಿಯದು, ಈ ದೂರು ಅಥವಾ ಅಸಮಾಧಾನ, ಬಾಧ್ಯಸ್ಥನಾದ ನೌಕರನ ಸ್ಥೈರ್ಯ ಮತ್ತು ಚುರುಕುತನಗಳನ್ನು ಮೆಚ್ಚುವ ಅಭಾವದಿಂದ ಬಂದದ್ದು ಎಂದರು. ಒಮ್ಮೆ ಒಬ್ಬ ಇಂಗ್ಲಿಷ್ ಅಧಿಕಾರಿ ಸರ್ ಎಂ. ವಿ. ಅವರು ಕೈಗೊಂಡಿದ್ದ ಕೆಲಸವನ್ನು ಪರಿಶೀಲಿಸುವುದಕ್ಕಾಗಿ ಬರುತ್ತೇನೆಂದು ಬರೆದು ಕಳುಹಿಸಿದರಂತೆ. ಅಧಿಕಾರಿಗಳಿಗಾಗಿ ಇವರು ಕಾದರು. ಅವರು ಬಂದಮೇಲೆ ಇಬ್ಬರೂ ಕುದುರೆಯ ಮೇಲೆ ಕೆಲಸವನ್ನು ಪರಿಶೀಲಿಸಲು ಹೊರಟರು, ಅಧಿಕಾರಿಗಳ ಸೂಚನೆಯಂತೆ. ಒಂದು ಜಾಗದಲ್ಲಿ ಮರದ ಕೊಂಬೆಗಳು ಕೆಳಗಡೆಗೆ ಬಾಗಿದ್ದವು. ಇದರಿಂದ ಅವರ ಪ್ರಯಾಣಕ್ಕೆ ತುಂಬ ತೊಂದರೆಯಾಗಿದೆ ಎಂದು ಅಧಿಕಾರಿಗೆ ಭಾಸವಾಯಿತು. ಅವರು ಹೇಳಿದರು: 'ಈ ಕೊಂಬೆಗಳನ್ನು ಕಡಿಸಿ ಹಾಕಿಸುವುದಕ್ಕೆ ಆಗುತ್ತಿರಲಿಲ್ಲವೆ?' ಎಂದು. ಸರ್ ಎಂ. ವಿ. ಅವರು ಶಾಂತವಾಗಿ ಉತ್ತರ ಕೊಟ್ಟರು: "ನಾವು ಕುದುರೆಯ ಮೇಲೆ ಪರಿಶೀಲನೆಗೆ ಬರುತ್ತೇವೆಂದು ತಿಳಿದಿರಲಿಲ್ಲ" ಎಂದು. ಇಂಗ್ಲಿಷ್ ಅಧಿಕಾರಿಗೆ ಈ ಸೂಚನೆ ತಟ್ಟಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಇನ್ನು ಸ್ವಲ್ಪ ಮುಂದೆ ಹೋದಾಗ ಇದೇ ರೀತಿ ಕೊಂಬೆಗಳು ಅಡ್ಡ ಬಂದಾಗ ಈ ಮಾತುಗಳನ್ನೇ ಮತ್ತೆ ಮತ್ತೆ ಹೇಳಿದರು. ಸರ್ ಎಂ. ವಿ. ಯವರ ಈ ಸಲದ ಪ್ರತ್ಯುತ್ತರ; 'ನಾವು ಕೆಲಸವನ್ನು ಪರಿಶೀಲಿಸಬೇಕು ಎಂದು ತಿಳಿದಿದ್ದೆ. ನಿಮಗೆ ಅದು ಬೇಕಾಗದಿದ್ದರೆ ನಾನು ಹಿಂದಿರುಗಿ ಹೋಗುತ್ತೇನೆ.' ಹೀಗೆ ಹೇಳಿ ಇವರು ತಮ್ಮ ಕುದುರೆಯನ್ನು ತಿರುಗಿಸಿ ಹೊರಟು ಬಂದುಬಿಟ್ಟರಂತೆ. ಈ ಘಟನೆಯನ್ನು ಅವರು ನೆನಪಿಗೆ ತಂದುಕೊಂಡು ಹೇಳಿದುದರ ಕಾರಣ ನಮ್ಮ ಕೆಲಸವನ್ನು ನಾವು ಮನಸ್ಸು ತೃಪ್ತಿಯಾಗುವಂತೆ ಸಮರ್ಪಕವಾಗಿ ಮಾಡಿದ್ದೇ ಆದರೆ ನಾವು ಯಾರಿಗೂ ಹೆದರಬೇಕಾದದ್ದಿಲ್ಲ. ಅಲ್ಲದೆ ಯಾರಾದರೂ ನಮ್ಮನ್ನು ಕೆಲಸಕ್ಕೆ ಸಂತೋಷದಿಂದ ನಿಯಮಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ ಎಂಬ ಭಾವನೆಯನ್ನು ನನ್ನಮೇಲೆ ಅಚ್ಚೊತ್ತುವುದು ಎಂದುಕೊಂಡೆ. ಈ ತೂಕವಾದ ಬುದ್ಧಿವಾದವನ್ನು ಸಂಪತ್ತಿನಂತೆ ಕಾಪಾಡಲು ನನಗೆ ಅನೇಕ ಕಾರಣಗಳುಂಟು.

‘ನಮ್ಮ ನುಡಿ’ಯ ವಿಚಾರ

ಶ್ರೀ ಆರ್. ಕೆ. ಜಯತೀರ್ಥಾಚಾರ್

‘ಒಂದು’ ಪದದ ವಿಷಯ ಬರೆಯುತ್ತ ನೀವು ಕನ್ನಡದಲ್ಲಿ ಮತ್ತಿತರ ದ್ರಾವಿಡ ಭಾಷೆಗಳಲ್ಲಿ ‘ಒಂದ’ರ ಬಗ್ಗೆ ಪಟ್ಟಿ ಮಾಡಿದ್ದೀರಿ. ಇದಕ್ಕೂ ಇಂಗ್ಲಿಷಿನ ‘one’ ಎಂಬುದಕ್ಕೂ ಸಂಸ್ಕೃತದ ‘ಏಕ’ ಎಂಬುದಕ್ಕೂ ಸಂಬಂಧವಿಲ್ಲ ಎಂದು ಹೇಳಿದ್ದೀರಿ. ಅಲ್ಲದೆ ಅದು ತಮಿಳಿನ ‘ಒನ್ರು’ ಎಂಬ ಶಬ್ದಕ್ಕೆ ಹೊಂದಿಕೊಂಡಿದೆಯೆಂದೂ ತಿಳಿಸಿದ್ದೀರಿ. ನನಗೆ ತೋಚುವುದು ಹೀಗೆ: ಇವೆಲ್ಲ ಬಹುಶಃ ಸಂಸ್ಕೃತದ ‘ವಂಟಃ’ ಎಂಬ ಶಬ್ದದಿಂದ ಹುಟ್ಟಿಬಂದಿರಬೇಕು ಎಂದು. ಇದರ ಅರ್ಥ ಕನ್ನಡದಲ್ಲಿ ಹೇಳುವ ‘ಒಂಟಿ’ ಎಂದರೆ ಬ್ರಹ್ಮಚಾರಿ, ಮದುವೆಯಾಗದ ಮನುಷ್ಯ ಎಂದು. ಬ್ರಹ್ಮಚಾರಿ ಒಂಟಿಮನುಷ್ಯ, ದಂಪತಿಗಳಿಗೆ ಹೋಲಿಸಿದರೆ. ‘ವಂಟಃ’ ಬಹುಶಃ ರೂಪಾಂತರ ಹೊಂದಿ ‘ವಣ್’ ಆಗಿ ಇಂಗ್ಲೀಷಿನ ‘one’ ಆಗಿ ಒನ್ರು ಒಂದು ಇತ್ಯಾದಿ ರೂಪಗಳನ್ನು ಪಡೆದಿರಬಹುದು. ‘ಒನ್’ ಪದದ ಕಲ್ಪನೆ ಸಂಖ್ಯಾ ವಾಚಕದ ಮೂಲಪಾಯೆ ಆದ್ದರಿಂದ ಇವೆಲ್ಲಕ್ಕು ಇದು ಸಮಾನವಾದ ಮೂಲವಾಗಬಹುದು. ಆದಿಮಾನವ ಹೆಣ್ಣನ್ನು ತನ್ನ ಜೊತೆಗೆ ಸೇರಿಸಿಕೊಂಡಾಗ ಅವನು ಎರಡಾದ ಅಥವಾ ಅವರು ದಂಪತಿಗಳಾದರು. ಇಬ್ಬರಾದರು; ‘ದೌ’ ಆದರು. ಮದುವೆಯಾಗದೆ ನಿಂತ ಮಾನವ **‘ಒಂಟಿ’** ಆದಂತೆ (ವಂಟಃ). ಆದ್ದರಿಂದ ನಿಮ್ಮ ಪಟ್ಟಿಗೆ ಇವುಗಳನ್ನು ಸೇರಿಸಿಕೊಳ್ಳಬಹುದು. (un) ಉನ್, une (French) einn (Iceland) ಮತ್ತು in (German.)

ಇದೇ ರೀತಿ ಸಮಾನ ಮೂಲ ಇರುವ ಮತ್ತೊಂದು ಪದ ನನಗೆ ತಿಳಿದಂತೆ ಎಂದರೆ ತಿಳಿದ ಎಲ್ಲ ಭಾಷೆಗಳ ವಂಶಗಳ ಅಥವಾ ಭಾಗಗಳನ್ನು ಭೇದಿಸಿ ಹೇಳುವುದಾದರೆ ನಿರ್ದೇಶ ವಾಚಕಗಳ ಕಲ್ಪನೆಗೆ ಸೇರಿದ ಇಂಗ್ಲಿಷಿನ ಸ್ಥಾನ ವಾಚಕ ಶಬ್ದಗಳಾದ ‘Here’ ಮತ್ತು ‘There’. ಈ ಪಟ್ಟಿ ನನಗೆ ತೋಚುವ ಮಟ್ಟಿಗೆ ಹೀಗಿದೆ.

ಕನ್ನಡ—ಈ ಇದು ಇಲ್ಲಿ ಇವನು
ತಮಿಳು—ಇಂಗೆ
ತೆಲುಗು—ಇಕ್ಕಡ
ಮರಾಠಿ—ಇಕಡೆ
ಹಿಂದಿ—ಇದರ್ (ಯಹಾಂ)
ಇಂಗ್ಲಿಷ್—Here (if it is not aspirated)
ಫ್ರೆಂಚ್—ini
ಸಂಸ್ಕೃತ—ಇಹ, ಇತಃ ಇದಂ (ಏತತ್,
ಏಷಃ Variations)

ಪ್ರಮುಖವಾಗಿ ಗಮನ ಸೆಳೆಯುವ ಅಂಶ ಪದಗಳ ಮೊದಲ ಧ್ವನಿ ‘ಇ’ ಸ್ಥಳದ ಅಥವಾ ಮನುಷ್ಯನ ಸಾಮೀಪ್ಯವನ್ನು ಸೂಚಿಸುವುದು.

ಹೆಚ್ಚಿನ ಸಾಮ್ಯವನ್ನಲ್ಲದಿದ್ದರೂ ಸ್ವಲ್ಪಮಟ್ಟಿನದನ್ನು ಸೂಚಿಸುವ ಮತ್ತೊಂದು ನಿರ್ದೇಶಕ ಸರ್ವನಾಮವೆಂದರೆ ‘ದಟ್’

ಇಂಗ್ಲಿಷ್—ದಟ್
ಸಂಸ್ಕೃತ—ತತ್
ಫ್ರೆಂಚ್—ceth
ತೆಲುಗು—ದಾನಕಿ
ಕನ್ನಡ—ಅದು
ತಮಿಳು—ಅದಿ
ಮರಾಠಿ—ತೇ

ದ ಅಥವಾ ತ ಅಕ್ಷರಗಳ ಅಥವಾ ಧ್ವನಿಯ ಅಂಶ ಇಲ್ಲಿ ಪ್ರಧಾನ.

ತಾವು ಹೇಳಿರುವಂತೆ ಎಲ್ಲ ಶಬ್ದಗಳ ಚರಿತ್ರೆಗಳೂ ಒಂದೇ ಅಲ್ಲ ಅಥವಾ ಸಮಾನವೂ ಅಲ್ಲ.

‘one’ ಎಂಬುದರ ವಿಷಯಕ್ಕೂ ಹೇಳಬೇಕಾದ ಮಾತೆಂದರೆ ವಿಧು ಮತ್ತು ಇಂದು ಪದಗಳು ‘one’ ಎಂಬ ಅರ್ಥ ಕೊಡುತ್ತವೆ. ಇವುಗಳ ಸಂಯೋಜನೆಯಿಂದ ಅಥವಾ ಇವುಗಳ ಅಪಭ್ರಂಶದಿಂದ ‘one’ ಅಥವಾ ಒಂದು ಸಾಧಿತವಾಗಿರಬಹುದು.

ಸಂಪಾದಕೀಯ

ಭಾರತರತ್ನ ಶ್ರೀ ವಿಶ್ವೇಶ್ವರಯ್ಯನವರು

ಸೆಪ್ಟೆಂಬರ್ ತಿಂಗಳು ಎಲ್ಲ ಕನ್ನಡಿಗರಿಗೆ ಭಾರತರತ್ನ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಹುಟ್ಟಿದ ತಿಂಗಳೆಂದು ಪ್ರಿಯ ಆಗುತ್ತ ಬಂದಿದೆ. ಈಗ ಶ್ರೀಯುತರಿಗೆ ೯೭ ವರ್ಷ ತುಂಬಿತು. ಹಿಂದಿನ ಹಲವು ವರ್ಷ ನಡೆದಂತೆ ಈ ಸಲವೂ ಬೆಂಗಳೂರಿನಲ್ಲಿ ಶ್ರೀಯುತರ ಹುಟ್ಟಿದ ಹಬ್ಬದ ಸಲುವಾಗಿ ಎರಡು ಸಂಸ್ಥೆಗಳು ಒಂದು ಸಾರ್ವಜನಿಕ ಸಭೆಯನ್ನು ಕರೆದಿದ್ದವು. ವೃದ್ಧ ಮುಖ್ಯ ಅತಿಥಿ ಎಂದಿನಂತೆ ಸಭೆಗೆ ಬಂದು ತಾವು ಸಂತೋಷ ಪಟ್ಟು ಎಲ್ಲರಿಗೆ ಸಂತೋಷ ಕೊಟ್ಟು ಹಬ್ಬದಲ್ಲಿ ಭಾಗ ವಹಿಸಿದರು.

'ಜೀವೇಮ ಶರದಶ್ಶತಂ' 'ಶತಮಾನಂ ಭವತು' ಎಂಬ ವಾಕ್ಯಗಳು ಆರ್ಯರಲ್ಲಿ ಪೂರ್ವದಿಂದ ಬಳಕೆಯಾಗಿ ಬಂದಿರುವ ಆಶೀರ್ವಚನಗಳು. ಇರುವ ನೂರು ವರ್ಷ 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್' ಎನ್ನುವುದು ಉಪನಿಷತ್ತು ನುಡಿದಿರುವ ವಿಧಿ. ವಿಶ್ವೇಶ್ವರಯ್ಯನವರು ಋಷಿ ವಾಕ್ಯವನ್ನು ಸರಿಯೆನಿಸಿ ಬಾಳುತ್ತಿದ್ದಾರೆ. ಆ ದಿವಸ ತಮ್ಮ ಅನುಭವದ ಮಾತಾಗಿ ಹತ್ತು ವಾಕ್ಯಗಳನ್ನು ಶ್ರೀಯುತರು ಪ್ರಕಟಿಸಿದರು. ಆ ವಾಕ್ಯಗಳು ನಮ್ಮ ಜನದ ಬಾಳ್ವೆಯಲ್ಲಿ ರೂಪುಗೊಂಡರೆ, ದೇಶ ಬರಿಯ ಒಂದು ದೇಶವಾಗಿ ಇರುವುದಿಲ್ಲ, ಸ್ವರ್ಗಖಂಡ ಒಂದಾಗುತ್ತದೆ.

ಈ ನಮ್ಮ ಹಿರಿಯರು ಭಾರತದ ಭೂಷಣರಾಗಿ ಜನರ ಬಾಳ್ವೆಗೆ ನಂದಾದೀಪವಾಗಿ ಪೂರ್ಣಾಯುಷ್ಯವಂತರಾಗಿ ನಮ್ಮನ್ನು ಹರಸುತ್ತಿರಲಿ ಎಂದು ಕನ್ನಡ ಜನತೆ ನಾಡ ಅಧಿದೈವದಲ್ಲಿ ಪ್ರಾರ್ಥನೆ ಮಾಡುತ್ತಿದೆ.

ಶ್ರೀ ಡಾ॥ ಮಾಧವ ಪೈ

ಇದೇ ಸಂದರ್ಭದಲ್ಲಿ ನಾವು, ಕೆಲವು ತಿಂಗಳು ಹಿಂದೆ ೬೦ ವರ್ಷ ತುಂಬಿದ ಶ್ರೀಯುತ ಡಾಕ್ಟರ್ ಟಿ. ಮಾಧವ ಪೈ ಅವರ ಹೆಸರನ್ನು ಹೊಗಳಲು ಬಯಸುತ್ತೇವೆ.

ಡಾ॥ ಪೈ ಅವರು ಉಡುಪಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಹತ್ತಾರು ಸಾರ್ವಜನಿಕ ಸಂಸ್ಥೆಗಳನ್ನು ಆರಂಭಿಸಿ, ಬೆಳಸಿ, ಭದ್ರಪಡಿಸಿ ನಡಸುತ್ತಿದಾರೆ. ಶಾಲೆ, ಕಾಲೇಜು, ಕಾರ್ಖಾನೆ, ಬ್ಯಾಂಕು ಹೀಗೆ ಶ್ರೀಯುತರು ಕಟ್ಟಿರುವ ಸಂಸ್ಥೆಗಳು ಹಲವು ತೆರನವು. ಈ ಸಂಸ್ಥೆಗಳಲ್ಲಿ ಒಂದನ್ನು ಕಟ್ಟಿ ನಡಸಿದ್ದರೂ ಅದು ಒಬ್ಬರಿಗೆ ಒಂದು ಆಯುಷ್ಯದ ಕೆಲಸ ಎನ್ನಬಹುದಾಗಿತ್ತು.

ಈ ಕೆಲಸಗಳನ್ನು ಮಾಡುವಲ್ಲಿ ಶ್ರೀಯುತರು ಹತ್ತಾರು ಜನ ಸಮವಯಸ್ಕರನ್ನೂ ತರುಣರನ್ನೂ ಜೊತೆಗೆ ಸೇರಿಸಿಕೊಂಡು, ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯುವ ಒಂದು ಪಡೆಯನ್ನೇ ಸಿದ್ಧಪಡಿಸಿದ್ದಾರೆ. ಇದಾದರೂ ಕಡಮೆಯ ಕೆಲಸವಲ್ಲ.

ಶ್ರೀ ಅ. ನ. ಕೃಷ್ಣರಾಯರು

ಇದೇ ಸಂದರ್ಭದಲ್ಲಿ ನಮ್ಮ ಸೋದರ ಲೇಖಕ ಶ್ರೀ ಅ. ನ. ಕೃಷ್ಣರಾಯರ ಐವತ್ತನೆಯ ವರ್ಧಂತಿ ಉತ್ಸವ ಸಾರ್ವಜನಿಕವಾಗಿ ನಡದದ್ದೂ ನಮಗೆ ತುಂಬ ಸಂತೋಷ ಎಂದು ನಾವು ಹೇಳಬಯಸುತ್ತೇವೆ.

ಶ್ರೀ ಕೃಷ್ಣರಾಯರು ಸಾಹಿತ್ಯವನ್ನು ತಮ್ಮ ಜೀವನದ ಕಾರ್ಯಕ್ಷೇತ್ರವಾಗಿ ವರಿಸಿ ಕಷ್ಟನಿಷ್ಠುರವನ್ನು ಸಹಿಸಿ, ಮೂವತ್ತು ವರ್ಷದ ಮೇಲ್ಪಟ್ಟು ದುಡಿಯುತ್ತ ಬಂದಿದಾರೆ. ಏಕನಿಷ್ಠೆಯಿಂದ ಇಷ್ಟುಕಾಲ ಸಾಹಿತ್ಯೋಪಾಸನೆ ನಡಸಿರುವ ಒಂದು ಮಾತಿಗಾಗಿ ಕೂಡ ನಾವು ಶ್ರೀಯುತರನ್ನು ಅಭಿನಂದಿಸಬೇಕು. ಸಾಹಿತ್ಯ ಸೇವೆಯನ್ನು ಜೀವನದ ಗುರಿಯಾಗಿ ಹಿಡಿದು ಹೆಚ್ಚು ಹೆಚ್ಚು ಸಂಖ್ಯೆಯ ಜಾಣರು ದುಡಿಯುವುದು ದೇಶದ ಏಳ್ಗೆಗೆ ಅವಶ್ಯಕ. ಈ ವಿಷಯದಲ್ಲಿ ಶ್ರೀಯುತರು ನಮ್ಮ ತರುಣರಿಗೆ ಮೇಲ್ಪಂಕ್ತಿಯಾಗಿದ್ದಾರೆ.

ಹೀಗೆ ಸೊರಗಿದುಡಿಯುವ ಜನಕ್ಕೆ ಜನತೆ ಸೌಭಾಗ್ಯವನ್ನು ನೀಡದಿದ್ದರೂ ಸಾಮಾನ್ಯ ಜೀವಿಕೆಯನ್ನು ಒದಗಿಸ ಬೇಕು. ಇದು ತನ್ನ ಕರ್ತವ್ಯ ಎಂದು ಜನತೆ ಇದೀಗ ಕಲಿಯಬೇಕಾಗಿದೆ. ಶ್ರೀ ಕೃಷ್ಣರಾಯರು ಈ ಸಂಗತಿಯನ್ನು ಜನದ ಮನಸ್ಸಿಗೆ ತಂದು ಸಾಹಿತ್ಯಕ್ಕೇ ಹಿರಿಯ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರ ಸಾಹಿತ್ಯಸೇವೆ ಎಂದಿಗಿಂತ ಚೆನ್ನಾಗಿ ಎಂದಿಗಿಂತ ಶಕ್ತಿಯುಕ್ತವಾಗಿ, ಎಂದಿಗಿಂತ ಮಂಗಳಕರವಾಗಿ ಮುಂದರಿಯಲೆಂದು ನಾವು ಹಾರೈಸುತ್ತೇವೆ.

ಕೇರಳದ ಸರ್ಕಾರ

ಕೇರಳದ ಕಮ್ಯುನಿಸ್ಟ್ ಪಕ್ಷ ಕಟ್ಟಿರುವ ಸರ್ಕಾರ ಪ್ರಾಂತದ ಪ್ರಜೆ ಕಮ್ಯುನಿಸ್ಟ್ ಅಲ್ಲದವರ ಕ್ಷೇಮದ ವಿಷಯದಲ್ಲಿ ತಕ್ಕಷ್ಟು ಶ್ರದ್ಧೆ ವಹಿಸಿಲ್ಲ ಎಂದು ಗೊಂದಲ ಎದ್ದಿರುವುದು ಸರಿಯಷ್ಟೆ. ಈ ವಿಚಾರ ಈ ಪಕ್ಷ ಆ ಪಕ್ಷ ಮತ್ತೊಂದು ಪಕ್ಷ ಆಡುತ್ತಿರುವ ಮಾತುಗಳಿಂದ ಇನ್ನೂ ಬರಿಯ ಗೊಂದಲವಾಗಿ ಉಳಿದುಕೊಂಡಿದೆ.

ಕಾಂಗ್ರೆಸ್ ಅಧ್ಯಕ್ಷ ಧೇಬರ್ ಮಹನೀಯರು ಕೇರಳಕ್ಕೆ ಹೋಗಿ ಸಂಗತಿಯನ್ನು ಪ್ರತ್ಯಕ್ಷ ನೋಡಿ ಬಂದರು. ಇವರ ಪರಿಶೀಲನ ಈ ವಿಷಯವನ್ನು ಒಂದು ನಿರ್ಧಾರಕ್ಕೆ ತಂದೀತೆಂದು ನಾವು ನಿರೀಕ್ಷಿಸಿದ್ದೆವು. ಆದರೆ ಅದೇನೂ ಆಗಲಿಲ್ಲ. ಧೇಬರ್ ಮಹಾಶಯರಿಗೆ ತಾವು ಏನು ಮಾಡಬೇಕೆಂದು ತಿಳಿಯಲಿಲ್ಲ ಎಂದು ನಮಗೆ ಶಂಕೆ.

ಐವತ್ತು ಕಡೆ ಐವತ್ತು ತಪ್ಪು ನಡೆಯಿತು ಎಂದು ಒಂದು ಮಾತು ಹೇಳುವುದಕ್ಕೆ ಪ್ರತಿಯಾಗಿ, ಈ ಒಂದು ಕಡೆ ಈ ಇನ್ನೊಂದು ಕಡೆ ಈ ಮತ್ತೊಂದು ಕಡೆ ಈ ಸಂಗತಿ, ಈ ಇನ್ನೊಂದು ಸಂಗತಿ, ಈ ಮೂರನೆಯ ಸಂಗತಿ, ನಡೆಯಿತು, ಇವುಗಳ ವಿಷಯ ನನಗೆ ತಿಳಿದಂತೆ ಹೀಗೆ, ಸರ್ಕಾರವಾದ ನೀವು ಇದನ್ನು ವಿಚಾರಿಸಿ ಒಂದು ನಿರ್ಣಯಕ್ಕೆ ಬನ್ನಿ ಎಂದು ಈ ಮಹನೀಯರು ಹೇಳ ಬೇಕಾಗಿತ್ತು. ಅವಶ್ಯಕವಾದರೆ ತಾವೇ ಅಲ್ಲಿ ನಿಂತು ಅಥವಾ ತಮ್ಮ ಪ್ರತಿನಿಧಿಯನ್ನು ನಿಲ್ಲಿಸಿ ಸರ್ಕಾರ ನಡಸುವ ವಿಚಾರಣೆ ಕ್ರಮತಪ್ಪದಂತೆ ನೋಡಿಕೊಳ್ಳಬೇಕಾಗಿತ್ತು.

ಈಗಲಾದರೂ ಈ ಕಮ್ಯುನಿಸ್ಟ್ ಸರ್ಕಾರ ತಪ್ಪಿ ನಡೆಯುತ್ತಿದೆ ಎಂದು ತೋರಿಸುವುದಕ್ಕೆ ಇದೇ ದಾರಿ.

ಮದರಾಸ್ ಸರ್ಕಾರ

ಕೇರಳದ ಕಮ್ಯುನಿಸ್ಟ್ ಸರ್ಕಾರ ಮಾತ್ರ ಅಲ್ಲ, ಇತರ ಪ್ರಾಂತಗಳ ಕಾಂಗ್ರೆಸ್ ಸರ್ಕಾರಗಳೂ ಇಂಥ ತಪ್ಪು ಮಾಡುತ್ತಿವೆ, ಎಂದು ನಾವು ಈ ಮೊದಲು ಅರಿಕೆ ಮಾಡಿದ್ದುಂಟು. ಇದಕ್ಕೆ ಒಳ್ಳೆಯ ನಿದರ್ಶನ ನಮ್ಮ ನೆರೆಯ ಮದರಾಸ್ ಪ್ರಾಂತದ ಕಾಂಗ್ರೆಸ್ ಸರ್ಕಾರ.

'ಹಿಂದು' ಪತ್ರಿಕೆಯ ಕಚೇರಿಯಲ್ಲಿ ಒಬ್ಬ ಸಂಬಳಗಾರ ಮೇಲ್ಪಟ್ಟವರ ಆಜ್ಞೆಯನ್ನು ಉಲ್ಲಂಘಿಸಿ ನಡೆದು ಅಧಿಕಾರಿಗಳು ಅವನನ್ನು ಕೆಲಸದಿಂದ ತೆಗೆದರು. ಈ ಸಲುವಾಗಿ ಒಂದು ಸ್ಟ್ರೈಕ್ ಆರಂಭವಾಯಿತು. ಅಷ್ಟು ಜನ ಹೊರಗೆ ಬಂದು, ಇನ್ನಷ್ಟು ಜನ ಕೆಲಸಮಾಡಲು ಇಷ್ಟವುಳ್ಳವರಾಗಿ, ಕೆಲಸಗಾರರಲ್ಲಿ ಎರಡು ಪಂಗಡ ಆಯಿತು. ಹೊರಕ್ಕೆ ಬಂದ ಜನ ಪತ್ರಿಕೆ ಕೆಲಸ ನಡೆಯದಂತೆ ಮಾಡುವುದಕ್ಕೆ, ಒಳಗೆ ನಿಂತ ತಮ್ಮ ಸಹೋದ್ಯೋಗಿಗಳಿಗೆ ಅನನುಕೂಲ ಆಗುವುದಕ್ಕೆ, ಹೊರಗಡೆ ನಿಂತು ಕೂಗುವುದು, ಗದ್ದಲ ಮಾಡುವುದು, ಒಳ ಹೋಗುವವರನ್ನು ತಡೆಯುವುದು, ಪತ್ರಿಕೆಯ ಗಾಡಿಗಳು ಹೋಗುವುದಕ್ಕೆ ಅಡ್ಡಿ ಮಾಡುವುದು, ಮುಂತಾದ ಕಾರ್ಯಕ್ರಮಗಳನ್ನು ಆರಂಭಿಸಿದರು. ಇಂಥ ವೇಳೆಯಲ್ಲಿ ಸ್ಟ್ರೈಕ್ ಮಾಡಿರುವವರು ಬಲ ಪ್ರಯೋಗ ಮಾಡದೆ ಅಸಮ್ಮತಿಯನ್ನು ಎಷ್ಟು ಸೂಚಿಸಿದರೂ ತಪ್ಪೆನ್ನುವಂತಿಲ್ಲ. ಬಲ ಪ್ರಯೋಗ ಮಾಡುವುದಕ್ಕೆ ಆರಂಭಿಸಿದೊಡನೆಯೇ ಸರ್ಕಾರ ಅವರನ್ನು ತಡೆಯಬೇಕು, ಸಂಸ್ಥೆಯ ಮಿತ್ರ ಪಕ್ಷ ಸುರಕ್ಷಿತವಾಗಿ ದುಡಿಯುವುದನ್ನು ಸಾಧ್ಯಮಾಡಬೇಕು.

ಮದರಾಸ್ ನಗರದ ಪೋಲೀಸ್ ಅಧಿಕಾರಿಗಳು ಮೊದಲಲ್ಲಿ ಹೀಗೆ ನಡೆದುಕೊಂಡರು; ಒಂದು ದಿನ ವಾದಮೇಲೆ ಹೊರಗೆ ಬಂದಿದ್ದ ಕೆಲಸಗಾರರ ಒರಟಾಟವನ್ನು ಸುಮ್ಮನೆ ನೋಡುತ್ತ ನಿಂತರು.

ಕೆಲಸ ಕಳೆದುಕೊಂಡ ಅಧಿಕಾರಿ ಒಂದು ಕೆಲಸ

ಗಾರರ ಸಂಘಕ್ಕೆ ಸೇರಿದವನು. ಆ ಸಂಘದ ಅಧ್ಯಕ್ಷರು ಒಬ್ಬ ಕಾಂಗ್ರೆಸ್ ಪ್ರಮುಖರು. ಈ ಕಾರಣದಿಂದ ಸರ್ಕಾರದ ಮುಖ್ಯ ಅಧಿಕಾರಿಗಳು ಏನೊ ಸೂಚನೆ ಕೊಟ್ಟದ್ದರಿಂದ ಪೊಲೀಸರು ತಟಸ್ಥರಾದರು ಎಂದು ಜನರಿಗೆ ಕಂಡಿತು.

'ಸ್ಟ್ರೈಕ್' ಪಕ್ಷದ ಒರಟಾಟದಿಂದ ಮಿತ್ರಪಕ್ಷದ ಕೆಲಸಗಾರರಿಗೆ ಬಹಳ ಕಷ್ಟವಾಗಿ ಕಚೇರಿಯ ಯಜಮಾನರು ಪೊಲೀಸ್ ಮುಖ್ಯಾಧಿಕಾರಿಯನ್ನು ಕಚೇರಿಗೆ ಬರಬೇಕೆಂದು ಬೇಡಿ, ಬರಮಾಡಿಕೊಂಡು, ಪ್ರತಿಪಕ್ಷದ ಒರಟಾಟದಿಂದ ನಿಮಗೆ ತೊಂದರೆ ಆಗದಂತೆ ನಾವು ನೋಡಿಕೊಳ್ಳುತ್ತೇವೆಂದು ಈ ಜನರಿಗೆ ಧೈರ್ಯ ಹೇಳಿ ಎಂದು ಕೇಳಿದರಂತೆ. ಆ ಅಧಿಕಾರಿ, ನೀವು ಕೆಲಸ ಮಾಡಿ, ಎಂದು ಈ ಜನರಿಗೆ ಆಜ್ಞೆಮಾಡಿ ಎಂದು ಈ ಯಜಮಾನರು- ತನ್ನನ್ನು ಕೇಳುತ್ತಿದಾರೆ ಎಂದು ತಿಳಿದುಕೊಂಡರಂತೆ. ಇದು ಸಾಧ್ಯವಲ್ಲ ಎಂದು ಅವರು ಉತ್ತರ ಕೊಟ್ಟರು. ಕಚೇರಿಯ ಯಜಮಾನ ಪತ್ರಿಕೆ ನಡಸುವುದನ್ನು ನಿಲ್ಲಿಸಿದರು. ಪತ್ರಿಕೆ ಹತ್ತು ದಿನ ನಿಂತಿದ್ದು ಏನೊ ಒಪ್ಪಂದವಾಗಿ 'Strike' ಕೊನೆಗೊಂಡಿತು; ಪತ್ರಿಕೆ ಮರಳಿ ಹೊರಟಿತು.

ಮದರಾಸ್ ಸರ್ಕಾರದ ಸಮರ್ಥನೆ

ಈ ವಿಷಯ ಪ್ರಾಂತದ ಪ್ರತಿನಿಧಿಸಭೆಗಳಲ್ಲಿ ಚರ್ಚೆಗೆ ಬಂದಾಗ ಸರ್ಕಾರದಿಂದ ಅದು ತನ್ನ ಹೊಣೆಯನ್ನು ಸರಿಯಾಗಿ ಅರಿತುಕೊಂಡಿದೆ ಎಂದು ತೋರಿಸುವಂತೆ ಉತ್ತರಗಳು ಬರಲಿಲ್ಲ.

ಹಿಂದೂ ಪತ್ರಿಕೆಯ ವಿಷಯ ಅದರ ಚರಿತ್ರೆಯ ಕಾರಣದಿಂದ ನಮಗೆ ತುಂಬ ಗೌರವವಿದೆ. ಆದರೆ ಅದು ಅದರ ಕೆಲಸಗಾರರಿಗೆ, ಅದರ ಬರಹಗಾರರಿಗೆ, ಸರಿಯಾದ ವೇತನಗಳನ್ನು ಕೊಡುತ್ತಿದೆ ಎಂದು ನಮಗೆ ತೋರಿಲ್ಲ. ಆದ್ದರಿಂದ ನಾವು ಈ ಸಂದರ್ಭದಲ್ಲಿ ಪತ್ರಿಕೆಯ ಪಕ್ಷವಹಿಸಿ ಮಾತನಾಡಿಯೇವು ಎಂದು ಯಾರಿಗೂ ಶಂಕೆ ಬೇಕಿಲ್ಲ.

ಅಷ್ಟೇ ಸ್ಪಷ್ಟವಾಗಿ ನಮಗೆ ಕಚೇರಿಯಲ್ಲಿ ತಪ್ಪಿ ನಡೆದ ಆ ಸಂಬಳಗಾರನ ನಡತೆಯೂ ಅಸಮ್ಮತವೆ. ಅವನನ್ನು ಕೆಲಸದಿಂದ ತೆಗೆದ ಕಾರಣದಿಂದ ಒಂದು ಮುನ್ನೂರು ಜನ ಕೆಲಸಗಾರರು ಸ್ಟ್ರೈಕ್ ಮಾಡಿದ್ದೂ ತಪ್ಪು ಎಂದು ನಮಗೆ ತೋರುತ್ತಿದೆ.

ಇದಾದಮೇಲೆ ಸ್ಟ್ರೈಕ್ ಮಾಡಿದ ಜನ, ಮತ್ತು ಅವರ ಪಕ್ಷವಹಿಸಿ ಸೇರಿದ ಗುಂಪು, ಕಚೇರಿಯಿಂದ ಬರಹೋಗುವ ಜನರಿಗೆ, ಗಾಡಿಗಳಿಗೆ, ಯಾರಿಗೂ ಕಾಣುವಂತೆ ತೊಂದರೆ ಮಾಡಿದಾಗ ಪೊಲೀಸ್‌ನವರು ಸುಮ್ಮನೆ ಇದ್ದದ್ದು ಎನ್ನುವುದು ತೀರ ತಪ್ಪು ಎಂದು ನಮಗೆ ಕಾಣುತ್ತದೆ.

ಹಿಂದೂ ಪತ್ರಿಕೆಯ ಯಜಮಾನರು ಪೊಲೀಸ್ ಮುಖ್ಯಾಧಿಕಾರಿಯನ್ನು ಕರೆದು ಮಿತ್ರಪಕ್ಷದ ಕೆಲಸಗಾರರಿಗೆ ನೀವು ಕೆಲಸಮಾಡಿ ಎಂದು ಹೇಳಿಸಲು ಯತ್ನಿಸಿದರೆನ್ನುವುದು ನಮ್ಮ ಮನಸ್ಸಿಗೆ ನಂಬಲು ಅರ್ಹ ಅಲ್ಲ ಎಂದು ಕಾಣುತ್ತಿದೆ. ಮಿತ್ರಪಕ್ಷ ಮಿತ್ರವಾಗಿ ಇದ್ದೇ ಇದೆ. ಇದಕ್ಕೆ ಪೊಲೀಸ್ ಮುಖ್ಯಾಧಿಕಾರಿ ಮಿತ್ರವಾಗಿ ಇರು ಎಂದು ಹೇಳಬೇಕಾದದ್ದು ಏನಿತ್ತು?

ಮೇಲಾಗಿ, ಪತ್ರಿಕೆಯ ಯಜಮಾನ ಶ್ರೀ ಕಸ್ತೂರಿ ಶ್ರೀನಿವಾಸನ್ ಅವರು, ಬೇರೆ ಏನೇ ಆದರೂ ಇಂಥ ಅವಿವೇಕದ ವಿಜ್ಞಾಪನೆಯನ್ನು ಮಾಡುವ ಗಾಂಪರಲ್ಲ.

ಪೊಲೀಸ್ ಮುಖ್ಯಾಧಿಕಾರಿ ಅವರ ಮಾತನ್ನು ತಪ್ಪು ತಿಳಿದಿರಬೇಕು, ಅದನ್ನು ಕಾರಣ ಮಾಡಿಕೊಂಡು ಕಚೇರಿಯನ್ನು ಅಸಹಾಯವನ್ನಾಗಿ ಬಿಟ್ಟಿರಬೇಕು. ಈಗ ಸರ್ಕಾರ ಇವರ ಈ ತಿಳಿವಳಿಕೆಯನ್ನು ಬಳಸಿಕೊಂಡು ತಾನು ಚೆನ್ನಾಗಿ ನಡೆದೆನೆಂದು ತೋರಿಸಿಕೊಳ್ಳಲು ಯತ್ನಿಸುತ್ತಿರಬೇಕು.

ಮೊತ್ತದಲ್ಲಿ ಜನದ ಶಂಕೆ ಸರಿಯೆಂದು ಕಾಣುತ್ತದೆ. ಕಾಂಗ್ರೆಸ್ ಪಕ್ಷ ಕಟ್ಟಿರುವ ಸರ್ಕಾರ ಕಾಂಗ್ರೆಸ್ ಪ್ರಮುಖರು ಕಾರಣರಾಗಿರುವ ಚಳುವಳಿಗಳಿಗೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಯಾವುದೊ ವ್ಯಾಜದಿಂದ ನೆರವಾಗುತ್ತದೆ ಎಂದು ಸಾಮಾನ್ಯರು ಭಾವಿಸಿದರೆ ಈ ಸರ್ಕಾರ ಅದನ್ನು ತಪ್ಪು ಎಂದು ಖಂಡಿಸಿ ತೋರಿಸುವಂತಿಲ್ಲ.

ಅನುಭವ ಸಾಲದ 'ಡೆಮೊಕ್ರಸಿ'

ಮುಖ್ಯ ಇದರಿಂದೆಲ್ಲ ನಾವು ಗ್ರಹಿಸಬೇಕಾದದ್ದು ನಮಗೆ ಡೆಮೊಕ್ರಸಿಯಲ್ಲಿ (ಪ್ರಜಾಪ್ರಭುತ್ವದಲ್ಲಿ) ಇನ್ನೂ ಅನುಭವ ಸಾಲದು ಎನ್ನುವುದು.

ಆಗತಾನೆ ಪ್ರೌಢನಾಗಿ ಆಸ್ತಿಗೆ ಯಜಮಾನ

ನಾದ ೧೮ ವರುಷದ ತರುಣ ಎಲ್ಲ ವ್ಯವಹಾರವನ್ನೂ ಜಾಣನಾಗಿ ನಡಸುವುದು ಸಾಧ್ಯವಲ್ಲ. ಸೂತ್ರ ಹಿಡಿಯುವ ವಯಸ್ಸು ಬಂದರೂ ಅದನ್ನು ಹಿಡಿಯುವ ಜಾಣ್ಮೆ ಇನ್ನೂ ಬರಬೇಕಾಗಿದೆ ಎಂದು ಎಚ್ಚರದಿಂದ ನಡೆಯುವುದೇ ಅವನಿಗೆ ಕ್ಷೇಮ. ನಮ್ಮ ಜನ ಪ್ರಜಾಪ್ರಭುತ್ವದಲ್ಲಿ ಹೀಗೆ ಎಚ್ಚರದಿಂದ ನಡೆಯಬೇಕಾಗಿದೆ.

ಪ್ರಜಾಪ್ರಭುತ್ವದ ಸಾರ, ತಾಳ್ಮೆಯಿಂದ ನಡೆದ ವಿಚಾರವಿನಿಮಯ, ಎಚ್ಚರದಿಂದ ಮುಟ್ಟಿದ ನಿರ್ಣಯ, ಪಕ್ಷಗಳನ್ನು ಕುರಿತ ಪಕ್ಷಪಾತವಿಲ್ಲದೆ ಸರ್ವರಿಗೂ ಸುಖ ತರುವಂತೆ ನಡೆಯುವ ಆ ನಿರ್ಣಯದ ಅನ್ವಯ. ಒಂದು ವೀಣೆ ನುಡಿಸುವಂತೆ ಒಂದು ಕಾರು ನಡಸುವಂತೆ ಇದರಲ್ಲಿ ಕೌಶಲ ಎಚ್ಚರವಂತ ಅಭ್ಯಾಸದಿಂದ ಮಾತ್ರ ಬಂದೀತು.

ಇದನ್ನು ನಾವು ಮನಗಂಡರೆ ಈಗ ನಮ್ಮ ಡೆಮಾಕ್ರಸಿಯಲ್ಲಿ ತಲೆದೋರಿರುವ ಹತ್ತಾರು ಕೊರತೆ ಮರೆಯಾಗುತ್ತದೆ. ಪ್ರತಿನಿಧಿ ಸಭೆಗಳಿಗೆ ಜಾತಿ ಮತಗಳ ಕಾರಣದಿಂದಲ್ಲ, ಯೋಗ್ಯತೆಯ ಕಾರಣದಿಂದ ಆಯ್ಕೆ ಆಗುತ್ತದೆ. ಶಾಸನ ಸಭೆಗಳಲ್ಲಿ ಪಕ್ಷ ಪ್ರತಿಪಕ್ಷಗಳು ಏರ್ಪಡುವುದು ಚರ್ಚೆಯ ಸೌಕರ್ಯಕ್ಕಾಗಿ ಹೊರತು ವೈರಕ್ಕಾಗಿ ಅಲ್ಲ ಎನ್ನುವುದು ಮನಗಾಣುತ್ತದೆ. ತಮ್ಮ ಇಷ್ಟ ನಡೆಯಲಿಲ್ಲ ಎಂದು ಯಾವುದೋ ಪಕ್ಷ ಸಭಾತ್ಯಾಗ ಮಾಡುವುದಾಗಲಿ ಹೊರಗಡೆ ಗೊಂದಲ ಹೂಡುವುದಾಗಲಿ ಡೆಮಾಕ್ರಸಿಯ ಮಾರ್ಗ ಅಲ್ಲ ಎನ್ನುವುದು ತಿಳಿಯುತ್ತದೆ. ಸರ್ಕಾರಗಳು ತಮ್ಮ ಕರ್ತವ್ಯದ ಪಾಲನೆಯಲ್ಲಿ ಗಾಳಿ ಬೆಳಕಿನಂತೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತವೆ. 'ಸರ್ವೇಜನಾಃ ಸುಖಿನಃ ಭವಂತು' ಎನ್ನುವುದು ಬಾಯಲ್ಲಿ ನುಡಿಯುವ ಸೂತ್ರ ಮಾತ್ರ ಆಗದೆ, ದಿನದ ಬಾಳುವೆಯ ತಂತ್ರ ಆಗುತ್ತದೆ.

ಸದ್ಯದಲ್ಲಿ ನಮ್ಮ ನಾಯಕರಿಗೆ ಈ ವಿಷಯಕ್ಕೆ ಹೆಚ್ಚು ಗಮನ ಕೊಡುವುದಕ್ಕೆ ಅವಕಾಶ ದೊರಕುತ್ತಿಲ್ಲ. ಇದು ಹೀಗೆಯೇ ನಡೆದರೆ ಅನುಭವ ಸಾಲದವನ ಕೈಗೆ ಸಿಕ್ಕಿದ ಮೋಟಾರಕಾರು ಏನೊ ಆಗುವಂತೆ ನಮ್ಮ ಡೆಮಾಕ್ರಸಿ ಅನರ್ಥದಲ್ಲಿ ಮುಗಿಯುತ್ತದೆ. ಅದು ಹೀಗಾಗುವುದಕ್ಕೆ ನಾವು ಬಿಡಬಾರದು. ಪರಿಸ್ಥಿತಿಯನ್ನು ಸರಿಪಡಿಸುವುದು ಹೇಗೆ ಎಂದು ಎಲ್ಲ ಪಕ್ಷಗಳ ಪ್ರಮುಖರೂ ಸೇರಿ ವಿಚಾರ ನಡೆಸಬೇಕಾಗಿದೆ.

ಒಂದು ನಿದರ್ಶನ

ಅನುಭವ ಸಾಲದ ಪ್ರಜಾಪ್ರಭುತ್ವ ಕ್ರಮಕ್ಕೆ ಈಚೆಗೆ ಉತ್ತರ ಪ್ರದೇಶದಲ್ಲಿ ಪ್ರತಿಪಕ್ಷ ನಡೆದುಕೊಂಡ ರೀತಿ ಒಂದು ನಿದರ್ಶನ.

ಉತ್ತರ ಪ್ರದೇಶದಲ್ಲಿ ಆಹಾರ ಸಾಮಗ್ರಿ ಅತಿಯಾಗಿ ಬೆಲೆಯೇರಿ ಜನರಿಗೆ ತೊಂದರೆ ಆಗಿದೆ ಎಂದು ಕಾಣುತ್ತಿದೆ. ಶಾಸನಸಭೆಯಲ್ಲಿ ಪ್ರತಿಪಕ್ಷ ಈ ವಿಷಯವನ್ನು ಚರ್ಚೆಗೆ ತರಲು ಬಯಸಿತು.

ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ಮಾತು ಚರ್ಚೆಗೆ ಬಂದಾಗ ಯಾವುದೋ ಸಂಗತಿಗೆ ಸಭಾಧ್ಯಕ್ಷರು ಮಾತನಾಡುತ್ತಿದ್ದ ಭಾಷಣಕಾರ ಸದಸ್ಯರಿಗೆ ಒಂದು ಅಪ್ಪಣೆ ಕೊಟ್ಟರು. ಆತ ಅದನ್ನು ಗಮನಿಸಲಿಲ್ಲ. ಅಧ್ಯಕ್ಷರು ಒತ್ತಾಯ ಮಾಡಿದರು. ಅವರು ಕೇಳಲಿಲ್ಲ. ಅಧ್ಯಕ್ಷರು, ನನ್ನ ಮಾತನ್ನು ಉಲ್ಲಂಘಿಸಿದೀರಿ ನೀವು ಹೊರಕ್ಕೆ ಹೋಗಬೇಕು, ಎಂದರು. ಭಾಷಣಕಾರರು ಲಕ್ಷಿಸಲಿಲ್ಲ. ಗೊಂದಲವಾಯಿತು. ಅಧ್ಯಕ್ಷರು ಎದುರಾಳಿಯನ್ನು ಬಲವಂತದಿಂದ ಹೊರಗೆ ಹಾಕಲು ಯತ್ನಿಸಿದರು. ಆದರೆ ಅವರು ಅಲ್ಲಿಯೇ ಮಲಗಿದರು. ಸಭಾಧ್ಯಕ್ಷರು ರಕ್ಷಕದಳವನ್ನು ಬರಮಾಡಿ ಈತನನ್ನೂ ಇವರ ಜೊತೆಯ ಜನರನ್ನೂ ಹೊರಕ್ಕೆ ಹಾಕಿದರು.

ಇದಿಷ್ಟೂ ಪತ್ರಿಕೆಗಳಲ್ಲಿ ವರದಿಯಾದ ಮಾತು. ವಿವರ ಎಷ್ಟು ಸರಿಯೋ ಎಷ್ಟು ಸರಿಯಲ್ಲವೋ ನಾವು ಕಾಣೆವು.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕೂಡ ಇಂಥ ಗೊಂದಲ ನಡೆದದ್ದುಂಟು. ಆದರೆ ಇಂಥ ಸಣ್ಣ ವಿಷಯಕ್ಕಲ್ಲ. ಯಾವುದೋ ಮಹತ್ತತ್ವ, ಮಹಾಸೂತ್ರ, ಒಂದು ತೊಡಕಿಕೊಂಡಿರುವಾಗ ಪ್ರತಿಪಕ್ಷದವರು ಹೀಗೆ ಹಟ ಮಾಡಿದ್ದೂ ಅಧ್ಯಕ್ಷರಾದವರು ಅವರನ್ನು ಹಟದಿಂದ ಎದುರಿಸಿದ್ದೂ ಉಂಟು. ನಾವು ಇಲ್ಲಿ ಇಂಥ ಗೊಂದಲ ಮಾಡುತ್ತಿರುವುದು ತೀರ ಅಲ್ಪ ಕಾರಣಗಳಿಗಾಗಿ. ಇಷ್ಟು ದೂರ ಹೋಗುವ ಮುನ್ನ, ನಾವು ನಡೆಯುತ್ತಿರುವ ದಾರಿ ಸರಿಯೇ ಎಂದು ಪರಾಮರ್ಶಿಸುವುದು ಒಳ್ಳೆಯದು ಎಂದು ನಮಗೆ ತೋರುತ್ತಿದೆ.

ಜನರಿಗೆ ಅನ್ನ ಬೇಕು, ಅದರ ಬೆಲೆ ಅತಿಯಾಗಬಾರದು, ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವೇನಿದೆ? ಸರ್ಕಾರ ಕೈಗೊಂಡಿರುವ ಕ್ರಮ ಸಾಲದು ಎಂದು

ಪ್ರತಿಪಕ್ಷಕ್ಕೆ ಕಾಣಬಹುದು. ಹಾಗಿದ್ದರೆ ಇವರು ತಕ್ಕ ಸೂಚನೆಯನ್ನು ಕೊಡಬಹುದು. ಸೂಚನೆ ಬಂದಾಗ ಸರ್ಕಾರ ಶ್ರದ್ಧೆ ವಹಿಸಿದೆಯೋ ಇಲ್ಲವೋ ಎಂದು ನೋಡಬಹುದು. ವಹಿಸಲಿಲ್ಲ: ಶ್ರದ್ಧೆ ವಹಿಸುವಂತೆ ಮಾಡುವುದಕ್ಕೆ ಯತ್ನಿಸಬಹುದು ; ಮೊದಲ ಹೆಜ್ಜೆಯಲ್ಲೇ ಮುಷ್ಕರ ಹೂಡುವುದು ಇಂಥ ಸಂಗತಿಯಲ್ಲಿ ಗುರಿಯನ್ನು ಸಾಧಿಸುವ ದಾರಿಯಲ್ಲ ; ಎದುರಾಳಿಯನ್ನು ದುಷ್ಟ ಎಂದು ತೋರುವುದಕ್ಕೆ ಮಾತ್ರ ದಾರಿಯಾಗಬಹುದು.

ಕೇಂದ್ರ ಶಾಸನ ಸಭೆ

ಪ್ರಾಂತಗಳ ಶಾಸನ ಸಭೆಗಳು ಹೇಗೇ ಇರಲಿ ಕೇಂದ್ರ ಶಾಸನಸಯಾದರೂ ಆದರ್ಶವಾಗುವ ರೀತಿಯಲ್ಲಿ ನಡೆಯುತ್ತಿದೆಯೇ ಎಂದರೆ ನನಗೆ ಈ ವಿಷಯದಲ್ಲೂ ತೀರಾ ಸಮಾಧಾನವಾಗಿರುವ ಪುಣ್ಯ ಇಲ್ಲವಾಗಿದೆ.

ಕಮ್ಯುನಿಸ್ಟ್ ಪಕ್ಷದ ಸದಸ್ಯರು ಹಾಗಿರಲಿ ; ಅವರು ಯಾವಾಗಲೂ ಒಂದು ರೀತಿಯಲ್ಲಿ ಅತಿರೇಕವನ್ನು ಉಪಾಸಿಸುವ ಜನ. ಇಂಥ ಅತಿರೇಕಕ್ಕೆ ಹೋಗದ ಮಧ್ಯಸ್ಥ ಮನೋಧರ್ಮದ ಪಿ. ಎಸ್. ಪಿ. ಪಕ್ಷ ಕೂಡ ಕಟುವಾಗಿ ಮಾತನಾಡುತ್ತದೆ ; ಸಭೆಯ ಅಧ್ಯಕ್ಷರು ಅದಕ್ಕೆ ಎದುರಾಳಿ ಎಂಬಂತೆ ಉತ್ತರ ಕೊಡುತ್ತಾರೆ. ದೇಶದಲ್ಲಿ ಕೃಪಾಲಾನಿ ಅನಂತಶಯನಂ ಅಯ್ಯಂಗಾರ್ ಇವರಷ್ಟು ಅನುಭವದ, ತಿಳಿವಳಿಕೆಯ, ರಾಜಕೀಯ ನಾಯಕರು ಬಹು ಜನರಿಲ್ಲ. ಇಂಥ ಬಲ್ಲ ಜನ ಒಬ್ಬರಿಗೊಬ್ಬರು ವಿರೋಧಿಗಳಂತೆ ಮಾತನಾಡುವುದು ನನಗೆ ಭಯವನ್ನುಂಟುಮಾಡಿದೆ.

ಇಷ್ಟು ಜನದಲ್ಲಿ ಯಾವ ಹೊತ್ತಿನಲ್ಲೂ ಯಾವ ಮಾತಿನಲ್ಲೂ ಒಂದು ಕ್ಷಣ ತೂಕ ತಪ್ಪಿದರೂ ಇನ್ನೊಂದು ಕ್ಷಣದಲ್ಲಿ ಮತ್ತೆ ಅದನ್ನು ಹಿಡಿದು ಹಿಂದಾಗಿ ನಿಲ್ಲಬಲ್ಲವರು ಪಂಡಿತ ನೆಹರೂ ಒಬ್ಬರು. ನಾವು ಡೆಮಾಕ್ರಸಿಯನ್ನು ಸರಿಯಾಗಿ ಅಭ್ಯಾಸ ಮಾಡುವುದಾದರೆ ನಿಜದಲ್ಲಿ ಅದನ್ನು ನಮಗೆ ಕಲಿಸಬಲ್ಲವರಾದವರು ನೆಹರು ಒಬ್ಬರೆ.

ಪಕ್ಷದ ದೃಷ್ಟಿಯನ್ನು ಬಿಟ್ಟು ಲೋಕಸಭೆ ರಾಜ್ಯಸಭೆಗಳ ಎಲ್ಲ ಸದಸ್ಯರನ್ನೂ ಒಂದುಕಡೆ ಕೂಡಿಸಿಕೊಂಡು ನಮ್ಮ ಶಾಸನ ಸಭೆಗಳು ಶುದ್ಧವಾದ ಡೆಮಾಕ್ರಸಿ ಮಾರ್ಗದಲ್ಲಿ ನಡೆಯುವುದು ಹೇಗೆ ಎಂಬುದನ್ನು ಕುರಿತು ಪಂಡಿತರು ಒಂದು ವಿಚಾರ ಗೋಷ್ಠಿ ನಡಸಿದರೆ ಇದ್ದೀತು.

ಶಾಸನ ಸಭೆಗಳ ಕ್ರಮವಾದ ಅಧಿವೇಶನಗಳಲ್ಲಿ ಪ್ರತಿಪಕ್ಷ ಸರ್ಕಾರವನ್ನು ಉರುಳಿಸುವುದಕ್ಕೆ ಪಟ್ಟು ಹಾಕುತ್ತಿರುತ್ತದೆ. ಅಲ್ಲಿ ಸರ್ಕಾರದ ಪ್ರಮುಖರು ಪ್ರತಿಯಾಗಿ ಪಟ್ಟು ಹಾಕಬೇಕಾಗುತ್ತದೆ. ಈ ಪಟ್ಟು ಹಾಕುವುದು ಈ ಪಟ್ಟು ತಪ್ಪಿಸಿಕೊಳ್ಳುವುದು ಪಕ್ಷಗಳ ಕಲ್ಯಾಣಕ್ಕೆ ಸಾಧಕವಾಗಬಹುದು. ದೇಶದ ಕಲ್ಯಾಣಕ್ಕೆ ಈ ಮನೋಧರ್ಮ ಸಾಲದು.

ನಮ್ಮ ರಾಷ್ಟ್ರದ ಸಾಲಗಳು

ಪಕ್ಷಗಳ ದೃಷ್ಟಿಯನ್ನು ಬಿಟ್ಟು ಒಟ್ಟು ದೇಶದ ಕಲ್ಯಾಣದ ದೃಷ್ಟಿಯಿಂದ ನಮ್ಮ ನಾಯಕರು ಈಗ ನೋಡಬೇಕಾಗಿರುವ ಒಂದು ಸಂಗತಿ ನಮ್ಮ ಅರ್ಥನೀತಿ.

ನಮ್ಮ ಜನಸಂಖ್ಯೆಗೆ ಬೇಕಾದ ಅನ್ನವನ್ನು ನಾವು ಬೆಳೆಯಬೇಕು ; ನಾವು ಬಳಸುವ ಸಾಮಾನು ಆದಷ್ಟನ್ನು ನಮ್ಮ ದೇಶದಲ್ಲಿ ಮಾಡಿಕೊಳ್ಳಬೇಕು: ಇವೆರಡನ್ನು ಮಾಡಿಕೊಳ್ಳುವುದಕ್ಕೆ ಹೊರದೇಶದಿಂದ ತೀರ ಅವಶ್ಯಕವಾದಷ್ಟು ಸಾಮಾನುಗಳನ್ನು ತರಿಸಿಕೊಳ್ಳಬೇಕು; ತೀರ ಅವಶ್ಯವಾದ ಹಣವನ್ನು ದಾನವಾಗಿಯೋ ಸಾಲವಾಗಿಯೋ ಪಡೆಯಬೇಕು.

ಹೀಗೆ ಮಾಡುವುದಕ್ಕೆ ನಮ್ಮ ರಾಷ್ಟ್ರ ಮೊದಲು ಒಂದು ಯೋಜನೆಯನ್ನು ಮಾಡಿತು. ಅದು ಮುಗಿದು ಈಗ ಎರಡನೆಯ ಯೋಜನೆಯನ್ನು ಮಾಡಿಕೊಂಡಿದೆ. ಆದರೆ ಇವನ್ನು ಮಾಡುವಲ್ಲಿ ಆತುರಪಟ್ಟು ಅತಿವೇಗದ ಹೆಜ್ಜೆಯನ್ನಿಟ್ಟು ಮುಗ್ಗರಿಸುವ ಸ್ಥಿತಿಗೆ ಬಂದಿದೆ.

ನಮ್ಮ ನೀತಿಯಲ್ಲಿ ಬೇರೆ, ಕಮ್ಯುನಿಸ್ಟ್ ಎಂದು ಹೇಳಿಕೊಳ್ಳದೆ ಕಮ್ಯುನಿಸಂ ಸೂಚಿಸುವ ಕ್ರಮಗಳನ್ನು ಕೈಗೊಂಡು ನಾವು ದೇಶದ ಜನರಲ್ಲಿ ಅನಿಶ್ಚಿತ ಸ್ಥಿತಿಯ ಒಂದು ಶಂಕೆಯನ್ನು ಮೂಡಿಸುತ್ತಿದೇವೆ.

ನಮ್ಮ ಯೋಗ್ಯತೆಗೆ ಮಿಂಚಿದ ಕಾರ್ಯಕ್ರಮವನ್ನು ಕೈಗೊಂಡು ನಮ್ಮ ಯೋಗ್ಯತೆಗೆ ಮಿಂಚಿದ ಸಾಲವನ್ನು ತೆಗೆದುಕೊಂಡು ದೇಶದ ಭವಿಷ್ಯವನ್ನು ಹೊರಗಿನ ಹಣವಂತ ರಾಷ್ಟ್ರಗಳಿಗೆ ಒತ್ತೆ ಮಾಡುತ್ತಿದೇವೆ.

ಮಾಡುತ್ತಿರುವ ವೆಚ್ಚವೆಲ್ಲ ಸರಿಯಾದ ಪ್ರತಿಫಲ ತರುತ್ತಿಲ್ಲ. ವೆಚ್ಚವನ್ನು ನೋಡಿಕೊಳ್ಳುವ ಏರ್ಪಾಡು ಸಾಲದು. ಈ ವೇಗದ ಬೆಳವಣಿಗೆಗೆ ಈ ಜನತೆ ಇನ್ನೂ ಸಿದ್ಧವಾಗಿಲ್ಲ.

ನಮ್ಮ ಅಧಿಕಾರಿ ವರ್ಗವೂ ಈ ವೇಗವನ್ನು ಸಹಿಸಿಕೊಳ್ಳಲಾರದು.

ಪಕ್ಷಗಳು ಪಕ್ಷಗಳಾಗಿ ಮಾತನಾಡುವುದನ್ನು ಬಿಟ್ಟು ಎಲ್ಲ ಪಕ್ಷಗಳೂ ಮಿತ್ರಭಾವದಿಂದ ಸೇರಿ ರಾಷ್ಟ್ರದ ಕಲ್ಯಾಣದ ದೃಷ್ಟಿಯಿಂದ ಹೊಸ ಅರ್ಥ ನೀತಿಯನ್ನು ರೂಪಿಸಿಕೊಳ್ಳುವುದು ಆವಶ್ಯಕ ಎಂದು ನಮಗೆ ತೋರುತ್ತಿದೆ.

ಪಾಕಿಸ್ತಾನ ಭರತವರ್ಷಗಳ ಗಡಿ

ನಮ್ಮ ರಾಷ್ಟ್ರ ಮತ್ತು ಪಾಕಿಸ್ತಾನ; ಪಂಡಿತ ನೆಹರು ಮಾಲಿಕ್ ನೂನು ಮಹಾಶಯರ ಮಧ್ಯೆ ನಡೆದ ಸಂಭಾಷಣೆಯ ಫಲವಾಗಿ, ಗಡಿಯ ವಿಷಯದಲ್ಲಿ ಒಂದು ಸಮಾಧಾನ ಸ್ಥಿತಿಗೆ ಬಂದಿವೆ. ಇದು ತುಂಬ ಸಂತೋಷದ ಸಂಗತಿ.

ಒಂದು ಪ್ಮೈಲಿ ನೆಲ ನಮಗಿರಬೇಕೆ ಅವರಿಗೆ ಹೋಗಬೇಕೆ ಎನ್ನುವುದು ಸಣ್ಣ ಮಾತು. ಎರಡು ಸೋದರ ರಾಷ್ಟ್ರ ದಿನ ಬೆಳಗಾದರೆ ಒಂದರಮೇಲೊಂದು ಗುಂಡು ಹಾರಿಸುತ್ತಿರುವುದು ಗಭೀರ ಪ್ರಸಂಗ. ಪಾಕಿಸ್ತಾನದ ಮುಖ್ಯಮಂತ್ರಿ ಒಳ್ಳೆಯ ಮನಸ್ಸು ಮಾಡಿ ನಮ್ಮ ರಾಷ್ಟ್ರದೊಂದಿಗೆ ಮೈತ್ರಿಯನ್ನು ಸಾಧಿಸಿದ ಬಗ್ಗೆ ಅಭಿನಂದನೆಗೆ ಅರ್ಹರಾಗಿದ್ದಾರೆ.

ನೂನ್ ಮಹಾಶಯರಿಗೆ ಈ ವಿಷಯದಲ್ಲಿ ತಕ್ಕಷ್ಟು ಬೆಂಬಲ ಇರಬಹುದು. ಆದರೆ ಇದನ್ನು ನಾವು ನಿಶ್ಚಯವಾಗಿ ಹೇಳುವಂತಿಲ್ಲ. ಮುಸ್ಲಿಂ ಲೀಗ್ ಅಂತೂ ಅವರಿಗೆ ವಿರೋಧವಾಗಿ ನಿಂತಿದೆ. ಭರತವರ್ಷದೊಂದಿಗೆ ಪಾಕಿಸ್ತಾನ ಸ್ನೇಹವಾಗಿರುವುದು ಪಾಕಿಸ್ತಾನದ ಸ್ವರೂಪಕ್ಕೇ ವಿರೋಧ ಎಂಬ ದೃಷ್ಟಿಯಿಂದ ಈಗಲೂ ನುಡಿಯುತ್ತ ನಡೆಯುತ್ತ ಇದೆ.

ನಮ್ಮ ರಾಷ್ಟ್ರದಂತೆಯೇ ಪಾಕಿಸ್ತಾನದ ಪ್ರಜಾ ಸಾಮಾನ್ಯದ ಸಲುವಾಗಿ ನಾವು ಸನ್ಮೆರಡು ರಾಷ್ಟ್ರಗಳ ಮಧ್ಯೆ ಈ ಒಂದು ವಿಷಯದಲ್ಲಿ ಹೇಗೆ ಹಾಗೆ ಉಳಿದ ವಿಷಯಗಳಲ್ಲೂ ಸಮಾಧಾನ ಸಿದ್ಧಿಸಲಿ ಎಂದು ಬಯಸಬೇಕಾಗಿದೆ.

ಪೂರ್ವ ಪಾಕಿಸ್ತಾನ

ನೆರೆಯ ರಾಷ್ಟ್ರದೊಂದಿಗೆ ಅಲ್ಲದೆ ರಾಷ್ಟ್ರದ ಒಳಗಡೆ ಕೂಡ ಪಾಕಿಸ್ತಾನ ಒಂದು ವಿಷ ಘಳಿಗೆಯಲ್ಲಿ ಸಿಕ್ಕಿಕೊಂಡಿದೆಯೋ ಎಂದು ಶಂಕೆ ಮೂಡುತ್ತದೆ.

ಪೂರ್ವ ಪಾಕಿಸ್ತಾನದಲ್ಲಿ ಗವರ್ನರು ಸರ್ಕಾರವನ್ನು ತಳ್ಳಿಹಾಕಿ, ರಾಷ್ಟ್ರಾಧ್ಯಕ್ಷರು ಗವರ್ನರನ್ನು ಕೆಲಸದಿಂದ ತೆಗೆದುಹಾಕಿ ಬೇರೊಬ್ಬ ಗವರ್ನರಾಗಿ, ಹೊಸದೊಂದು ಸರ್ಕಾರ ಆಗಿ ಪಕ್ಷ ಪ್ರತಿಪಕ್ಷಗಳ ಸ್ಪರ್ಧೆ ನಿರಂತರವಾಗಿ ನಡೆಯುತ್ತ ಬಂದಿದೆ.

ವಾರದ ಹಿಂದೆ ಪೂರ್ವ ಪಾಕಿಸ್ತಾನದ ಶಾಸನ ಸಭೆಯಲ್ಲಿ ಸರಕಾರ ಸಭಾಧ್ಯಕ್ಷರ ವಿಷಯಕ್ಕೆ ಅಸಮ್ಮತಿ ಸೂಚಿಸಿತು. ಗೊಂದಲವಾಗಿ ಆತ ಸಭೆಯನ್ನೇ ಬಿಡಬೇಕಾಯಿತು. ಮಾರನೆಯ ದಿವಸ ಸರ್ಕಾರದ ಪಕ್ಷದ ಸಭಾ ಉಪಾಧ್ಯಕ್ಷ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದ ಸಂದರ್ಭದಲ್ಲಿ ಪ್ರತಿಪಕ್ಷ ಗೊಂದಲನಾಡಿ ಹತ್ತು ಜನಕ್ಕೆ ಪೆಟ್ಟುಬಿದ್ದ ಹೊತ್ತಿನಲ್ಲಿ ಸಭಾಧ್ಯಕ್ಷನಿಗೆ ತುಂಬ ಘಾಯವಾಗಿ ಅವರನ್ನು ಆಸ್ಪತ್ರೆಗೆ ಸಾಗಿಸಬೇಕಾಯಿತು. ಅವರು ಅಲ್ಲಿ ತೀರಿಕೊಂಡರು.

ಪಾರ್ಲಿಮೆಂಟು, ಡೆಮಾಕ್ರಸಿ ಎಂಬ ಶಬ್ದಗಳನ್ನು ಅಪಹಾಸ್ಯಕ್ಕೆ ಗುರಿಮಾಡುವ ವರ್ತನೆ ಇವೆಲ್ಲ. ಸರ್ಕಾರ ಪ್ರತಿ ಪಕ್ಷದ ನಾಯಕರನ್ನು ಹಿಡಿದು ಬಂಧನದಲ್ಲಿಟ್ಟಿತು. ಈಚೆಗೆ ಮರಳಿ ಬಿಟ್ಟಿದೆ. ಮುಂದೆ ಈ ಗಲಭೆ ಏನಾಗಿ ಮುಗಿಯುವುದೋ ನೋಡಬೇಕು.

ಲೆಬನಾನ್ ರಾಜಕೀಯ

ಅಧ್ಯಕ್ಷ ಚಮೂನ್ ಅಮೆರಿಕದ ಸಹಾಯ ಬೇಡಿ ಐಸನ್ ಹೋವರ್ ಮಹನೀಯರು ಒಂದು ನೌಕಾದಳವನ್ನು ಲೆಬನಾನ್‌ನಲ್ಲಿ ಇಳಿಸಿದ ಈಚೆಗೆ ರಾಷ್ಟ್ರಾಧ್ಯಕ್ಷರ ಆಯ್ಕೆಯಾಗಿ ಚಮೂನ್ ಮಹನೀಯರು ವಿಶ್ರಾಂತಿಪಡೆದು ಚೇಹಾಬ್ ಎಂಬ ನಾಯಕರು ಅಧ್ಯಕ್ಷರಾಗಿದ್ದಾರೆ.

ಪಶ್ಚಿಮ ರಾಷ್ಟ್ರಗಳಿಗೆ ಒಲೆದರೆಂಬುದೇ ಅಧ್ಯಕ್ಷ ಚಮೂನ್‌ರವರ ತಪ್ಪು ; ಇವರು ಕ್ರಿಶ್ಚಿಯನ್ನರು. ರಾಷ್ಟ್ರದಲ್ಲಿ ಇವರ ಜನದ ಸಂಖ್ಯೆ ಕಡಮೆ. ಹೆಚ್ಚು ಸಂಖ್ಯೆಯ ಜನ ಮುಸ್ಲಿಮರು. ಅವರು ಅರಬ್ಬೀ ಜನತೆಯ ಸ್ವಾತಂತ್ರ್ಯಕ್ಕಾಗಿ ಹೋರುವವರು; ಚಮೂನರನ್ನು ಒಲ್ಲದೆ ದಂಗೆ ಎದ್ದು ಅವರನ್ನು ಅಟ್ಟಿದರು.

ಚೇಹಾಬ್ ಮುಸ್ಲಿಮರು, ದಂಗೆಯೆದ್ದ ಪಕ್ಷಕ್ಕೆ ಸಮ್ಮತರು. ಇವರು ಅಧ್ಯಕ್ಷರಾದ ಕಾರಣ ಕ್ರೈಸ್ತ ಪಕ್ಷ ಗೊಂದಲ ಮಾಡಿ ಲೆಬನಾನಿನ ಮುಖ್ಯ ನಗರದಲ್ಲಿ ಈ ವಾರದಲ್ಲಿ

ಹತ್ತಾರು ಜನ ಸತ್ತರು.

ಐಸನ್‌ಹೋವರ್ ಒಳ್ಳೆಯ ಮನುಷ್ಯರು. ಮೊತ್ತದಲ್ಲಿ ಅವರ ಆಶಯು ಒಳ್ಳೆಯದೇ ಎಂದು ಕಾಣಿಸುತ್ತದೆ. ಆದರೆ ಕರೆದದ್ದೇ ಸಾಕು ಎಂದು ಹತ್ತು ಸಾವಿರ ಅಮೆರಿಕನ್ ಜನರನ್ನು ಲೆಬನಾನ್‌ನಲ್ಲಿ ಇಳಿಸಿದ ಹೊತ್ತಿನಲ್ಲಿ ಇವರು ಜಾಣರಾಗಿ ನಡೆದರು ಎಂದು ನಾವು ಹೇಳಲಾರೆವು.

ಈ ಜನ ಸಹಾಯಕ್ಕಿದ್ದಾರೆಂದೇ ಚಮೂನ್ ಪಕ್ಷ ಈ ಮಂಗಾಟವನ್ನು ಆಡುತ್ತಿದೆ ಎಂದು ಕಾಣುತ್ತಿದೆ. ತಿಂಗಳ ಹಿಂದೆ ಬಂದ ಅಮೆರಿಕನ್ ತಿಂಗಳಾದ ಮೇಲೆ ಹಿಂದಕ್ಕೆ ಹೋಗುತ್ತಾನೆ. ಆದರೆ ರಾಷ್ಟ್ರದಲ್ಲಿ ಪಕ್ಷಗಳು ಒಂದಕ್ಕೆ ಒಂದು ವಿರೋಧವಾಗಿ ಗೊಂದಲ ಮಾಡುವ ಸಂಪ್ರದಾಯ ಬೇರೂರಿತೆಂದರೆ ರಾಷ್ಟ್ರ ಹಾಳಾಯಿತು.

ಕೊರಿಯಾದಲ್ಲಿ, ಇಂಡೊ ಚೀನಾದಲ್ಲಿ, ಜರ್ಮನಿಯಲ್ಲಿ, ಸೈಪ್ರಸ್‌ನಲ್ಲಿ, ಜಗಳಗಳನ್ನು ಹುಟ್ಟಿಸಿ ರಾಷ್ಟ್ರಗಳನ್ನು ತುಂಡು ಮಾಡಿದ ಜನ ನಾಳೆ ಲೆಬನಾನೂ ಎರಡು ತುಂಡಾಗಲಿ ಎಂದು ಹೇಳಿದರೆ ಆಶ್ಚರ್ಯವಿಲ್ಲ.

'Divide and Rule' ಸೂತ್ರದ ಅಪಾಯ ಇಲ್ಲಿದೆ. 'Divide' ಏನೊ ಆಗುತ್ತದೆ. ಈ ಹೊರಗಿನ ಮನುಷ್ಯ ಎಂದೆಂದಿಗೂ 'Rule' ಮಾಡಲು ಸಾಧ್ಯವಿಲ್ಲ.

ಆಲ್ಜೀರಿಯಾ ಸಮಸ್ಯೆ

ಏನಾದರೂ ಮಾಡಿ ಆಲ್ಜೀರಿಯಾವನ್ನು ತನ್ನ ಕೈಯಲ್ಲಿರಿಸಿಕೊಳ್ಳಬೇಕೆಂದು ಫ್ರಾನ್ಸ್ ಯತ್ನಿಸುತ್ತಿದೆ. ಫ್ರಾನ್ಸಿನ ಹೊಸ ಮುಖ್ಯಮಂತ್ರಿ ಡೀಗಾಲ್ ಮಹಾಶಯರು ಆಲ್ಜೀರಿಯದ ಜನಕ್ಕೆ ಸಮಸಮ ಅಧಿಕಾರವನ್ನು ಕೊಟ್ಟು ಆಲ್ಜೀರಿಯಾ ಫ್ರಾನ್ಸ್ ಒಂದು ರಾಷ್ಟ್ರ ಆಗಿ ಬಾಳುವ ಒಂದು ವ್ಯವಸ್ಥೆಯನ್ನು ಜನತೆಗೆ ಸೂಚಿಸಿದರು.

ಫ್ರೆಂಚ್ ಜನಕ್ಕೆ ಇದು ಒಳ್ಳೆಯದು, ಆದರೆ ಆಲ್ಜೀರಿಯಾದ ಜನಕ್ಕೆ ಇದು ಅಷ್ಟು ಸುಖ ಅಲ್ಲ. ಆಲ್ಜೀರಿಯಾ ಸ್ವತಂತ್ರವಾದರೆ ಫ್ರೆಂಚ್‌ರ ವಸತಿಕಾರ ಅಲ್ಪಸಂಖ್ಯೆಯವನಾಗುತ್ತಾನೆ. ಆಲ್ಜೀರಿಯಾದ ನಿಜ ನಿವಾಸಿ ಜನ ಹೆಚ್ಚು ಸಂಖ್ಯೆಯವರಾಗಿ ಅದರ ವ್ಯವಹಾರವನ್ನು ನೋಡಿಕೊಳ್ಳಬಹುದು. ಆಲ್ಜೀರಿಯಾ ಫ್ರಾನ್ಸ್ ಒಂದು ರಾಷ್ಟ್ರ ಆದರೆ ಫ್ರೆಂಚ್ ಜನ ಹೆಚ್ಚು ಸಂಖ್ಯೆಯವರಾಗಿ ಆಲ್ಜೀರಿಯಾದ ನಿಜನಿವಾಸಿಗಳು ಸರ್ವಕಾಲಕ್ಕೂ ಅಲ್ಪಸಂಖ್ಯಾಕರ ಸ್ಥಿತಿಯಲ್ಲಿ ನಿಲ್ಲಬೇಕಾಗುತ್ತದೆ.

ಆಲ್ಜೀರಿಯಾದ ಜನತೆಗೆ ಇದು ಒಲ್ಲದೆ ಹೋಗುವುದು ಸಹಜವಾಗಿದೆ. ಹೀಗಾಗಿ ಆಲ್ಜೀರಿಯಾದಿಂದ ಹೊರಗಿರುವ ಅಲ್ಲಿಯ ರಾಜಕೀಯ ನಾಯಕರು ವಾರದ ಹಿಂದೆ ಕೈರೋದಲ್ಲಿ ಸ್ವತಂತ್ರ ಆಲ್ಜೀರಿಯಾ ಸರ್ಕಾರ ಎಂದು ಒಂದು ಸರ್ಕಾರವನ್ನು ನಿರ್ಮಿಸಿ ಒಂದು ಘೋಷಣೆಯನ್ನು ಹೊರಡಿಸಿದರು.

ಈಜಿಪ್ಟ್ ಅಧ್ಯಕ್ಷ ನಾಸೆರ್ ಇವರಿಗೆ ಸಹಾಯ ಎಂದು ಹೇಳಬೇಕಾಗಿಲ್ಲ. ಅವರ ಹಿಂದೆ ಸೋವಿಯಟ್ ಸರ್ಕಾರ ಇರುವುದೂ ನಿಶ್ಚಯವೇ. ಹೊಸ ಸರ್ಕಾರ ನಿರ್ಮಾಣ ಆದ ಒಡನೆ ನಾಲ್ಕು ಅರಬ್ಬೀ ರಾಷ್ಟ್ರಗಳು ಅದನ್ನು ಒಪ್ಪಿಕೊಂಡದ್ದು ಆಯಿತು.

ಹೊಸ ಸರ್ಕಾರವನ್ನು ಫ್ರಾನ್ಸ್ ಒಪ್ಪಿಕೊಳ್ಳಲಾರದು ಎಂಬುದು ಸ್ಪಷ್ಟವಾಗಿಯೇ ಇದೆ. ಲೋಕದ ಶಾಂತಿ ಭಂಗವಾಗುವುದಕ್ಕೆ ಒಂದು ಕಾರಣ ಹೀಗೆ ಉಗ್ರರೂಪವನ್ನು ತಾಳುತ್ತಿದೆ.

ಕ್ವೇಮಾಯ್ ದ್ವೀಪ

ಲೋಕದ ಶಾಂತಿಗೆ ಭಂಗತರುವ ಇನ್ನೊಂದು ಸಂದರ್ಭವನ್ನು ಕುರಿತು ಈ ಮೊದಲೆ ಎರಡು ಮಾತನ್ನು ಹೇಳಿ ಆಗಿದೆ. ಇದು ಕ್ವೇಮಾಯ್ ದ್ವೀಪ ಚೀನಾ ಕೈಯಲ್ಲಿರಬೇಕೆ, ಫಾರ್ಮೋಸಾ ಜೊತೆಗೆ ಇರಬಹುದೆ ಎನ್ನುವುದು.

ಕ್ವೇಮಾಯ್ ಮತ್ತು ಜೊತೆಯ ದ್ವೀಪಗಳು ಚೀನಾದ ತೀರಕ್ಕೆ ತೀರ ಹತ್ತಿರ ಇವೆ. ಅವು ಚೀನಾದ ವಿರೋಧವಾದ ಚಿಯಾಂಗ್ ಕೈಷೇಕರ ಕೈಯಲ್ಲಿರುವುದು ಅಪಾಯಕರ.

ಚೀನಾ ಈ ದ್ವೀಪಗಳನ್ನು ಚಿಯಾಂಗ್ ಕೈಷೇಕರ ಕೈಯಿಂದ ತಪ್ಪಿಸಲು ಯತ್ನ ನಡಸಿದೆ. ಅಮೇರಿಕ ಚಿಯಾಂಗ್ ಕೈಷೇಕರಿಗೆ ಸಹಾಯವಾಗಿ ನಿಂತು ಇಲ್ಲಿ ಒಂದು ಲೋಕ ಸಂಗ್ರಾಮ ಆರಂಭವಾಗಬಹುದೋ ಎಂಬ ಭಯವನ್ನು ಮೂಡಿಸಿದೆ.

ಈ ವೇಳೆಯಲ್ಲಿ U.N.O. ಸಂಸ್ಥೆ ಸಭೆ ಸೇರಿದೆ. ಒಂದಲ್ಲ ಒಂದು ರೀತಿಯಲ್ಲಿ ಅದರಲ್ಲಿ ಈ ಎಲ್ಲ ಮಾತು ಚರ್ಚೆ ಆಗುತ್ತಿದೆ. ಮಿಡುಕಿದರೆ ಹೊಡೆವೇನು ಎಂಬ ರಾಷ್ಟ್ರ

ದೊಂದಿಗೆ ಯಾರೂ ಮಿಡುಕ ಬೇಡ ಯಾರೂ ಹೊಡೆಯ ಬೇಡ ಎಂದು ಹೇಳುವ ಎಂಬತ್ತು ರಾಷ್ಟ್ರ ಸೇರಿ ಸಭೆ ಆಗಿರುವ ಈ ಸಂಸ್ಥೆ ಕಾದುವ ಜನಕ್ಕೆ ಬುದ್ಧಿ ಹೇಳಿ ಲೋಕದ ಶಾಂತಿಯನ್ನು ಕಾಯಲಿ ಎಂದು ನಾವು ಹಾರೈಸಬೇಕಾಗಿದೆ.

ಶ್ರದ್ಧಾಂಜಲಿ

ಸಾಹಿತ್ಯ ಸಂಸ್ಕೃತಿ ಸೇವಕರು ಮೂವರ ನಿಧನದಿಂದ ಜನತೆಗೆ ಆಗಿರುವ ನಷ್ಟ ಶೋಕವನ್ನು ನಾವು ಈಗ ಪ್ರಕಟಿಸ ಬೇಕಾಗಿದೆ.

ಶ್ರೀ ಬಂಕಿಂಚಂದ್ರರ ಕೃಷ್ಣಚರಿತೆಯನ್ನು ಕನ್ನಡಕ್ಕೆ ಭಾಷಾಂತರ ಮಾಡಿದ ಶ್ರೀ ಆರ್. ವ್ಯಾಸರಾಯರು ತಿಂಗಳು ಅರೆ ಹಿಂದೆ ತೀರಿಕೊಂಡರು. ಹೊಸ ತಲೆಮಾರಿನ ಜನರಿಗೆ ಇವರ ಹೆಸರು ಕನ್ನಡ ಸೇವಕರೆಂದು ಅಷ್ಟಾಗಿ ತಿಳಿಯದಿರ ಬಹುದು. ಆದರೂ ರಾಯರು ಮಾತೃಭಾಷೆಯ ಆರಾಧಕ ರಾಗಿ ಎಲ್ಲ ಹೊತ್ತಿನಲ್ಲೂ ಅದರ ಸೇವೆಗೆ ನೆರವಾಗಿ ನಿಂತಿದ್ದ ವರು.

ವಾಸ್ತು ಶಿಲ್ಪದ ಬಿ. ವೆಂಕೋಬರಾಯರು ತಿಂಗಳ ಸುಮಾರಿನಲ್ಲಿ ತೀರಿಕೊಂಡರು. ಶ್ರೀಯುತರು ಜೀವಮಾನ ವೆಲ್ಲ ಕನ್ನಡಕ್ಕಾಗಿ ದುಡಿದವರು. ಪರಿಷತ್ತಿನ ಕಾರ್ಯ ದರ್ಶಿಗಳಾಗಿದ್ದವರು. ಕನ್ನಡದ ಕೆಲಸವೆಂದರೆ ಸದಾ ಸಿದ್ಧವಾಗಿ ಮುಂದೆ ಬರುತ್ತಿದ್ದವರು.

ಬೆಂಗಳೂರು ನಗರದಲ್ಲಿ ಬಹು ಮುಖ್ಯವಾದ ಸಂಸ್ಕೃತಿ ಸೇವೆಯನ್ನು ನಡಸುತ್ತಿರುವ ಒಂದು ಮುಖ್ಯ ಸಂಸ್ಥೆ ಬಸವನಗುಡಿಯಲ್ಲಿರುವ The Indian Institute of World Culture. ಇದರ ಪ್ರವರ್ತಕರಾದ ವಾಡಿಯಾ ದಂಪತಿಗಳು ಆರ್ಯಧರ್ಮದ ಉಪಾಸಕರು, ಲೋಕ ಕಲ್ಯಾಣದ ಸೇವಕರು, ಈ ಮತ್ತು ಇಂಥ ಇತರ ಧರ್ಮ ಕಾರ್ಯಕ್ಕಾಗಿ ತಮ್ಮ ತನುಮನ ಧನವನ್ನು ಅರ್ಪಿಸಿ ದವರು. ಹೀಗೆ ಸಂಸ್ಕೃತಿಗೆ ಸೇವೆ ಸಲ್ಲಿಸಿದ ಶ್ರೀ ಬಿ. ಪಿ. ವಾಡಿಯಾ ಅವರು ಈ ತಿಂಗಳಲ್ಲಿ ತೀರಿಕೊಂಡರು.

ಸತ್ಯವಂತರನ್ನು ಸತ್ತರೆಂದು ಹೇಳಬೇಡ ಎಂದಿದ್ದಾನೆ ಸರ್ವಜ್ಞ. ಸಾಹಿತ್ಯ ಸಂಸ್ಕೃತಿಗಳ ಈ ಸೇವಕರು ಅವರು ಮಾಡಿದ ಕೆಲಸದಿಂದ ನಿತ್ಯರಾಗಿ ನಿಂತಿದ್ದಾರೆ. ಕನ್ನಡ ಜನ ಇವರ ಬಂಧುವರ್ಗಕ್ಕೆ ಸಮಾಧಾನವನ್ನು ಕೋರು ತ್ತದೆ; ತೀರಿಕೊಂಡವರ ಹೆಸರನ್ನು ಪ್ರೀತಿಯಿಂದ ನೆನೆ ಯುತ್ತದೆ.

ಬೆಂಗಳೂರು ಗವಿಪುರದ ವಿಸ್ತರಣದಲ್ಲಿರುವ ಜೀವನ ಕಾರ್ಯಾಲಯದ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗಾಗಿ
ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟದಲ್ಲಿ ಮುದ್ರಿತವಾಯಿತು—೧೯೫೮


CANARA SPRINGS
ಉತ್ತಮ ಬಾಳ್ವಿಕೆ
ಆಮದು ಪಡಿಸಿಕೊಂಡ ಅತ್ಯುತ್ತಮ ಉಕ್ಕಿನಿಂದ ತಯಾರಿಸಲ್ಪಟ್ಟಿರುವ ಕೆನರಾ ಸ್ಪ್ರಿಂಗ್ಸ್ ಉತ್ತಮ ಬಾಳುವಿಕೆಯುಳ್ಳದ್ದು. ಅತ್ಯಾಧುನಿಕ ತಂತ್ರಕೌಶಲ್ಯದಿಂದ ಮತ್ತು ಸಂಪೂರ್ಣ ಅನುಭವ ಪೂರ್ವಕ ತಯಾರಿಸಲ್ಪಟ್ಟಿದ್ದು, ಸರಿಯಾಗಿ ದೃಢೀಕರಿಸಿ ಹದಗೊಳಿಸಲ್ಪಟ್ಟಿದೆ; ದೀರ್ಘ ಬಾಳಿಕೆಗಾಗಿ 'ಶೋಟ್ ಪೀನ್' ಮತ್ತು ಪ್ರತಿಯೊಂದು ಸಂದರ್ಭದಲ್ಲೂ 'ಕ್ವಾಲಿಟಿ ಟೆಸ್ಟ್' ಮಾಡಲ್ಪಟ್ಟಿದೆ. ಉಪಯೋಗ ಮತ್ತು ಬಾಳ್ವಿಕೆಯಲ್ಲಿ ಕೆನರಾ ಸ್ಪ್ರಿಂಗ್ಸ್ ಅತ್ಯುತ್ತಮವೆಂದು ಪ್ರಸಿದ್ಧವಾಗಿದೆ.
ಆಯಾಸವನ್ನರಿಯದು
ಹೆಚ್ಚು ಹೊರಬಲ್ಲುದು
ದೀರ್ಘಕಾಲ
ಬಾಳಬಲ್ಲುದು
Canara
WORKSHOPS LTD.
ತಯಾರಕರು :
THE CANARA WORKSHOPS LIMITED
MANGALORE 1

JEEVANA, Bangalore, October 1958 Regd. No. M. 4634

ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಪ್ರಧಾನ ಕಛೇರಿ: ಉಡುಪಿ ಸ್ಥಾಪನೆ: 1925

ನೆರೆಯ ರಾಜ್ಯ ಕೇರಳದಲ್ಲಿ....

ತಾ. 24 ಅಗೋಸ್ತು 1958ರಂದು

ಕೈಮಗ್ಗದ ಬಟ್ಟೆ ಮತ್ತು ಪ್ಲೈವುಡ್ ತಯಾರಿಕೆಯ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ
ಕೇರಳದ ಕಣ್ಣಾನೂರು.

ಆರ್ಥಿಕ ವ್ಯವಹಾರದಲ್ಲಿ, ಕೈಗಾರಿಕೆಯಲ್ಲಿ ಕುಶಲರಾದ ಸರಳ
ಜೀವನಕ್ಕೆ ಪ್ರಸಿದ್ಧ ಹೊಂದಿದ ಈ ಭಾಗದ ಜನರಿಗೆ
ಆದರ್ಶ ಆರ್ಥಿಕ ಸೇವೆಯನ್ನು ನೀಡಬೇಕೆಂಬ
ಉತ್ತಮ ಉದ್ದೇಶದಿಂದ

ಸಿಂಡಿಕೇಟ್ ಬೇಂಕಿನ ಶಾಖೆಯೊಂದು

ಇಪ್ಪತ್ತೈದು ವರ್ಷಗಳ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿತು.
ಅಂದಿನಿಂದ ಆ ಭಾಗದ ಕೇರಳೀಯರ ಪ್ರೀತಿ ಆದರಗಳಿಗೆ ಪಾತ್ರವಾಗಿ, ಅವರ ಸುಖದುಃಖಗಳಲ್ಲಿ ಸಹಭಾಗಿಯಾಗಿ ಮರೆಯಲಾಗದ ಸೇವೆಯನ್ನು ಸಲಿಸುತ್ತಾ ಬಂದು ಇದೇ ಅಗೋಸ್ತು ಇಪ್ಪತ್ತನಾಲ್ಕರಂದು ತನ್ನೀ ಇಪ್ಪತ್ತೈದು ವರುಷಗಳ ಸಫಲ ಸೇವೆಯ ಸ್ಮರಣೆಗಾಗಿ, ತನ್ನ ಗ್ರಾಹಕರ ಸಂತೃಪ್ತಿಗಾಗಿ ಬೆಳ್ಳಿಹಬ್ಬವನ್ನು

ತಲಚೇರಿಯ ಬಿಶಪರಾದ
ರೈಟ್‌ರೆವೆರೆಂಡ್ ಡಾ. ಸೆಬೆಸ್ಟಿನ್ ವಲ್ಲೊಪಿಳ್ಳಿಯವರ
ಅಧ್ಯಕ್ಷತೆಯಲ್ಲಿ ಸೊಗಸಾಗಿ ಆಚರಿಸಿತು.

ಕೇರಳದಲ್ಲಿರುವ ನಮ್ಮ 13 ಶಾಖೆಗಳೂ ದಕ್ಷಿಣ ಭಾರತದಲ್ಲಿರುವ ಇತರ 100 ಶಾಖೆಗಳೂ ತಮ್ಮ ಸಹ ಸಂಸ್ಥೆಯಾದ ಕಣ್ಣಾನೂರು ಶಾಖೆಯ ಫಲಭರಿತ ಸೇವೆಗಾಗಿ ಅಭಿನಂದಿಸುವುವಲ್ಲದೆ " ಅತ್ಯುತ್ತಮ ಬೇಂಕಿಂಗ್ ಸೇವಾ " ಪ್ರತಿಜ್ಞೆಯನ್ನು ಪುನರುಚ್ಚರಿಸುವುವು.

The Canara Industrial & Banking Syndicate, Ltd.
UDIPI

೨೦೩—ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕ. ಸಾ. ಪ., ಬೆಂಗಳೂರು-೨—೧೧೫೦—೧-೧೦-೫೮